4.	ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿಗಳು– ಮೌಲ್ಯವರ್ಧಿತ ತೆರಿಗೆ ವಿಭಾಗ, ಆಡಳಿತ ಮತ್ತು ವಸೂಲಿ ವಿಭಾಗ, ಜಾರಿ ವಿಭಾಗ ಮತ್ತು ಜಾಗೃತಿ ವಿಭಾಗ, ಸಣ್ಣ ಕಾಯ್ದೆಗಳು, ಬೆಂಗಳೂರು. (ಮಂಗಳೂರು ವಿಭಾಗೀಯ ಕಛೇರಿ ವಸೂಲಿ ಹಾಗೂ ಜಾರಿ ವಿಭಾಗಕ್ಕೆ)	ಆಯಾ ವಿಭಾಗೀಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಸ್ಥಾನ) ಅಥವಾ ಪತ್ರಾಂಕಿತ ವ್ಯವಸ್ಥಾಪಕರು. ಅಧಿಸೂಚನೆ ದಿನಾಂಕ:07.11.2008ರ ಅನ್ವಯ ವಾಣಿಜ್ಯ ತೆರಿಗೆಗಳ ಅಧಿಕಾರಿ (ಜಾರಿ–3), ಮಂಗಳೂರು.	ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು.
5.	ರಾಜ್ಯದಲ್ಲಿರುವ ಎಲ್ಲಾ: 13 ಮೌಲ್ಯವರ್ಧಿತ ತೆರಿಗೆ ವಿಭಾಗ, ಆಡಳಿತ ಮತ್ತು ವಸೂಲಿ ವಿಭಾಗ, ಜಾರಿ ವಿಭಾಗ ಮತ್ತು ಜಾಗೃತಿ ವಿಭಾಗ ಮತ್ತು ಸಣ್ಣ ಕಾಯ್ದೆಗಳು, ಬೆಂಗಳೂರು. ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ಆಯುಕ್ತರು, ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ.	ಅವರವರ ಕಛೇರಿಗೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿ ಹೊಂದಿರುವ ಅಧಿಕಾರಿಯವರು	ಸಂಬಂಧಪಟ್ಟ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು.

ಪ್ರದೀಪ್ ಸಿಂಗ್ ಖರೋಲ

ಪಿ.ಆರ್.691 ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ) ಬೆಂಗಳೂರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವಭವನ, ಹೈಗ್ರೌಂಡ್ಸ್, ಬೆಂಗಳೂರು–560 001

ಪ್ರಕಟಣೆ

ಸಂಖ್ಯೆ:ಕರಾಆ/ಆಡಳಿತ/08/2009, ದಿನಾಂಕ:25ನೇ ಜುಲೈ, 2009

ವಿಷಯ: ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1ಎ) ರಡಿಯಲ್ಲಿ ಕರ್ನಾಟಕ ರಾಜ್ಯ ಆಯೋಗದ ಸದಸ್ಯರ ಆಯ್ಕೆ ಬಗ್ಗೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 09(ಬಿ) ರನ್ವಯ ರಚಿತವಾಗಿರುವ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿನ ಒಂದು ಸದಸ್ಯರ ಸ್ಥಾನವು ದಿನಾಂಕ:11.04.2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಖಾಲಿಯಾಗುತ್ತಿದ್ದು, ಸದರಿ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1)(ಬಿ), ಮೊದಲನೇ ಪರಂತುಕ ಹಾಗೂ ಅದರೊಂದಿಗೆ ಓದಿಕೊಳ್ಳುವ ವಿವರಣೆಯನ್ವಯ ಕನಿಷ್ಠ ಹತ್ತು ವರ್ಷಗಳ ಅವಧಿಯಲ್ಲಿ ಜಿಲ್ಲಾ ಮಟ್ಟದ ನ್ಯಾಯಾಂಗ ಅಥವಾ ಟ್ರಿಬ್ಯೂನಲ್‌ಗೆ ಸರಿಸಮಾನವಾದ ನ್ಯಾಯಾಲಯದಲ್ಲಿ ಪೀಠಾಧಿಕಾರಿಗಳು ಅಥವಾ ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವ, ಅರ್ಹರು ಮತ್ತು ಸೂಕ್ತರಾದವರಿಂದ ಅರ್ಜಿಯನ್ನು ಈ ಮೂಲಕ ನಿಗದಿತ ನಮೂನೆಯಲ್ಲಿ ಆಹ್ವಾನಿಸಲಾಗಿದೆ.

ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು, ಅರ್ಜಿ ನಮೂನೆಯನುಸಾರ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಯೊಂದಿಗೆ ಲಕೋಟೆಯಲ್ಲಿರಿಸಿ, ಸಂಬಂಧಪಟ್ಟ ಲಕೋಟೆಯ ಮೇಲ್ಭಾಗದಲ್ಲಿ **"ರಾಜ್ಯ ಅಯೋಗದ ಸದಸ್ಯರ ಸ್ಥಾನಕ್ಕೆ ಅರ್ಜಿ"** ಎಂದು ದಪ್ಪ ಅಕ್ಷರಗಳಲ್ಲಿ ಬರೆದು **ದಿನಾಂಕ:11ನೇ ಸೆಪ್ಟೆಂಬರ್ 2009ರ ಶುಕ್ರವಾರ ಸಂಜೆ 5–00 ಗಂಟೆಯೊಳಗೆ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–01,** ಇಲ್ಲಿಗೆ ಸಲ್ಲಿಸುವುದು.

ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಆಯೋಗದ ವೆಬ್‌ಸೈಟ್ http://kscdrc.kar.nic.in ರಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಸಂಬಂಧಪಟ್ಟ ಜಿಲ್ಲಾ ವೇದಿಕೆಯಲ್ಲಿ ಅಥವಾ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಒಂದು ಅರ್ಜಿಗೆ ರೂ.10–00 ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 16(1ಎ) ರಡಿಯಲ್ಲಿನ ಆಯ್ಕೆ
ಸಮಿತಿಯ ಅಧ್ಯಕ್ಷರ ಆದೇಶಾನುಸಾರ

ಪಿ.ಆರ್.696

ಎಸ್.ಎ.ಹಿದಾಯತ್‌ಉಲ್ಲಾ ಷರೀಫ್
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವಭವನ, ಹೈಗ್ರೌಂಡ್ಸ್, ಬೆಂಗಳೂರು–560 001

ಪ್ರಕಟಣೆ

ಸಂಖ್ಯೆ:ಕರಾಆ/ಆಡಳಿತ/08/2009, ದಿನಾಂಕ:25ನೇ ಜುಲೈ, 2009

ವಿಷಯ: ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1ಎ) ರಡಿಯಲ್ಲಿ ಜಿಲ್ಲಾ ವೇದಿಕೆಯ ಸದಸ್ಯರ ಆಯ್ಕೆ ಬಗ್ಗೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 09(ಎ) ರನ್ವಯ ರಚಿತವಾಗಿರುವ (1) ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ, 1ನೇ ಅಪರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ (ಮಹಿಳೆ) ಸ್ಥಾನವು ದಿನಾಂಕ:09.03.2010ರ ಅಪರಾಹ್ನದಿಂದ, (2) ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ (ಮಹಿಳೆ) ಸ್ಥಾನವು ದಿನಾಂಕ:23.03.2010ರ ಅಪರಾಹ್ನದಿಂದ, (3) ಬಿಜಾಪುರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:15.04.2010ರ ಅಪರಾಹ್ನದಿಂದ, (4) ಧಾರವಾಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:14.04.2010ರ ಅಪರಾಹ್ನದಿಂದ ಮತ್ತು (5) ಹಾಸನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನವು ದಿನಾಂಕ:27.04.2010ರ ಅಪರಾಹ್ನದಿಂದ ಜಾರಿಗೆ ಬರುವಂತೆ ಖಾಲಿಯಾಗುತ್ತಿದ್ದು, ಸದರಿ ಸದಸ್ಯರ (ಮಹಿಳೆ) ಮತ್ತು ಸದಸ್ಯರ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1)(ಬಿ) ರನ್ವಯ 35 ವರ್ಷ ವಯಸ್ಸಾಗಿರುವವರು, ಅಂಗೀಕೃತ ವಿಶ್ವವಿದ್ಯಾಲಯದ ಪದವೀಧರರಾಗಿರುವವರು ಮತ್ತು ನ್ಯಾಯ, ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವುದರ ಜೊತೆಗೆ ಕಾನೂನು, ಹಣಕಾಸು ವಾಣಿಜ್ಯ, ಲೆಕ್ಕ, ಕೈಗಾರಿಕೆ, ಸಾರ್ವಜನಿಕ ವ್ಯವಹಾರಗಳು ಮತ್ತು ಸಾರ್ವಜನಿಕ ಆಡಳಿತ ಇವುಗಳಲ್ಲಿ ಕನಿಷ್ಠ ಹತ್ತು ವರ್ಷಗಳ ಅನುಭವ ಹೊಂದಿರುವವರು ಜಿಲ್ಲಾ ವೇದಿಕೆಯ ಸದಸ್ಯರಾಗಲು ಅರ್ಹರಿರುವಂತಹವರಾಗಿರುತ್ತಾರೆ.

ಮೇಲಿನ ಅರ್ಹತೆಯನ್ನು ಹೊಂದಿರುವಂತಹ ಅಭ್ಯರ್ಥಿಗಳು ಯಾವ ಜಿಲ್ಲಾ ವೇದಿಕೆಯಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುತ್ತಾರೆಯೋ ಅಂತಹ ಜಿಲ್ಲಾ ವೇದಿಕೆಯ ಹೆಸರನ್ನು ನಿಗದಿತ ಅರ್ಜಿ ನಮೂನೆಯಲ್ಲಿ ನಮೂದಿಸಿ, ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಹಾಗೂ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲ್ಭಾಗದಲ್ಲಿ **"......... (ಜಿಲ್ಲಾ ವೇದಿಕೆಯ ಹೆಸರು ಬರೆದು) ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಹುದ್ದೆಗೆ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ಬರೆದು." ದಿನಾಂಕ: 11ನೇ ಸೆಪ್ಟೆಂಬರ್ 2009ರ ಶುಕ್ರವಾರ ಸಂಜೆ 5–00 ಗಂಟೆಯೊಳಗಾಗಿ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು–01,** ಇಲ್ಲಿಗೆ ಸಲ್ಲಿಸುವುದು.

ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಆಯೋಗದ ವೆಬ್‌ಸೈಟ್ http://kscdrc.kar.nic.in ರಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಸಂಬಂಧಪಟ್ಟ ಜಿಲ್ಲಾ ವೇದಿಕೆಯಲ್ಲಿ ಒಂದು ಅರ್ಜಿಗೆ ರೂ.10–00 ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಕಲಂ 10(1ಎ) ರಡಿಯಲ್ಲಿನ ಆಯ್ಕೆ
ಸಮಿತಿಯ ಅಧ್ಯಕ್ಷರ ಆದೇಶಾನುಸಾರ

ಪಿ.ಆರ್.697

ಎಸ್.ಎ.ಹಿದಾಯತ್‌ಉಲ್ಲಾ ಷರೀಫ್
ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ,
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರ ನಡವಳಿಕೆಗಳು

ವಿಷಯ: ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು ಇವರ ಅಮಲ್ಜಾರಿ ಅರ್ಜಿ ಸಂಖ್ಯೆ: ಜೆಆರ್‌ಡಿ/ ಯುಬಿಎಫ್/ಟಿ2744/05-06 (ಸಿಇಪಿ ಸಂಖ್ಯೆ: ಎಆರ್ 44/359/07-08) ಸಂಬಂಧಪಟ್ಟಂತೆ ಸ್ಥಿರಾಸ್ತಿಯನ್ನು 1960ನೇ ಸಹಕಾರ ಸಂಘಗಳ ನಿಯಮಗಳ ನಿಯಮ 38(5) (ಎ) ರನ್ವಯ ಮಾರಾಟ ಸ್ಥಿರೀಕರಣಗೊಳಿಸುವ ಬಗ್ಗೆ.

ಉಲ್ಲೇಖ: 1) ದಾವಾ ಸಂಖ್ಯೆ: ಜೆಆರ್‌ಡಿ/ಯುಬಿಎಫ್/ಟಿ2744/05-06.

2) ಅಮಲ್ಜಾರಿ ಅರ್ಜಿ ಸಂಖ್ಯೆ: 359/07-08.

3) ಮಾರಾಟಾಧಿಕಾರಿಯವರ ವರದಿ ದಿನಾಂಕ:11.02.2009.

ಪ್ರಸ್ತಾವನೆ:

ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ, ನಂ.68, ಹಳೇ ನಂ.1, 1ನೇ ದೇವಸ್ಥಾನದ ರಸ್ತೆ, ಮಲ್ಲಿಕಾರ್ಜುನಪುರ, ಮಲ್ಲೇಶ್ವರಂ ಬೆಂಗಳೂರು-560 003 ಇವರು ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು ಈ ಬ್ಯಾಂಕಿನಿಂದ ದಿನಾಂಕ:28.07.2003ರಂದು ರೂ.27,30,000/- (ರೂಪಾಯಿ ಇಪ್ಪತ್ತೇಳು ಲಕ್ಷ ಮೂವತ್ತು ಸಾವಿರಗಳು ಮಾತ್ರ) ಗಳನ್ನು ಸ್ಥಿರಾಸ್ತಿ ಅಡಮಾನ ಮಾಡಿ ಸಾಲವಾಗಿ ಪಡೆದು ಬ್ಯಾಂಕಿನ ಸಾಲ ಮಂಜೂರಾತಿಯ ಷರತ್ತು ಮತ್ತು ನಿಯಮಗಳ ಪ್ರಕಾರ ಸಾಲವನ್ನು ಮರುಪಾವತಿಸಲು ವಿಫಲರಾಗಿ ಸುಸ್ತಿದಾರರಾದ ಕಾರಣ ಸಾಲ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರನ್ವಯ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, (ನಿ-441) ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: ಜೆಆರ್‌ಡಿ/ಯುಬಿಎಫ್/ಟಿ2744/05-06ರಂತೆ ದಾವಾ ಹೂಡಿ ಆದೇಶ ಪಡೆದಿದ್ದರೂ ಸಾಲದ ಬಾಕಿ ವಸೂಲಾತಿಯಾಗಿರುವುದಿಲ್ಲ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು (ನಿ-441) ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸ.ಪ. ಬ್ಯಾಂಕ್ ಮ. ನಿಯಮಿತ, ಬೆಂಗಳೂರು ಇವರ ನ್ಯಾಯಾಲಯದಿಂದ ಪಡೆದ ಡಿಕ್ರಿ ಆದೇಶದನ್ವಯ ದಿ ಮಲ್ಲೇಶ್ವರಂ ಸಹಕಾರ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 34(1) ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು, 1ನೇ ವಲಯ, ಮಲ್ಲೇಶ್ವರಂ, ಬೆಂಗಳೂರು-03 ಇವರ ಕಛೇರಿಯಲ್ಲಿ ಸಿಇಪಿ ಸಂಖ್ಯೆ: 359/07-08 ರಂತೆ ಅಮಲ್ಜಾರಿ ಅರ್ಜಿ ದಾಖಲು ಮಾಡಲಾಗಿತ್ತು. ಸದರಿ ಅಮಲ್ಜಾರಿ ಅರ್ಜಿಯನ್ನು ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ವಹಿಸಲಾಗಿತ್ತು. ಸದರಿ ಮಾರಾಟಾಧಿಕಾರಿಯವರು ಅಂತಿಮವಾಗಿ ಅಮಲ್ಜಾರಿ ಕ್ರಮಕೈಗೊಂಡು ಸಾಲಕ್ಕೆ ಬ್ಯಾಂಕಿನ ಆಧಾರ ಮಾಡಿದ್ದ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು ದಿನಾಂಕ:11.02.2009 ರಂದು ಸಾರ್ವಜನಿಕ ಹರಾಜಿಗೆ ತರಲಾಗಿತ್ತು. ಸದರಿ ದಿನ ನಡೆಸಿದ ಹರಾಜಿನಲ್ಲಿ 6 ಜನ ಬಿಡ್ಡುದಾರರು ಭಾಗವಹಿಸಿದ್ದು, ಈ ಪೈಕಿ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಬಿನ್ ಕೆ. ಸೂರ್ಯನಾರಾಯಣ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಕೋಂ ಎಸ್. ಪ್ರತಾಪ್‌ಕುಮಾರ್ ಪಾಂಡೆ, ನಂ.70, 2ನೇ ಮಹಡಿ, 'ಪಾರಿಜಾತ' ವೆಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ಇವರು ರೂ.70,60,000/- (ರೂಪಾಯಿ ಎಪ್ಪತ್ತು ಲಕ್ಷ ಅರವತ್ತು ಸಾವಿರಗಳು ಮಾತ್ರ) ಗಳಿಗೆ ಬಿಡ್ಡು ಮಾಡಿದ್ದು. ಅತೀ ಹೆಚ್ಚು ಬಿಡ್ಡುದಾರರಾಗಿರುತ್ತಾರೆ.

ಡಿಕ್ರಿ ಆದೇಶ ಮತ್ತು ಅಮಲ್ಜಾರಿ ಅರ್ಜಿಯನ್ವಯ ಅಸಲು ರೂ.27,30,000/-ಗಳು ಬಡ್ಡಿ ಮತ್ತು ಇತರೆ ವೆಚ್ಚಗಳು ರೂ.22,36,325/- ಒಟ್ಟು ರೂ.49,66,325/-ಗಳು ಬ್ಯಾಂಕಿಗೆ ಬರಬೇಕಾಗಿರುತ್ತದೆ. ರೂ.70,60,000/-ಗಳ ಅತೀ ಹೆಚ್ಚಿನ ಬಿಡ್ಡುದಾರರಾದ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ರವರು ಬಿಡ್ಡಿನ ಮೊತ್ತದ ಶೇಕಡಾ 15 ರಷ್ಟು ರೂ.10,59,000/- ಗಳನ್ನು ಹರಾಜಿನ ಸ್ಥಳದಲ್ಲಿಯೇ ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ. ಉಳಿಕೆ ಮೊತ್ತ ಮತ್ತು ನೊಂದಣಿ ಶುಲ್ಕ ಸೇರಿ ರೂ.66,01,000/-ಗಳನ್ನು ದಿನಾಂಕ:24.03.2009ರಂದು ಪಾವತಿ ಮಾಡಿರುತ್ತಾರೆ.

ದಿ ಮಲ್ಲೇಶ್ವರಂ ಸಹಕಾರ ಬ್ಯಾಂಕಿನ ಮಾರಾಟಾಧಿಕಾರಿಯವರು ದಿನಾಂಕ:11.02.2009ರಂದು ನಡೆಸಿದ ಸಾರ್ವಜನಿಕ ಹರಾಜನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ನಿಯಮಗಳನ್ನು ಪಾಲಿಸಿ ಹರಾಜು ಕ್ರಮವನ್ನು ನಡೆಸಿರುವುದಾಗಿ ಹಾಗೂ ಬ್ಯಾಂಕಿನ ಬಾಕಿದಾರರಾದ ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ ರವರ ಸ್ಥಿರಾಸ್ತಿಯನ್ನು ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ರವರಿಗೆ ಮಾರಾಟ ಮಾಡಿರುವ ಆಸ್ತಿಯ ಹರಾಜನ್ನು ಖಾಯಂಗೊಳಿಸಬೇಕೆಂದು ಉಲ್ಲೇಖ (3)ರಂತೆ ಈ ಕಛೇರಿಗೆ ಸವಿಸ್ತಾರವಾದ ವರದಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕ:11.02.2009ರಂದು ನಡೆಸಿದ ಸ್ಥಿರಾಸ್ತಿ ಬಹಿರಂಗ ಹರಾಜಿನ ನಡವಳಿಕೆಯನ್ನು ಪರಿಶೀಲಿಸಿದಾಗ ಸದರಿ ಸ್ಥಿರಾಸ್ತಿ ಬಹಿರಂಗ ಹರಾಜಿನಲ್ಲಿ ಒಟ್ಟು 6 ಜನ ಬಿಡ್ಡುದಾರರು ಭಾಗವಹಿಸಿದ್ದು ಈ ಪೈಕಿ ಅತ್ಯಧಿಕ ಬಿಡ್ಡುದಾರರಾದ

ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಇವರಿಗೆ ರೂ.70,60,000/– ಗಳಿಗೆ ಮಾರಾಟ ಮಾಡಿರುವುದು ದಾಖಲೆಗಳಿಂದ ತಿಳಿದುಬಂದಿರುತ್ತದೆ. ಬಹಿರಂಗ ಹರಾಜು ನಡೆದ 30 ದಿನಗಳೊಳಗೆ ಬಾಕಿದಾರರು ವಾದಿ ಬ್ಯಾಂಕಿಗೆ ಬರಬೇಕಾದ ಸಾಲವನ್ನು ಮರುಪಾವತಿ ಮಾಡದಿರುವುದರಿಂದ ಮತ್ತು ಈ ಬಗ್ಗೆ ಯಾವುದೇ ಆಕ್ಷೇಪಣೆ ಸಲ್ಲಿಸದೇ ಇರುವುದರಿಂದ ದಿನಾಂಕ:11.02.2009 ರಂದು ನಡೆಸಲಾದ ಸ್ಥಿರಾಸ್ತಿ ಹರಾಜನ್ನು ಖಾಯಂಗೊಳಿಸಬಹುದೆಂದು ಮಾರಾಟಾಧಿಕಾರಿಯವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಮಾರಾಟಾಧಿಕಾರಿಯವರು ಕೈಗೊಂಡ ಕ್ರಮಗಳು ಕಾನೂನುಬದ್ಧವಾಗಿದೆ ಎಂದು ಕಂಡುಬಂದಿರುವುದರಿಂದ ಈ ಕೆಳಗಿನ ಸ್ಥಿರೀಕರಣ ಆದೇಶ ಹೊರಡಿಸಲಾಗಿದೆ.

ಆದೇಶ

ಕ್ರ.ಸಂ. ಎಆರ್‌ಬಿ 44/ಮಾ.ಸ್ಥಿರೀಕರಣ/02/2009–10, ದಿನಾಂಕ:18ನೇ ಜೂನ್, 2009

ಶ್ರೀ ಅಶ್ವಥನಾರಾಯಣ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ, ಮಾರ್ಗೊಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 38(6)(ಎ) ರನ್ವಯ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಅಮಲ್ಜಾರಿ ಅರ್ಜಿ ಸಂಖ್ಯೆ: 359/07–08 ಶ್ರೀ ಎಂ. ರಮೇಶ್ ಬಿನ್ ಮಾಯಣ್ಣ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ದಿನಾಂಕ:11.02.2009 ರಂದು ವಾದಿ ಬ್ಯಾಂಕಿನ ಮಾರಾಟಾಧಿಕಾರಿಯವರು ಮಾಡಿದ ಬಹಿರಂಗ ಹರಾಜಿನಲ್ಲಿ ಶ್ರೀ ಎಸ್. ಪ್ರತಾಪ್‌ಕುಮಾರ್ ಪಾಂಡೆ ಬಿನ್ ಕೆ. ಸೂರ್ಯನಾರಾಯಣ ಪಾಂಡೆ ಮತ್ತು ಶ್ರೀಮತಿ ಎಸ್. ಶ್ರೀವನಿತ ಕೋಂ ಎಸ್. ಪ್ರತಾಪ್‌ಕುಮಾರ್ ಪಾಂಡೆ, ನಂ.70, 2ನೇ ಮಹಡಿ, 'ಪಾರಿಜಾತ' ವೆಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ಇವರಿಗೆ ರೂ.70,60,000/– ಗಳಿಗೆ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಿರುವುದನ್ನು ಖಾಯಂಗೊಳಿಸಿ ಸ್ಥಿರೀಕರಿಸಿರುತ್ತೇನೆ.

ಸ್ಥಿರಾಸ್ತಿಯ ವಿವರ

ಬೆಂಗಳೂರು ಮಹಾನಗರ ಪಾಲಿಕೆ, ಮಲ್ಲೇಶ್ವರಂ ವಲಯ, 5ನೇ ವಾರ್ಡ್‌ಗೆ ಸೇರಿದ ಬೆಂಗಳೂರು ಸಿಟಿ, ಮನೆ ನಂ.68, ಹಳೇ ನಂ.1, 1ನೇ ದೇವಸ್ಥಾನದ ರಸ್ತೆ, ಮಲ್ಲಿಕಾರ್ಜುನಪುರ, ಮಲ್ಲೇಶ್ವರಂ, ಬೆಂಗಳೂರು–03 ರಲ್ಲಿರುವ ಪೂರ್ವಕ್ಕೆ:29.6 ಅಡಿಗಳು, ಪಶ್ಚಿಮಕ್ಕೆ: 30 ಅಡಿಗಳು, ಉತ್ತರಕ್ಕೆ:54 ಅಡಿಗಳು, ದಕ್ಷಿಣಕ್ಕೆ:54 ಅಡಿಗಳು ಇದರ ಚಕ್ಕುಬಂದಿ:

ಪೂರ್ವಕ್ಕೆ: ಬೇರೆಯವರ ಸ್ವತ್ತು

ಪಶ್ಚಿಮಕ್ಕೆ: ರಸ್ತೆ

ಉತ್ತರಕ್ಕೆ: ಬೇರೆಯವರ ಸ್ವತ್ತು

ದಕ್ಷಿಣಕ್ಕೆ: ಕಾಮನ್ ಪ್ಯಾಸೇಜ್ ಮತ್ತು ಬೇರೆಯವರ ಸ್ವತ್ತು.

ಈ ಸ್ವತ್ತಿನ ಪೈಕಿ ದಿನಾಂಕ:10.11.2008ರ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂ.ಪಿ ನಂ.13623/2007 (ಸಿ.ಎಸ್.–ಡಿ.ಎ.ಎಸ್) ಇದರ ಅನ್ವಯ 1200 ಚದರಡಿ ನೆಲ ಅಂತಸ್ತು ಮತ್ತು ನಿವೇಶನದಲ್ಲಿ 1/3 ಅವಿಭಾಜ್ಯ ಪಾಲು ಶ್ರೀ ದೇವರಾವ್ ಬಿನ್ ಲೇಟ್ ಬಿ.ಎಲ್. ಆನಂದ್‌ರಾವ್ ರವರಿಗೆ ಸೇರಿದ ಸ್ವತ್ತನ್ನು ಹೊರತುಪಡಿಸಿ ಉಳಿಕೆ ಸ್ವತ್ತು ಈ ಮಾರಾಟ ಸ್ಥಿರೀಕರಣಕ್ಕೆ ಒಳಪಟ್ಟಿರುತ್ತದೆ.

ಮಾರಾಟದ ಮೊಬಲಗು: ರೂ.70,60,000/–

ಮಾರಾಟ ಮಾಡಿದ ದಿನಾಂಕ:11.02.2009

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:18.06.2009ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವೃತ್ತ,

ಪಿ.ಡಿ.43 ಮಾರ್ಗೊಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ವಿಜಾಪುರ

ಪ್ರಕಟಣೆ

ನಂ.ಜಿ.ಸಕ/ಲೆಕ್ಕ/ಸಿಆರ್/2009–10, ದಿನಾಂಕ:13ನೇ ಜುಲೈ, 2009

ಸಮಾಜ ಕಲ್ಯಾಣ ಇಲಾಖೆಯಿಂದ ಸನ್ 2009–10ನೇ ಸಾಲಿಗಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟವರ್ಗದ ಕಾನೂನು ಪದವೀಧರರು ಈ ಕೆಳಕಂಡ ಅರ್ಹತೆ ಮತ್ತು ದಾಖಲೆಗಳನ್ನು ಹೊಂದಿದವರು ದಿನಾಂಕ:31.07.2009ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

1) ಈ ಯೋಜನೆಯಡಿ ಅರ್ಜಿದಾರರು ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗದ ಜಾತಿಗೆ ಸೇರಿದವರಾಗಿರಬೇಕು (ದೃಢೀಕೃತ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು) ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಎರಡು ವರ್ಷದಿಂದಾ

ಈಚೆಗೆ ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಅಂದರೆ ದಿನಾಂಕ:10.07.2007 ರಿಂದ 10.07.2009ರಲ್ಲಿ ಅಂತಿಮ ಪದವಿ ಪಾಸಾಗಿರಬೇಕು.

2) ವಕೀಲ ವೃತ್ತಿಯನ್ನು ನಡೆಸಲು ಅರ್ಹತೆ ಪಡೆದಿರುವ ಕಾನೂನು ಪದವೀಧರರು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

3) ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳ ವಯಸ್ಸು 18 ರಿಂದ 35 ವರ್ಷದೊಳಗಿರಬೇಕು.

4) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ತರಬೇತಿ ಮಧ್ಯದಲ್ಲಿ ಬಿಟ್ಟು ಹೋಗಬಾರದು. ಒಂದು ವೇಳೆ ಬಿಟ್ಟುಹೋದಲ್ಲಿ ಶಿಷ್ಯವೇತನ ಮೊತ್ತವನ್ನು ಕಂದಾಯ ಬಾಕಿ ಅಂತಾ ವಸೂಲಿ ಮಾಡಲಾಗುವುದು.

5) ತರಬೇತಿಯ ಅವಧಿ ನಾಲ್ಕು ವರ್ಷ ಆಗಿದ್ದು ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ.1000-00 ರಂತೆ ಸ್ಟೈಫಂಡ್ ನೀಡಲಾಗುವುದು.

6) ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್ ಸರ್ಕಾರಿ ವಕೀಲರು ಅಥವಾ 20 ವರ್ಷಕ್ಕೂ ಮೇಲ್ಪಟ್ಟು ವಕೀಲ ವೃತ್ತಿ ನಡೆಸಿದ ಖಾಸಗಿ ವಕೀಲರುಗಳ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.

7) ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಈ ಕೆಳಕಂಡ ದಾಖಲೆಗಳೊಂದಿಗೆ ದಿನಾಂಕ:31.07.2009ರ ಒಳಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ವಿಜಾಪುರ ಇವರಿಗೆ ಅರ್ಜಿ ಸಲ್ಲಿಸತಕ್ಕದ್ದು.

1) ಜಾತಿ ಪ್ರಮಾಣ ಪತ್ರ.

2) ಆದಾಯ ಪ್ರಮಾಣ ಪತ್ರ.

3) ಜನ್ಮ ದಿನಾಂಕ ದಾಖಲೆಯ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ.

4) ಲಿವ್ವಿಂಗ್ ಸರ್ಟಿಫಿಕೇಟ್.

5) ಬಾರ್ ಅಸೋಸಿಯೇಶನ್ ಸದಸ್ಯತ್ವ ಪ್ರಮಾಣ ಪತ್ರ.

6) ಅಂತಿಮ ಕಾನೂನು ಪಾಸ್ ಮಾಡಿದ ಅಂಕಪಟ್ಟಿ ಮುಂತಾದ ಶೈಕ್ಷಣಿಕ ಅರ್ಹತೆ ಪಡೆದ ದೃಢೀಕರಣ ಪ್ರಮಾಣ ಪತ್ರಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಇತರೆ ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳವರ ಕಾರ್ಯಾಲಯ ಆನಂದ್ ಮಹಲ ಬಿಜಾಪುರ ಇಲ್ಲಿ ಸಂಪರ್ಕಿಸಬಹುದಾಗಿದೆ.

ಪಿ.ಆರ್.698 ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಬಿಜಾಪುರ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಸಂಖ್ಯೆ: ಆಸಾನಿ: 11: ಆಡಳಿತ-2:2001/525-60, ಬೆಂಗಳೂರು, ದಿನಾಂಕ:2ನೇ ಜುಲೈ, 2009

ವಿಷಯ: ಸರ್ಕಾರದ ಸೇವೆಗೆ ಅನಧಿಕೃತ ಗೈರು ಹಾಜರಾಗುವ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು ಇವರನ್ನು ಸರ್ಕಾರದ ಸೇವೆಯಿಂದ ವಜಾಗೊಳಿಸುವ ಕುರಿತು.

ಉಲ್ಲೇಖ: 1) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ:11.03.2009.

2) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಅಂತಿಮ ನೋಟೀಸು ದಿನಾಂಕ:15/18.05.2009.

ಪ್ರಸ್ತಾವನೆ:

ಈ ನಿರ್ದೇಶನಾಲಯದ ಗಣತಿದಾರರ ವೃಂದಕ್ಕೆ ಸೇರಿದ ಶ್ರೀ ಪಿ.ಆರ್. ಲೋಕೇಶ್ ಅವರು ದಿನಾಂಕ:22.12.2008 ರಿಂದ ನಿರಂತರವಾಗಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದರಿಂದ, ಅವರಿಗೆ ಉಲ್ಲೇಖ (1)ರಲ್ಲಿನ ಜ್ಞಾಪನದಲ್ಲಿ, ಈ ಜ್ಞಾಪನವನ್ನು ಸ್ವೀಕರಿಸಿದ 3 ದಿನಗಳ ಒಳಗಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿತ್ತು. ಈ ಜ್ಞಾಪನವನ್ನು ಸದರಿ ಗಣತಿದಾರರಾದ ಶ್ರೀ ಪಿ.ಆರ್. ಲೋಕೇಶ್ ಅವರು "ಸ್ವೀಕರಿಸಲು ತಿರಸ್ಕರಿಸಿದ್ದಾರೆಂಬ" (addressee refused) ಷರಾದೊಂದಿಗೆ, ಜ್ಞಾಪನವನ್ನೊಳಗೊಂಡ ಅಂಚೆ ಕವರು ಈ ನಿರ್ದೇಶನಾಲಯಕ್ಕೆ ಹಿಂತಿರುಗಿ ಬಂದಿದ್ದರಿಂದ, ಈ ಜ್ಞಾಪನವನ್ನು ಮುದ್ದಾಂ ಆಗಿ, ಅವರ ಮನೆ ವಿಳಾಸಕ್ಕೆ ದಿನಾಂಕ:24.03.2009ರಂದು ಜಾರಿ ಮಾಡಲಾಗಿತ್ತು. ನಂತರ ಸದರಿಯವರು ದಿನಾಂಕ:30.03.2009ರಂದು ಸಲ್ಲಿಸಿದ ಒಂದು ಮನವಿಯಲ್ಲಿ ಕಛೇರಿಗೆ ಹಾಜರಾಗುತ್ತೇನೆಂದು ತಿಳಿಸಿದ್ದರೂ, ಅವರು ಅನಧಿಕೃತ ಗೈರು ಹಾಜರಾತಿಯನ್ನು ನಿರಂತರವಾಗಿ ಮುಂದುವರೆಸಿರುತ್ತಾರೆ. ನಂತರ, ಇದೇ ಕ್ರಮಾಂಕದ ಜ್ಞಾಪನದ ದಿನಾಂಕ:15/18.05.2009ರಲ್ಲಿ ಸದರಿಯವರಿಗೆ, ನೀಡಲಾದ ಅಂತಿಮ ನೋಟೀಸನ್ನು ಅವರು ದಿನಾಂಕ:20.05.2009ರಂದು ಸ್ವೀಕರಿಸಿದ್ದರೂ, ಇಂದಿನವರೆಗೂ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆ.

ಸರ್ಕಾರಿ ನೌಕರನೊಬ್ಬನು ಯಾವುದೇ ಮಾಹಿತಿ ಇಲ್ಲದೇ ನಿರಂತರವಾಗಿ ಅನಧಿಕೃತ ಗೈರು ಹಾಜರಾದ ಪ್ರಕರಣಗಳನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14(ii) ಅನ್ವಯ ಪರಿಶೀಲಿಸಲಾಗಿ, "ಆತನು ತಲೆಮರೆಸಿಕೊಂಡಿದ್ದಾನೆಂದು" ಪರಿಗಣಿಸಿ, ಇಲಾಖಾ ವಿಚಾರಣೆ ನಡೆಸದೇ ದಂಡನೆ ವಿಧಿಸಬಹುದಾಗಿದೆ ಹಾಗೂ ಅದೇ ನಿಯಮಗಳ ನಿಯಮ: 28(2)ರ ಅನ್ವಯ ಉಲ್ಲೇಖ (2)ರಲ್ಲಿನ ಅಂತಿಮ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಅದನ್ನು ದಿನಾಂಕ:20.05.2009ರಂದು ಆತನು

ಸ್ವೀಕರಿಸಿದ್ದು, ಹಾಗೂ ಅದೇ ನಿಯಮಗಳ ಅನ್ವಯ, ಕಛೇರಿ ನೋಟಿಸ್ ಬೋರ್ಡಿನ ಮೇಲೆ ಅದರ ಒಂದು ಪ್ರತಿಯನ್ನು ಅಂಟಿಸಲಾಗಿತ್ತು. ಸದರಿ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು ಈ ಹಿಂದೆ ದಿನಾಂಕ:02.06.2007 ರಿಂದ 30.10.2007ರ ವರೆಗೆ ಹಾಗೂ ದಿನಾಂಕ:26.12.2007 ರಿಂದ 22.02.2008ರ ವರೆಗಿನ ಅವರ ಅನಧಿಕೃತ ಗೈರು ಹಾಜರಾತಿಯನ್ನು ಕೆಸಿಎಸ್ಆರ್ ನಿಯಮ 106ರ ಅನ್ವಯ ಅನಧಿಕೃತ ಗೈರು ಹಾಜರಾತಿ ಎಂದು ಪರಿಗಣಿಸಲಾಗಿತ್ತು. ಹಾಗೂ ಸದರಿಯವರು ಸರ್ಕಾರದ ಸೇವೆಗೆ ವರದಿ ಮಾಡಿಕೊಂಡ ನಂತರ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿದ್ದರು. ಪ್ರಸ್ತುತ ಪ್ರಕರಣದಲ್ಲಿ ಸದರಿಯವರು ದಿನಾಂಕ:22.12.2008 ರಿಂದ ಇಂದಿನವರೆಗೂ ಕರ್ತವ್ಯಕ್ಕೆ ಅನಧೀಕೃತ ಗೈರು ಹಾಜರಾಗಿದ್ದು ಅವರಿಗೆ ಹೊರಡಿಸಲಾಗಿದ್ದ ಅಂತಿಮ ಜ್ಞಾಪನವನ್ನು ಸ್ವೀಕರಿಸಿದ ನಂತರವೂ ಹಾಗೂ ಅದನ್ನು ಕಛೇರಿಯ ನೋಟೀಸ್ ಬೋರ್ಡಿಗೆ ಅಂಟಿಸಿದ ನಂತರವೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೆ ಇದ್ದುದರಿಂದ, ಆತನು ತಲೆ ತಪ್ಪಿಸಿಕೊಂಡಿದ್ದಾನೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶದ ಸಂಖ್ಯೆ: ಆಸಾನಿ: ಆಡಳಿತ:176, 2009–10

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರಿಗೆ ಸರ್ಕಾರದ ಕರ್ತವ್ಯದಲ್ಲಿ ಆಸಕ್ತಿ ಇಲ್ಲದೆ ಮೇಲಿಂದ ಮೇಲೆ ಗೈರು ಹಾಜರಾಗುವ ಪ್ರವೃತ್ತಿ ಹೊಂದಿದ್ದು, ಈ ಪ್ರಸ್ತುತ ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು, ಯಾವುದೇ ಪ್ರಬಲ ಕಾರಣಗಳಿಲ್ಲದೆ ಸರ್ಕಾರದ ಕರ್ತವ್ಯಕ್ಕೆ ದಿನಾಂಕ:22.12.2008 ರಿಂದ ಅನಧಿಕೃತ ಗೈರು ಹಾಜರಾಗಿರುವುದು ತೀವ್ರ ತೆರನಾದ ದುರ್ವರ್ತನೆಯಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ:14(ii)ರ ಅನ್ವಯ ಆತನು ತಲೆಮರೆಸಿಕೊಂಡಿದ್ದಾನೆಂದು ಪರಿಗಣಿಸಿ, ಅದೇ ನಿಯಮಾವಳಿ ನಿಯಮ:11ರ ಅನ್ವಯ ಇಲಾಖಾ ವಿಚಾರಣೆ ಏರ್ಪಡಿಸದೇ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:8(viii)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಆದ ನಾನು ಶ್ರೀ ಪಿ.ಆರ್. ಲೋಕೇಶ್, ಗಣತಿದಾರರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ನಿರ್ದೇಶನಾಲಯದ ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

ಹೆಚ್.ಇ. ರಾಜಶೇಖರಪ್ಪ

ಪಿ.ಆರ್.613

ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಸಂಖ್ಯೆ: ಆಸಾಂನಿ:248:ಆಡಳಿತ–2:2008–09/15001–15045, ಬೆಂಗಳೂರು, ದಿನಾಂಕ:20ನೇ ಜುಲೈ, 2009

ವಿಷಯ: ಶ್ರೀ ಎ. ರಾಜೇಂದ್ರ ಹಿಂದಿನ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸುವ ಕುರಿತು.

ಉಲ್ಲೇಖ: 1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಜಿಸಂಸಂ/ದಾವ/ ಆಡಳಿತ/ ಸಾಂನಿ/ದಾವ/2008–09, ದಿನಾಂಕ:09.01.2009 ಮತ್ತು ಅದರೊಂದಿಗೆ ಲಗತ್ತಿಸಲಾದ 76 ಪುಟಗಳ ದಾಖಲಾತಿಗಳು.

2) ಆ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ:24.01.2009.

3) ನೌಕರರ ಮನವಿ ದಿನಾಂಕ:29.06.2009.

ಪ್ರಸ್ತಾವನೆ:

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರ ಉಲ್ಲೇಖ (1) ರ ವರದಿಯಲ್ಲಿನ ಮೊದಲನೆಯ ಅಂಶದಲ್ಲಿ ಇನ್ನಿತರ ವಿಷಯಗಳೊಂದಿಗೆ ಶ್ರೀಮತಿ ಉಮಾದೇವಿ ಎಂಬುವವರು ಜಗಳೂರು ತಾಲ್ಲೂಕು, ಯರ್ರಲಕಟ್ಟೆಯಲ್ಲಿ ದಿನಾಂಕ:20.06.1988 ರಂದು ವಾಸ್ತವವಾಗಿ ಜನನವಾಗಿದ್ದರೂ, ಶ್ರೀ ಎ. ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು ಇವರು ಶ್ರೀಮತಿ ಉಮಾದೇವಿ ಇವರ ತಾಯಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ನವೆಂಬರ್ 1986ನೇ ಇಸವಿಯ ನಿಟ್ಟುವಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಜನನ ಮತ್ತು ಮರಣ ನೋಂದಣಿಯ ರಿಜಿಸ್ಟರ್‌ನ ಹಳೆಯ ದಾಖಲೆಗಳನ್ನು ತೆಗೆದುಕೊಂಡು ಶ್ರೀಮತಿ ಎಂ.ಜಿ. ಉಮಾದೇವಿಯವರ ಹುಟ್ಟಿದ ದಿನಾಂಕವನ್ನು ಅನಧಿಕೃತವಾಗಿ ಸುಳ್ಳು ದಿನಾಂಕವನ್ನು ನಮೂದಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದೂ, ಎರಡನೆಯ ಅಂಶದಲ್ಲಿ ಸದರಿ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಎ.ರಾಜೇಂದ್ರ, ಇವರು ಈ ಘಟನೆ ಜರುಗಿದ ದಿನಾಂಕಗಳಂದು ಪ್ರವಾಸದಲ್ಲಿದ್ದುದಾಗಿ ಹೇಳಿದ್ದರೂ, ಆ ದಿನಗಳಂದು ಕಛೇರಿಯಲ್ಲಿ ಇದ್ದು ಸದರಿ ಅವರೇ ಜನನ ಪ್ರಮಾಣ ಪತ್ರದ ನಕಲನ್ನು ಹಾಗೂ ನಮೂನೆ–II ರ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ತಯಾರಿಸಿದ್ದಾಗ್ಯೂ ಸದರಿ ಪ್ರಮಾಣ ಪತ್ರದ ನಕಲನ್ನು ತಯಾರಿಸುವಾಗ ಮೂಲ ದಾಖಲೆಯಾದ ನಮೂನೆ–II ರಲ್ಲಿನ ವ್ಯತ್ಯಾಸದ ಕುರಿತು ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲವೆಂದೂ ಹಾಗೂ ವರದಿಯ 3ನೇ ಅಂಶದಲ್ಲಿ ಸದರಿ

ಸಾಂಖ್ಯಿಕ ನಿರೀಕ್ಷಕರು ಅವರಿಗೆ ವಹಿಸಲಾದ ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿಯೂ ಸಹ ನಿರ್ಲಕ್ಷತೆಯನ್ನು ಪ್ರದರ್ಶಿಸಿರುವುದಕ್ಕೆ ಸಂಬಂಧಿಸಿದಂತೆ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಮತ್ತು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಏರ್ಪಡಿಸಲಾಗುವ ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಿಗೆ ಅನುಮತಿ ಪಡೆಯದೇ ಗೈರು ಹಾಜರಾಗಿರುವುದಕ್ಕೆ ಮತ್ತು ಪ್ರತಿ ತಿಂಗಳು ದಿನಚರಿ ನೀಡದೇ ಇರುವುದಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ನೀಡಿದ ಕಾರಣ ಕೇಳುವ ಜ್ಞಾಪನಗಳ ಕುರಿತು ವಿವರಿಸಿ, ಸದರಿ ಸಾಂಖ್ಯಿಕ ನಿರೀಕ್ಷಕರು ಸರ್ಕಾರದ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷತೆ ಮನೋಭಾವನೆಯನ್ನು ಬೆಳೆಸಿಕೊಂಡಿರುವುದಲ್ಲದೆ ಕರ್ತವ್ಯ ಲೋಪವೆಸಗಿರುತ್ತಾರೆಂದು ನಮೂದಿಸಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿದ್ದರಿಂದ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರ ಪ್ರಸ್ತಾವನೆಯಲ್ಲಿ ಒಳಗೊಂಡಿರುವ ಮೇಲೆ ತಿಳಿಸಲಾದ ಅಂಶಗಳನ್ನು ಹಾಗೂ ವರದಿಗಳೊಂದಿಗೆ ಒದಗಿಸಲಾದ ದಾಖಲಾತಿಗಳನ್ನು ಪರಿಶೀಲಿಸಿ ಶ್ರೀ ಎ. ರಾಜೇಂದ್ರ ಸಾಂಖ್ಯಿಕ ನಿರೀಕ್ಷಕರನ್ನು ಸರ್ಕಾರದ ಸೇವೆಯಿಂದ ಉಲ್ಲೇಖ (2) ರ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಸದರಿ ಅಮಾನತ್ತಿನಲ್ಲಿದ್ದ ಸಾಂಖ್ಯಿಕ ನಿರೀಕ್ಷಕರ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಒದಗಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅದೇ ವಿಷಯಕ್ಕೆ ಸಂಬಂಧಿಸಿದಂತೆ, ಮೇಲೆ ತಿಳಿಸಲಾದ ಶ್ರೀಮತಿ ಉಮಾದೇವಿ, ಇವರು ಶ್ರೀ ರಾಜೇಂದ್ರ, ಸಾಂಖ್ಯಿಕ ನಿರೀಕ್ಷಕರು ಇವರ ವಿರುದ್ಧ ಅದೇ ಆರೋಪಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಲೋಕಾಯುಕ್ತರ ಮುಂದೆ ದೂರೊಂದನ್ನು ಸಲ್ಲಿಸಿದ್ದರಿಂದ, ಆ ದೂರು ಕುರಿತು ಪೊಲೀಸ್, ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇಲ್ಲಿಗೆ ಒಂದು ವರದಿಯನ್ನು ದಿನಾಂಕ:22.06.2009ರಂದು ಸಲ್ಲಿಸಿದ್ದರಿಂದ ಲೋಕಾಯುಕ್ತ ಕಛೇರಿಯಿಂದ ಅಥವಾ ಈ ನಿರ್ದೇಶನಾಲಯದಿಂದ, ಸದರಿ ಸಾಂಖ್ಯಿಕ ನಿರೀಕ್ಷಕರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಹಾಗೂ ಉಲ್ಲೇಖ (3)ರಲ್ಲಿನ ಸದರಿ ಸಾಂಖ್ಯಿಕ ನಿರೀಕ್ಷಕರ ಕೋರಿಕೆಯನ್ನು ಪರಿಗಣಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಆಡಳಿತ:209: 2009–10

ಪ್ರಸ್ತಾವನೆಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಪರಿಗಣಿಸಿ, ಶ್ರೀ ಎ. ರಾಜೇಂದ್ರ, ಹಿಂದಿನ ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ದಾವಣಗೆರೆ (ದಾವಣಗೆರೆ ಜಿಲ್ಲೆ) ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಏರ್ಪಡಿಸುವುದನ್ನು ಕಾಯ್ದಿರಿಸಿ ಸರ್ಕಾರದ ಸೇವೆಗೆ ಪುನರ್ ಸ್ಥಾಪಿಸಿ ತಾಲ್ಲೂಕು ಕಛೇರಿ, ಹೊನ್ನಾಳಿ, (ದಾವಣಗೆರೆ ಜಿಲ್ಲೆ) ಕಛೇರಿಯಲ್ಲಿ ಖಾಲಿ ಇರುವ ಸಾಂಖ್ಯಿಕ ನಿರೀಕ್ಷಕರ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

ಹೆಚ್.ಇ. ರಾಜಶೇಖರಪ್ಪ
ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

ಪಿ.ಆರ್.705

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ
ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್‌ಆರ್–20:2009, ದಿನಾಂಕ:20ನೇ ಜುಲೈ, 2009

ಅರ್ಜಿದಾರರು:		**ಪ್ರತಿವಾದಿಗಳು:**
1) ಶ್ರೀಮತಿ ಜಯಲಕ್ಷ್ಮಿ ಕೋಂ ಅಮಾಸೇಗೌಡ (ಲೇಟ್) 2) ಶ್ವೇತ ಬಿನ್ ಲೇಟ್ ಅಮಾಸೇಗೌಡ 3) ರವಿಕುಮಾರ್ ಬಿನ್ ಲೇಟ್ ಅಮಾಸೇಗೌಡ 4) ಜವರಮ್ಮ ಕೋಂ ಸಣ್ಣಚಿಕ್ಕೇಗೌಡ, ವಾಸ: ಮಳಲಿ ಗ್ರಾಮ, ಹಳೇಕೋಟೆ ಹೋಬಳಿ, ಹೆಚ್.ಎನ್. ಪುರ ತಾಲ್ಲೂಕು.	**ವಿರುದ್ಧ**	1) ಶ್ರೀ ಅರುಣ್‌ಕುಮಾರ್ ಬಿನ್ ಬಸವರಾಜು, ಕಿರಗಂಡೂರು ಗ್ರಾಮ ಮತ್ತು ಅಂಚೆ, ಸೋಮವಾರಪೇಟೆ ತಾಲ್ಲೂಕು. 2) ದಿ ಓರಿಯಂಟಲ್ ಇನ್‌ಶೂರೆನ್ಸ್ ಕಂ.ಲಿ., ಸುಭಾಷ್ ಚೌಕ, ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಅಮಾಸೇಗೌಡ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:24.04.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ

ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ
ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್ಆರ್–21:2009, ದಿನಾಂಕ:20ನೇ ಜುಲೈ, 2009

ಅರ್ಜಿದಾರರು:

1) ಶ್ರೀ ಜವರೇಗೌಡ ಬಿನ್ ಪುಟ್ಟಸ್ವಾಮಿಗೌಡ
2) ಶ್ರೀಮತಿ ಗಿರಿಯಮ್ಮ ಕೋಂ ಜವರೇಗೌಡ
3) ಗಿರೀಶ ಬಿನ್ ಜವರೇಗೌಡ,
ವಾಸ: ಸಿಗರನಹಳ್ಳಿ ಗ್ರಾಮ, ಹರಹರಪುರ ಅಂಚೆ, ಹಳೇಕೋಟೇ ಹೋಬಳಿ, ಹೆಚ್.ಎನ್. ಪುರ್. ತಾಲ್ಲೂಕು.

ವಿರುದ್ಧ

ಪ್ರತಿವಾದಿಗಳು:

1) ಶ್ರೀ ಲಕ್ಷ್ಮಣ ಬಿನ್ ವೆಂಕಟೇಗೌಡ, ಹೆಚ್.ಕೆ. ಹೊಸೂರು, ಕಸಬಾ ಹೋಬಳಿ, ಹಾಸನ ತಾಲ್ಲೂಕು.
2) ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಪ್ರಕಾಶ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:11.01.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ
ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್ಆರ್–22:2009, ದಿನಾಂಕ:20ನೇ ಜುಲೈ, 2009

ಅರ್ಜಿದಾರರು:

1) ಶ್ರೀಮತಿ ಭಾರತಿ ಕೋಂ ಲೇಟ್ ಹನುಮೇಗೌಡ (ಅ) ಹನುಮಂತು,
2) ಸುರೇಶ ಬಿ.ಹೆಚ್. ಬಿನ್ ಲೇಟ್ ಹನುಮೇಗೌಡ,
3) ಹೆಚ್. ಆಶಾ ಬಿನ್ ಲೇಟ್ ಹನುಮೇಗೌಡ.
4) ಹನುಮೇಗೌಡ ಬಿನ್ ಲೇಟ್ ಹನುಮಂತೇಗೌಡ.
5) ಚೌಡಮ್ಮ ಕೋಂ ಹನುಮೇಗೌಡ
ವಾಸ: ಹಲಗೇನಹಳ್ಳಿ, ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು:

1) ಶ್ರೀ ಹನುಮೇಗೌಡ ಬಿನ್ ಲೇಟ್ ಸಣ್ಣಹನುಮೇಗೌಡ, ಬಿಲವತ್ತಳ್ಳಿ ಗ್ರಾಮ, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು.
2) ದಿ ನ್ಯಾಷನಲ್ ಇನ್‌ಶೂರೆನ್ಸ್ ಕಂ.ಲಿ., ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಹನುಮೇಗೌಡ (ಅ) ಹನುಮಂತು ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:03.03.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ: ಡಬ್ಲ್ಯೂಸಿಎ:ಎಫ್:ಎಸ್ಆರ್–23:2009, ದಿನಾಂಕ:20ನೇ ಜುಲೈ, 2009

ಅರ್ಜಿದಾರರು:

1) ಶ್ರೀ ಚಂದ್ರಶೇಖರಯ್ಯ ಬಿನ್ ಸೋಮಶೇಖರಯ್ಯ.
2) ಶ್ರೀಮತಿ ಪಾರ್ವತಮ್ಮ ಕೋಂ ಚಂದ್ರಶೇಖರಯ್ಯ.
ವಾಸ: ಕುಪ್ಪೆಗ್ರಾಮ, ಹಳ್ಳಿ ಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು.

ವಿರುದ್ಧ

ಪ್ರತಿವಾದಿಗಳು:

1) ಶ್ರೀ ಹೆಚ್.ಜಿ.ಕೆ. ನಟರಾಜೇಗೌಡ ಬಿನ್ ಪುಟ್ಟರಂಗೇಗೌಡ, ರಂಗನಾಥನಿಲಯ, 5ನೇ ಕ್ರಾಸ್, ಹುಣಸಗೇರಿ.
2) ಯುನೈಟೆಡ್ ಇಂಡಿಯಾ ಇನ್‌ಶೂರೆನ್ಸ್ ಕಂ.ಲಿ., ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಮಹದೇವ್ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:27.04.2009 ರಂದು ಸಾವನ್ನಪ್ಪಿರುತ್ತಾರೆ. ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಅವರ ಅವಲಂಬಿತರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು: ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸದೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಪಿ.ಆರ್.693
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು

ಪ್ರಕಟಣೆ

ಸಂಖ್ಯೆ: ಡಿಬಿಸಿಎಂ/ಬೆಂಗ್ರಾ/ಕಾ.ತ/ಸಿಆರ್–1/2009–10, ದಿನಾಂಕ:21ನೇ ಜುಲೈ, 2009

ವಿಷಯ: 2009–10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರನ್ನು ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 60 ಎಸ್.ಇ.ಡಬ್ಲ್ಯೂ89, ದಿನಾಂಕ:02.11.1990.
2) ಸರ್ಕಾರಿ ಆದೇಶ ಸಂಖ್ಯೆ: ಸಕಇ 116, ಬಿಎಂಎಸ್ 99, ದಿನಾಂಕ:07.10.1999.
3) ಸರ್ಕಾರಿ ಆದೇಶ ಸಂಖ್ಯೆ: ಸಕಇ 446, ಬಿಎಂಎಸ್ 2005, ಬೆಂಗಳೂರು, ದಿನಾಂಕ:01.12.2005.

2009–10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ (ವರ್ಗ–1, 2ಎ, 3ಎ ಮತ್ತು 3ಬಿ) ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ 4 ವರ್ಷಗಳ ಅವಧಿಗೆ ತರಬೇತಿಗೆ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿಯಲ್ಲಿ ನಿಗದಿತ

ಅವಧಿಯೊಳಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು. ಭರ್ತಿ ಮಾಡಲಾದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ಬೀದಿ, ಬೆಂಗಳೂರು, ಇಲ್ಲಿಗೆ ದಿನಾಂಕ:21.08.2009ರೊಳಗೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು.

ನಿಬಂಧನೆಗಳು:

1) ಅಭ್ಯರ್ಥಿಯು ಕಾನೂನು ಪದವೀಧರರಾಗಿದ್ದು, ಈ ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕಾನೂನು ಪದವಿಯನ್ನು ಮುಗಿಸಿ 2 (ಎರಡು) ವರ್ಷಗಳು ಮೀರಿರಬಾರದು.

2) ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000, ದಿನಾಂಕ:30.03.2002ರ ಆದೇಶದ ಅನುಸಾರ ಹಿಂದುಳಿದ ವರ್ಗ–1, 2ಎ, 3ಎ ಮತ್ತು 3ಬಿ ವರ್ಗೀಕರಣಕ್ಕೆ ಒಳಪಟ್ಟಿರಬೇಕು. ಹಾಗೂ ಮೇಲ್ಕಂಡ ವರ್ಗಗಳಿಗೆ ನಿಗದಿಪಡಿಸಲಾದ ಜಾತಿ ಆದಾಯ ಪ್ರಮಾಣ ಪತ್ರಗಳೊಂದಿಗೆ ವಿವರಗಳನ್ನು ಭರ್ತಿ ಮಾಡಿ, ಭರ್ತಿ ಮಾಡಲಾದ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

3) ಪ್ರವರ್ಗ–1 ನ್ನು ಹೊರತುಪಡಿಸಿ ಇತರೆ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ.15,000/–ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಿದೆ.

4) ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು (ಪ್ರತಿ ಲಗತ್ತಿಸಬೇಕು)

5) ಭರ್ತಿ ಮಾಡಲಾದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳ ವಯಸ್ಸು 30 ವರ್ಷಗಳನ್ನು ಮೀರಿರಬಾರದು. ಅಂದರೆ ವರ್ಗ–1ರ ಅಭ್ಯರ್ಥಿಗಳಿಗೆ 1 ವರ್ಷ ರಿಯಾಯಿತಿ ಇದ್ದು, ಅವರ ವಯಸ್ಸು 31 ವರ್ಷಗಳು ಮೀರಿರಬಾರದು.

6) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಅವಧಿ ಇದ್ದು, ಈ ಅವಧಿಯೊಳಗೆ ತರಬೇತಿಯನ್ನು ಬಿಡಲು ಅವಕಾಶವಿರುವುದಿಲ್ಲ. ಹಾಗೂ ಅಭ್ಯರ್ಥಿಯು ಸುಳ್ಳು ಮಾಹಿತಿ/ ದಾಖಲಾತಿಗಳನ್ನು ನೀಡಿದ್ದಲ್ಲಿ ಅಥವಾ ತರಬೇತಿ ಅವಧಿಯ ಮಧ್ಯದಲ್ಲಿ ತರಬೇತಿಯಿಂದ ಬಿಟ್ಟುಹೋದಲ್ಲಿ ಸರ್ಕಾರ ಅವರಿಗಾಗಿ ಖರ್ಚು ಮಾಡಿದ ಹಣವನ್ನು ವರ್ಷಕ್ಕೆ ಶೇ.10ರ ಬಡ್ಡಿಯೊಂದಿಗೆ ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು. ಆದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.

7) ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ.1000/–ಗಳ ತರಬೇತಿ ಭತ್ಯೆಯನ್ನು ದಿನಚರಿ ಆಧಾರದ ಮೇರೆಗೆ ನೀಡಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಗಳಿಗೆ ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್/ ಸರ್ಕಾರಿ ವಕೀಲರು ಅಥವಾ 20 ವರ್ಷಗಳಿಗಿಂತ ಹೆಚ್ಚಿನ ವರ್ಷಗಳು ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಕೀಲರಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಕಾನೂನು ತರಬೇತಿ ಪಡೆಯುವ ಸಲುವಾಗಿ ತರಬೇತಿಗೆ ನಿಯೋಜಿಸಲಾಗುವುದು.

9) ಆಯ್ಕೆಯಾದ ಅಭ್ಯರ್ಥಿಯು ಈ ಇಲಾಖೆಯ ನಿಬಂಧನೆಗಳು ಹಾಗೂ ಕಾಲಕಾಲಕ್ಕೆ ಹೊಂದಿರುವ ಸರ್ಕಾರದ ಆದೇಶಗಳಿಗೆ ಬದ್ಧನಾಗಿರುತ್ತೇನೆಂದು ಮುಚ್ಚಳಿಕೆಯನ್ನು ಬರೆದುಕೊಡಬೇಕು.

10) ಹೆಚ್ಚಿನ ಮಾಹಿತಿಯನ್ನು ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

11) ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲು ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು ಹಾಗೂ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

12) ಅಭ್ಯರ್ಥಿಗಳು ಭರ್ತಿ ಮಾಡಲಾದ ಅರ್ಜಿಯೊಂದಿಗೆ ಅವಶ್ಯಕ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ದೃಢೀಕರಣ ಪ್ರತಿ ಹಾಗೂ ಜನ್ಮ ದಿನಾಂಕದ ಆಧಾರಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ದೃಢೀಕೃತ ಪ್ರತಿ, ವಾಸಸ್ಥಳದ ಬಗ್ಗೆ ಆಹಾರ ಪಡಿತರ ಚೀಟಿ ಅಥವಾ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸುವುದು.

13) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21.08.2009.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು.

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು

ಪ್ರಕಟಣೆ

ಸಂಖ್ಯೆ: ಡಿಬಿಸಿಎಂ/ಬೆಂಗ್ರಾ/ಕಾ.ತ/ಸಿಆರ್–2/2009–10, ದಿನಾಂಕ:29ನೇ ಜುಲೈ, 2009

ವಿಷಯ: 2009–10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರನ್ನು ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 68 ಎಸ್.ಇ.ಡಬ್ಲ್ಯೂ89, ದಿನಾಂಕ:02.11.1990.
2) ಸರ್ಕಾರಿ ಆದೇಶ ಸಂಖ್ಯೆ: ಸಕಇ 205, ಬಿಎಂಎಸ್ 99, ದಿನಾಂಕ:07.10.1999.
3) ಸರ್ಕಾರಿ ಆದೇಶ ಸಂಖ್ಯೆ: ಸಕಇ 446, ಬಿಎಂಎಸ್ 2005, ಬೆಂಗಳೂರು, ದಿನಾಂಕ:01.12.2005.

2009–10ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿರುವ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಭೌದ್ದರು, ಸಿಖ್ಖರು ಹಾಗೂ ಪಾರ್ಸಿ ಸಮುದಾಯಕ್ಕೆ ಸೇರಿದ ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ 4 ವರ್ಷಗಳ ಅವಧಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಮತೀಯ ಅಲ್ಪಸಂಖ್ಯಾತರಿಗೆ ಸೇರಿದ ಈ ಕೆಳಕಂಡ ನಿಬಂದನೆಗಳನ್ನು ಪಾಲಿಸಬಲ್ಲ ಕಾನೂನು ಪದವೀಧರ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿಯಲ್ಲಿ ನಿಗದಿತ ಅವಧಿಯೊಳಗೆ ಕಛೇರಿ ವೇಳೆಯಲ್ಲಿ ಪಡೆದು ಭರ್ತಿ ಮಾಡಲಾದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಕಾನೂನು ಪದವೀಧರರ ಆಯ್ಕೆ ಸಮಿತಿ ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ಬೀದಿ, ಬೆಂಗಳೂರು, ಇಲ್ಲಿಗೆ ದಿನಾಂಕ:21.08.2009ರೊಳಗೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು.

ನಿಬಂಧನೆಗಳು:

1) ಅಭ್ಯರ್ಥಿಯು ಕಾನೂನು ಪದವೀಧರರಾಗಿದ್ದು, ಈ ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕಾನೂನು ಪದವಿಯನ್ನು ಮುಗಿಸಿ 2 (ಎರಡು) ವರ್ಷಗಳು ಮೀರಿರಬಾರದು.

2) ಅಭ್ಯರ್ಥಿಗಳು ಮತೀಯ ಅಲ್ಪಸಂಖ್ಯಾತರ ಸಮುದಾಯವಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು, ಸಿಖ್ಖರು, ಪಾರ್ಸಿ ಹಾಗೂ ಬೌದ್ಧರು ಇವುಗಳಿಗೆ ಸೇರಿರಬೇಕು. ಹಾಗೂ ಸರ್ಕಾರದಿಂದ ನಿಗದಿಪಡಿಸಲಾದ ಜಾತಿ ಆದಾಯ ಪರಿಶೀಲನಾ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

3) ಅಭ್ಯರ್ಥಿಗಳು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

4) ಭರ್ತಿ ಮಾಡಲಾದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳ ವಯಸ್ಸು 30 ವರ್ಷಗಳನ್ನು ಮೀರಿರಬಾರದು.

5) ಅಭ್ಯರ್ಥಿಯ ಕೌಟುಂಬಿಕ ವಾರ್ಷಿಕ ವರಮಾನ 15,000/–ಕ್ಕೆ ಮೀರಿರಬಾರದು. ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಅವಧಿ ಇದ್ದು, ಈ ಮಧ್ಯದಲ್ಲಿ ತರಬೇತಿಯನ್ನು ಬಿಡಲು ಅವಕಾಶವಿರುವುದಿಲ್ಲ. ಆದರೆ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರದಲ್ಲಿ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಈ ಷರತ್ತು ಅನ್ವಯಿಸುವುದಿಲ್ಲ.

6) ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ.1000/–ಗಳ ತರಬೇತಿ ಭತ್ಯೆಯನ್ನು ನೀಡಲಾಗುವುದು.

7) ಆಯ್ಕೆಯಾದ ಅಭ್ಯರ್ಥಿಗಳಿಗೆ ಜಿಲ್ಲಾ ಸಮಿತಿಯು ಪಬ್ಲಿಕ್ ಪ್ರಾಸಿಕ್ಯೂಟರ್/ ಸರ್ಕಾರಿ ವಕೀಲರು ಅಥವಾ 20 (ಇಪ್ಪತ್ತು) ವರ್ಷಗಳಿಗಿಂತ ಹೆಚ್ಚಿನ ವರ್ಷಗಳು ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ವಕೀಲರಲ್ಲಿ ಕಾನೂನು ತರಬೇತಿ ಪಡೆಯುವ ಸಲುವಾಗಿ ತರಬೇತಿಗೆ ಕಳುಹಿಸಿಕೊಡಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಯು ಈ ಇಲಾಖೆಯ ನಿಬಂಧನೆಗಳು ಹಾಗೂ ಸರ್ಕಾರದ ಆದೇಶಗಳಿಗೆ ಬದ್ದನಾಗಿರುತ್ತೇನೆಂದು ಮುಚ್ಚಳಿಕೆಯನ್ನು ಬರೆದುಕೊಡಬೇಕು.

9) ಆಯ್ಕೆಯಾದ ಅಭ್ಯರ್ಥಿಯು ಸುಳ್ಳು ಮಾಹಿತಿ/ ದಾಖಲೆಗಳನ್ನು ನೀಡಿದ್ದಲ್ಲಿ ಅಥವಾ ತರಬೇತಿ ಅವಧಿಯ ಮಧ್ಯದಲ್ಲಿ ತರಬೇತಿಯಿಂದ ಬಿಟ್ಟುಹೋದಲ್ಲಿ ಸರ್ಕಾರ ಅವರಿಗಾಗಿ ಖರ್ಚು ಮಾಡಿದ ಹಣವನ್ನು ವರ್ಷಕ್ಕೆ ಶೇ.10ರ ಬಡ್ಡಿಯೊಂದಿಗೆ ಭೂ ಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುವುದು.

(10) ಹೆಚ್ಚಿನ ಮಾಹಿತಿಯನ್ನು ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

11) ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲು ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು ಹಾಗೂ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

12) ಅಭ್ಯರ್ಥಿಗಳು ಭರ್ತಿ ಮಾಡಲಾದ ಅರ್ಜಿಯೊಂದಿಗೆ ಅವಶ್ಯಕ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ದೃಢೀಕರಣ ಪ್ರತಿ ಹಾಗೂ ಜನ್ಮ ದಿನಾಂಕದ ಆಧಾರಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ದೃಢೀಕೃತ ಪ್ರತಿ, ವಾಸಸ್ಥಳದ ಬಗ್ಗೆ ಆಹಾರ ಪಡಿತರ ಚೀಟಿ ಅಥವಾ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸುವುದು.

13) ಅಪೂರ್ಣ ಮಾಹಿತಿಗಳಿಂದ ಕೂಡಿದ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕ, ವೇಳೆ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

14) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:21.08.2009.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಬೆಂಗಳೂರು.

ಪಿ.ಆರ್.711

ನೋಂದಣಿ ಪ್ರಾಧಿಕಾರಿ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ), ಯಶವಂತಪುರ, ಬೆಂಗಳೂರು–22, ಇವರ ಕಛೇರಿ ನಡಾವಳಿ

ಉಪಸ್ಥಿತರು: ಶ್ರೀ ಅಶ್ವಾಕ್ ಅಹಮದ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರಿ, ಬೆಂಗಳೂರು (ಉತ್ತರ).

ವಿಷಯ: ವಾಹನ ಸಂಖ್ಯೆ: KA-01-G-946 (Jeep) ರ ನೋಂದಣಿ ರದ್ಧತಿ ಬಗ್ಗೆ.

ಉಲ್ಲೇಖ: 1) ಮಾಲೀಕರ ಅರ್ಜಿ ದಿನಾಂಕ:19.11.2008.
2) ಮೋಟಾರು ವಾಹನ ನಿರೀಕ್ಷಕರ ವರದಿ ದಿನಾಂಕ:20.09.2008.

ಪ್ರಸ್ತಾವನೆ:

ವಾಹನ ಸಂಖ್ಯೆ: ಕೆಎ–01–ಜಿ–946 ರ ಮಾಲೀಕರಾದ The Registrar of Co-Operative Societies in Karnataka, Bangalore Rural District, Malleshwaram Co-Operative Society Building, Bangalore, ರವರು ದಿನಾಂಕ:19.11.2008 ರಂದು ಈ ಕಛೇರಿಗೆ ಅರ್ಜಿ ಸಲ್ಲಿಸಿ ಸದರಿ ವಾಹನವು ಹಳೆಯದಾಗಿದ್ದು, ರಸ್ತೆಯಲ್ಲಿ ಸಂಚರಿಸಲು ಯೋಗ್ಯವಾಗಿಲ್ಲದ ಹಾಗೂ ದುರಸ್ತಿ ಮಾಡಿಸಲಾರದ ಸ್ಥಿತಿಯಲ್ಲಿರುವುದರಿಂದ ಅದರ ನೋಂದಣಿ ರದ್ಧುಪಡಿಸಲು ಅನುಮತಿ ಕೋರಿರುತ್ತಾರೆ. ಈ ಕಛೇರಿಯ ಮೋಟಾರು ವಾಹನ ನಿರೀಕ್ಷಕರು ತಮ್ಮ ವರದಿ ದಿನಾಂಕ:20.09.2008 ರಲ್ಲಿ ವಾಹನದ ನೋಂದಣಿಯನ್ನು ರದ್ಧುಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ವಾಹನಕ್ಕೆ ದಿನಾಂಕ:31.01.2010 ವರೆಗೆ ತೆರಿಗೆ ವಿನಾಯಿತಿ ನೀಡಲಾಗಿದೆ. ಈ ಮೇಲ್ಕಂಡ ಕಾರಣಗಳಿಂದ ಮೋಟಾರು ವಾಹನ ಸಂಖ್ಯೆ: KA-01-G-946 ರ ನೋಂದಣಿಯನ್ನು ರದ್ಧುಮಾಡಲು ಈ ಕೆಳಗಿನಂತೆ ಆದೇಶಿಸಿರುತ್ತೇನೆ.

ಆದೇಶ ಸಂಖ್ಯೆ: ಸ.ಪ್ರಾ.ಸಾ.ಅ./ಬೆಂ.(ಉ)/KA-01-G-946/09-10, ದಿನಾಂಕ:23ನೇ ಜೂನ್, 2009

1988ರ ಕೇಂದ್ರ ಮೋಟಾರು ವಾಹನ ಕಾಯ್ದೆ ಅಧಿನಿಯಮ 55(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಅಶ್ವಾಕ್ ಅಹಮದ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರಿ ಆದ ನಾನು ಮೇಲ್ಕಂಡ ಕಾರಣಗಳಿಂದಾಗಿ ಮೋಟಾರು ವಾಹನ ಸಂಖ್ಯೆ: KA-01-G-946 (Jeep) ರ ಮೇಲೆ ಏನಾದರೂ ತೆರಿಗೆ, ಆಡಿಟ್, ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡುಬಂದರೆ ಅದನ್ನು ವಾಹನದ ಮಾಲೀಕರೇ ಕಟ್ಟಬೇಕೆಂಬ ನಿಬಂಧನೆಯೊಂದಿಗೆ ನೋಂದಣಿಯನ್ನು ರದ್ದು ಮಾಡಿರುತ್ತೇನೆ.

ವಾಹನದ ವಿವರಗಳು

1.	ಮೋಟಾರು ವಾಹನ ಸಂಖ್ಯೆ	KA-01-G-946
2.	ವಾಹನದ ನೋಂದಣಿ ದಿನಾಂಕ	18.02.1993
3.	ವಾಹನದ ತಯಾರಕನ ಹೆಸರು	Bajaj Auto Ltd.,
4.	ವಾಹನ ತಯಾರಾದ ವರ್ಷ	1992
5.	ವಾಹನದ ವರ್ಗ	LMV Jeep
6.	ಆಸನ ಸಾಮರ್ಥ್ಯ	5+1=6 in all
7.	ಅಶ್ವಶಕ್ತಿ	2399 CC
8.	ಚಾಸೀಸ್ ಸಂಖ್ಯೆ	TX 907743

9.	ಇಂಜಿನ್ ಸಂಖ್ಯೆ	616969 070361
10.	ಮಾಲೀಕರ ಹೆಸರು ಮತ್ತು ವಿಳಾಸ	The Registrar of Co-Operative Societies in Karnataka, B'lore Rural District, Malleshwaram Co-Operative Society Building, Bangalore.

ಅಶ್ಫಾಕ್ ಅಹಮದ್
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,
ಬೆಂಗಳೂರು (ಉತ್ತರ).

ಪಿ.ಆರ್.695

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ–4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್–238/2006–07,

ಅರ್ಜಿದಾರರು:		**ಪ್ರತಿವಾದಿಗಳು:**
1) ಶ್ರೀ ಟಿ.ಆರ್. ಚನ್ನೇಗೌಡ ಬಿನ್ ಲೇಟ್ ರಾಮನರಸಿಂಹಯ್ಯ 2) ಶ್ರೀ ಟಿ.ಆರ್. ಚಿಕ್ಕಣ್ಣ ಬಿನ್ ಲೇಟ್ ರಾಮನರಸಿಂಹಯ್ಯ 3) ಶ್ರೀ ಟಿ.ಆರ್. ನರಸಿಂಹಮೂರ್ತಿ ಬಿನ್ ಲೇಟ್ ರಾಮನರಸಿಂಹಯ್ಯ. 4) ಶ್ರೀ ಟಿ.ಆರ್. ಗೋಪಾಲಕೃಷ್ಣ ಬಿನ್ ಲೇಟ್ ರಾಮನರಸಿಂಹಯ್ಯ. ನಂ.5, 1ನೇ ಮುಖ್ಯರಸ್ತೆ, 4ನೇ ಕ್ರಾಸ್, ನೇತ್ರಾವತಿ ಟೆಂಟ್ ರಸ್ತೆ, ಕನಕನಗರ, ಯಳಚೇನಹಳ್ಳಿ, ಜೆ.ಪಿ.ನಗರ ಅಂಚೆ, ಬೆಂಗಳೂರು–560 078.	**ವಿರುದ್ಧ**	ದಿ ಚೀಫ್ ಟ್ರಾಫಿಕ್ ಮ್ಯಾನೇಜರ್, ಬಿ.ಎಂ.ಟಿ.ಸಿ. ಕೇಂದ್ರೀಯ ವಿಭಾಗ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:04.03.2009ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅವರ ತಂದೆ ಲೇಟ್ ಟಿ.ಸಿ. ರಾಮನರಸಿಂಹಯ್ಯ ಇವರು ಪ್ರತಿವಾದಿ ಸಂಸ್ಥೆಯಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ, ದಿನಾಂಕ:30.06.1996ರಂದು ಸೇವೆಯಿಂದ ನಿವೃತ್ತಿ ಹೊಂದಿ, ತದನಂತರ ದಿನಾಂಕ:17.12.2008ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ವ್ಯತ್ಯಾಸದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:20.07.2009

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,
ಉಪಧನ ಪಾವತಿ ಕಾಯ್ದೆ, ವಿಭಾಗ–4, ಬೆಂಗಳೂರು.

ಪಿ.ಆರ್.699

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ–4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್–06/2007–08,

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀಮತಿ ಭದ್ರಮ್ಮ ಕೋಂ ಲೇಟ್ ಕೆ. ನರಸಿಂಹಯ್ಯ, ನಂ.11, 3ನೇ ಕ್ರಾಸ್, ಚೈತನ್ಯ ನಿಲಯ, ಪೈಪ್‌ಲೈನ್ ರಸ್ತೆ, ವಿಜಯನಗರ, ಬೆಂಗಳೂರು–23.	**ವಿರುದ್ಧ**	ದಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಕೆ.ಎಸ್.ಆರ್.ಟಿ.ಸಿ. ಸೆಂಟ್ರಲ್ ಇಂಜಿನಿಯರಿಂಗ್ ಡಿವಿಜನ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:03.04.2007ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅವರ ಪತಿ ಲೇಟ್ ಕೆ. ನರಸಿಂಹಯ್ಯ ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 31 ವರ್ಷಗಳ ಕಾಲ ಸೇವೆ ಸಲ್ಲಿಸಿ, ಸೇವೆಯಲ್ಲಿದ್ದಾಗಲೇ ದಿನಾಂಕ:30.06.2000ರಂದು ಸೇವೆಯಿಂದ ನಿವೃತ್ತಿ ಹೊಂದಿ, ತದನಂತರ ದಿನಾಂಕ:11.02.2007 ರಂದು ಮರಣ ಹೊಂದಿದ್ದಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ವ್ಯತ್ಯಾಸದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:20.07.2009

ಎ.ಹೆಚ್. ಉಮೇಶ

ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ನಿಯಂತ್ರಣಾಧಿಕಾರಿಗಳು,

ಪಿ.ಆರ್.700

ಉಪಧನ ಪಾವತಿ ಕಾಯ್ದೆ, ವಿಭಾಗ-4, ಬೆಂಗಳೂರು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪವಿಭಾಗ, ಸೊರಬ

ನಮೂನೆ

ಸಚಿವಾಲಯ : ಕರ್ನಾಟಕ ಸರ್ಕಾರ

ಇಲಾಖೆ : ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ

ಸಬ್‌ಯೂನಿಟ್ : ಸಹಾಯಕ ಕಾರ್ಯಪಾಲಕ ಇಂಜಿನೀಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.7 ಉಪವಿಭಾಗ, ಸೊರಬ, ಶಿವಮೊಗ್ಗ ಜಿಲ್ಲೆ.

ಸಾರ್ವಜನಿಕ ಪ್ರಾಧಿಕಾರಿ : ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು-560001.

ಮೇಲ್ಮನವಿ ಪ್ರಾಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ)	ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ)	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಹೆಸರು/ವಿಳಾಸ/ಫೋನ್ ಇತ್ಯಾದಿ)
ಶ್ರೀ ಜಿ.ಆರ್. ಚಂದ್ರಶೇಖರಪ್ಪ, ಕಾರ್ಯಪಾಲಕ ಇಂಜಿನಿಯರ್, ಲೋ.ಬಂ. & ಒ.ಜ.ಸಾ.ಇಲಾಖೆ, ಶಿವಮೊಗ್ಗ ವಿಭಾಗ, ಶಿವಮೊಗ್ಗ-577201.	ಶ್ರೀ ಎಸ್.ಡಿ. ವಿಶ್ವನಾಥ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋ.ಬಂ.& ಒ.ಜ.ಸಾ. ಇಲಾಖೆ, ನಂ.7, ಉಪವಿಭಾಗ, ಸೊರಬ-577429.	ಶ್ರೀ ಅನಿಲ್ ಕುಮಾರ್, ಸಹಾಯಕ ಇಂಜಿನಿಯರ್, ಲೋ.ಬಂ.& ಒ.ಜ.ಸಾ. ಇಲಾಖೆ, ನಂ.7 ಉಪವಿಭಾಗ, ಸೊರಬ-577429.
ಫ್ಯಾಕ್ಸ್: 08182-274942	ಫ್ಯಾಕ್ಸ್:	ಫ್ಯಾಕ್ಸ್:
ಕಛೇರಿ ಫೋನ್: 08182-274942	ಕಛೇರಿ ಫೋನ್: 08184 272319	ಕಛೇರಿ ಫೋನ್: 08184 272319
ಇ-ಮೇಲ್: eesmg@kpwd.gov.in	ಇ-ಮೇಲ್: aeesrb@kpwd.gov.in	ಇ-ಮೇಲ್: aeesrb@kpwd.gov.in

ಸಹಾಯಕ ಕಾರ್ಯಪಾಲಕ ಇಂಜಿನಿಯರ್,

ನಂ.7 ಲೋ.ಬಂ. ಮತ್ತು ಒ.ಜ.ಸಾ.ಇಲಾಖೆ, ಉಪವಿಭಾಗ, ಸೊರಬ.

ASSISTANT EXECUTIVE ENGINEER, NO.7 PW P & IWTD, SUB-DIVISION, SORABA-577429

FORMAT

Secretariat : Govt of Karnataka

Department : Public Works Department

Sub Unit : A.E.E. PW. Port & IWT Department. No.7, Sub-Division, Soraba, Shimoga District.

Public Authority: The Chief Engineer, C & B (South), PW P & IWTD, KR Circle, Bangalore-01

Applellate Authority (Name/Address/Phone etc.,)	Public Information Officer (Name/Address/Phone etc.,)	Assistant Public Information Officer (Name/Address/Phone etc.,)
Sri G.R. Chandrashekarappa, Executive Engineer, PW P & IWTD, Shimoga Division, Shimoga-577201PW P & IWTD.	Sri S.D. Vishwanatha, Assistant Executive Engineer, No.7 PW P & IWTD, Sub-Division, Soraba-577429.	Sri Anil Kumar, Assistant Engineer, No.7 PW P & IWTD, Sub-Division, Soraba-577429.
Fax: 08182-274942	Fax: 08184 272319	Fax: 08184 272319
E-Mail: eesmg@kpwd.gov.in	E-Mail: aeesrb@kpwd.gov.in	E-Mail: aeesrb@kpwd.gov.in

Assistant Executive Engineer, No.7 PW P & IWTD,
Sub-Division, Soraba-577429.

PR-701

COMMERCIAL TAXES DEPARTMENT

Office of the Asst. Commissioner of Commercial Taxes Local Vat Office-380, Belgaum

NOTIFICATION

No.LVO-380/BGM/CST/2008-09/B- Dated:17th July, 2009

ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009

(Notified Authority Under the Rule 6(i) of the CST (Karnataka) Rules, 1957)

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

Series & Serial Number of Declaration Forms lost/destroyed or Stolen	Name & Address of the dealer to whom declaration forms are issued by the department with date of issue	Registration Certificate No.of the dealer under CST Act, 1956	The Address of the dealer to whom the declaration was/were sent	Date of issue of Forms by the dealer	Whether 1o00000000..0st destroyed or stolen	Remarks
4887381	M/s Hinustan Engineers, 341/2, Udyambag.Belgaum.on 14.05.2007.	TIN: 29300115277	Shanbag Agencies. Belgaum (cst-5105271	10.05.2007	Lost in transit	--

Assistant Commissioner of Commercial Taxes,
LVO-380, Belgaum.

PR-702

COMMERCIAL TAXES DEPARTMENT

Office of the Asst. Commissioner of Commercial Taxes Local Vat Office-380, Belgaum

NOTIFICATION

No.LVO-380/BGM/CST/2008-09/B- Dated:17th July, 2009

ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009

(Notified Authority Under the Rule 6(i) of the CST (Karnataka) Rules, 1957)

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

Series & Serial Number of Declaration Forms lost/destroyed or Stolen	Name & Address of the dealer to whom declaration forms are issued by the department with date of issue	Registration Certificate No.of the dealer under CST Act, 1956	The Address of the dealer to whom the declaration was/were sent	Date of issue of Forms by the dealer	Whether 1o00000000..0st destroyed or stolen	Remarks
0993648	Of Kailastej Engineers.D-78, Angoal Industrial Estate Belgaum Issued on 07.03.2006	TIN: 29680008027	Menon Metallics, (p) Ltd., Kolhapur.	27.05.2006	Lost in transit	--
0993651	-do-	-do-	-do-	27.05.2006	Lost in transit	--

Assistant Commissioner of Commercial Taxes,

PR-703 LVO-380, Belgaum.

COMMERCIAL TAXES DEPARTMENT

Office of the Asst. Commissioner of Commercial Taxes Local Vat Office-380, Belgaum

NOTIFICATION

No.LVO-380/BGM/CST/2008-09/B- Dated:17th July, 2009

ASSISTANT COMMISSIONER OF COMMERCIAL TAXES, LOCAL VAT OFFICE-130, BANGALORE, Dated:17th July, 2009

(Notified Authority Under the Rule 6(i) of the CST (Karnataka) Rules, 1957)

By virtue of the provisions of Rule 12(2) of the CST (Registration & Turnover) Rules 1957 and Rule 6(e) and 6(i) of the CST (Karnataka) Rules 1957, it is hereby notified for general information that the declaration in Form-C described below declared to be obsolete and invalid.

Series & Serial Number of Declaration Forms lost/destroyed or Stolen	Name & Address of the dealer to whom declaration forms are issued by the department with date of issue	Registration Certificate No.of the dealer under CST Act, 1956	The Address of the dealer to whom the declaration was/were sent	Date of issue of Forms by the dealer	Whether lost/ destroyed or stolen	Remarks
0800517	Shri Ganesh S/o Prabhakar Ajagaonkar. For A.R.P. Ajagaonka. Enterprisas, 702 Raviwar peth, Belgaum, Date of issue 17.12.2005	TIN: 29550394936	Ganesh Traders. Mapsa. Goa	29.12.2005	Lost in transit	--
0800521	-do-	-do-	Ganesh Traders. Mapsa. Goa	29.12.2005	Lost in transit	--

Assistant Commissioner of Commercial Taxes,

PR-704 LVO-380, Belgaum.

ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ: 1) ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ರವರ ಪತ್ರಸಂಖ್ಯೆ: ಸಿಬ್ಬಂದಿ–1/ಆಸ/ವಿವ/42/2004–05, ದಿನಾಂಕ:19.01.2005.

2) ಇಲಾಖಾ ಪತ್ರ ಸಂಖ್ಯೆ:ಇಎಸ್‌ಟಿ–1/ಐಎನ್‌ಕ್ಯೂ–1/21/2004–05 ದಿನಾಂಕ:17/29.06.2006.

3) ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು ಇವರ ಸ್ವೀಕೃತಿ ದಿನಾಂಕ:03.07.2006 ಮತ್ತು ಲಿಖಿತ ಹೇಳಿಕೆ ಪತ್ರ ದಿನಾಂಕ:18.07.2006.

4) ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ–1/ವಿಚಾರಣೆ–1/21/2004–05, ದಿನಾಂಕ:22.01.2007.

5) ವಿಚಾರಣಾಧಿಕಾರಿಗಳು ದಿನಾಂಕ:16.06.2007 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

6) ಸಂಖ್ಯೆ: ಸಿಬ್ಬಂದಿ–1/ವಿಚಾರಣೆ–1/21/2004–05 ದಿನಾಂಕ:20.08.2007, 2ನೇ ಕಾರಣ ಕೇಳುವ ಸೂಚನಾ ಪತ್ರ.

7) ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು ಇವರ ಲಿಖಿತ ಹೇಳಿಕೆ ದಿನಾಂಕ:27.08.2007.

8) ಸರ್ಕಾರದ ಆದೇಶ ಸಂಖ್ಯೆ: ಕೃತೋಇ/44/ಕೃಪವಿ/2006, ದಿನಾಂಕ:29.06.2007.

9) ಸರ್ಕಾರದ ಪತ್ರ ಸಂಖ್ಯೆ: ಕೃತೋಇ/20/ಕೃವಸೆ/2008, ದಿನಾಂಕ:13.08.2008.

10) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್/57/ಎಸ್‌ಆರ್‌ಆರ್75/ ದಿನಾಂಕ:05.06.1977.

ಪ್ರಸ್ತಾವನೆ:

ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ಹಾಲಿ ರೈತ ಸಂಪರ್ಕ ಕೇಂದ್ರ, ಕಸಬಾ–2 ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ:01.09.1993 ರಂದು ರಾಜೀನಾಮೆ ನೀಡಿದ್ದರಿಂದ ಸದರಿ ನೌಕರರ ರಾಜೀನಾಮೆ ಅಂಗೀಕರಿಸುವ ವಿಚಾರವನ್ನು ಬಾಕಿ ಇಟ್ಟು ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರು ದಿನಾಂಕ:31.08.1993ರ (ಅಪರಾಹ್ನ) ದಂದು ಕರ್ತವ್ಯದಿಂದ ಬಿಡುಗಡೆ ಮಾಡಿ ತದನಂತರ ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರು ದಿನಾಂಕ:24.09.1993ರಲ್ಲಿ ಸದರಿ ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಹೊರಡಿಸಿರುವ ಆದೇಶವನ್ನು ಹಿಂತೆಗೆದುಕೊಂಡು ರಾಜೀನಾಮೆಯು ಕೃಷಿ ನಿರ್ದೇಶಕರಿಂದ ಅಂಗೀಕೃತಗೊಳ್ಳುವವರೆಗೆ ಸದರಿ ಹುದ್ದೆಯಲ್ಲಿ ಮುಂದುವರೆಯಲು ಸೂಚಿಸಿ ಆದೇಶಿಸಿರುತ್ತಾರೆ. ಆದರೆ ನಂತರವೂ ನೌಕರರು ಕಛೇರಿ ಕೆಲಸಕ್ಕೆ ಹಾಜರಾಗಿರುವುದಿಲ್ಲ, ಹಾಗೂ ಸದರಿ ನೌಕರರನ್ನು ಬಿಡುಗಡೆಗೊಳಿಸಿರುವ ಆದೇಶವನ್ನು ಹಿಂತೆಗೆದುಕೊಂಡಿದ್ದರೂ ಸಹ ಯಾವುದೇ ರಜಾ ಅರ್ಜಿಯನ್ನು ಸಲ್ಲಿಸದೆ ದಿನಾಂಕ:01.09.1993 ರಿಂದ 22.02.2004ರ ವರೆಗೂ (ಸುಮಾರು 10 ವರ್ಷಕ್ಕೂ ಮೇಲ್ಪಟ್ಟು) ಅನಧೀಕೃತ ಗೈರು ಹಾಜರಾಗಿ ಕರ್ತವ್ಯ ಚ್ಯುತಿ ಎಸಗಿದ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಅನುಬಂಧ 1 ರಿಂದ 4 ರವರೆಗಿನ ದೋಷಾರೋಪಣಾ ಪಟ್ಟಿ ಕರಡು ತಯಾರಿಸಿ ಮೂಲ ದಾಖಲಾತಿಯೊಂದಿಗೆ ಜಂಟಿ ಕೃಷಿ ನಿರ್ದೇಶಕರು, ಶಿವಮೊಗ್ಗ ರವರು ಓದಲಾದ ಕ್ರಮಸಂಖ್ಯೆ (1)ರಲ್ಲಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಓದಲಾದ ಕ್ರಮಸಂಖ್ಯೆ (2) ರಲ್ಲಿ ಸದರಿ ನೌಕರರ ಕರ್ತವ್ಯ ನಿರ್ಲಕ್ಷ್ಯತೆ ಬಗ್ಗೆ ಇವರ ವಿರುದ್ಧ ಕೆ.ಸಿ.ಎಸ್. (ಸಿಸಿಎ) 1957ರ ನಿಯಮ 11ರ ಅನ್ವಯ ಇಲಾಖಾ ವಿಚಾರಣೆ ನಡೆಸಲು ನಿರ್ಧರಿಸಿ ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ಪರಿಷ್ಕರಿಸಿ ಸಿದ್ಧಪಡಿಸಿ ಜಾರಿ ಮಾಡಲಾಯಿತು.

ಸದರಿ ನೌಕರರು ದೋಷಾರೋಪಣಾ ಪಟ್ಟಿಯನ್ನು ದಿನಾಂಕ:03.07.2006 ರಂದು ಸ್ವೀಕರಿಸಿ ಓದಲಾದ ಕ್ರಮಸಂಖ್ಯೆ: (3)ರಲ್ಲಿ ಸ್ವೀಕೃತಿ ಹಾಗೂ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಈ ಹೇಳಿಕೆಯನ್ನು ಪರಿಶೀಲಿಸಲಾಗಿ ಇವರ ವಿರುದ್ಧ ಮಾಡಲಾದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಈ ಪ್ರಕರಣದಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು ವಿಚಾರಣೆ ನಡೆಸಲು ನಿರ್ಧರಿಸಿ ಓದಲಾದ ಕ್ರಮಸಂಖ್ಯೆ (4)ರಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ ವಿಚಾರಣಾಧಿಕಾರಿಗಳು ನಿಯಮಾನುಸಾರ ವಿಚಾರಣೆ ಕೈಗೊಂಡು ಓದಲಾದ ಕ್ರಮಸಂಖ್ಯೆ (5)ರಲ್ಲಿ ವಿಚಾರಣಾ ವರದಿಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯಲ್ಲಿ ಸದರಿ ನೌಕರರು ಸರ್ಕಾರಿ ಸೇವೆಯಿಂದ ಗೈರು ಹಾಜರಾಗಿರುವ ಬಗ್ಗೆ ಯಾವುದೇ ಸಂಶಯವಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಓದಲಾದ ಕ್ರಮಸಂಖ್ಯೆ (6) ರಲ್ಲಿ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಯಿತು. ಇದನ್ನು ಸ್ವೀಕರಿಸಿ ನೌಕರರು ಓದಲಾದ ಕ್ರಮಸಂಖ್ಯೆ: (7) ರಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಈ ಹೇಳಿಕೆಯಲ್ಲಿ ಪರಿಗಣಿಸಬಹುದಾದ ಅಂಶಗಳು ಕಂಡುಬರುವುದಿಲ್ಲ.

ಈ ಪ್ರಕರಣದಲ್ಲಿ ಶ್ರೀ ಕೆ.ಜಿ. ಗುರುಬಸಪ್ಪ, ಸಹಾಯಕ ಕೃಷಿ ನಿರ್ದೇಶಕರು, ಶಿವಮೊಗ್ಗ ಇವರ ವಿರುದ್ಧ ಕರ್ತವ್ಯ ಚ್ಯುತಿ ಬಗ್ಗೆ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಯಿತು. ಸದರಿಯವರು ದಿನಾಂಕ:22.12.2006 ರಂದು ಮರಣ

ಹೊಂದಿರುವುದರಿಂದ ಓದಲಾದ ಕ್ರಮಸಂಖ್ಯೆ (8) ರಲ್ಲಿ ಇವರ ವಿರುದ್ಧ ಸರ್ಕಾರದ ಮಟ್ಟದಿಂದ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ.

ಓದಲಾದ ಕ್ರಮಸಂಖ್ಯೆ (9)ರ ಪತ್ರದಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲು ಸರ್ಕಾರದಿಂದ ಇಲಾಖೆಗೆ ನಿರ್ದೇಶಿತವಾಗಿದೆ. ಅದರಂತೆ ವಿಚಾರಣಾ ವರದಿಯಲ್ಲಿ ಇವರ ಗೈರು ಹಾಜರಿ ಆರೋಪ ಸಾಭೀತಾಗಿರುವುದರಿಂದ ಹಾಗೂ ಓದಲಾದ ಕ್ರಮಸಂಖ್ಯೆ (10) ರಲ್ಲಿನ ಪರಿವೀಕ್ಷಣಾ ನಿಯಮ 1977 ಅಧಿಸೂಚನೆಯನ್ವಯ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಇಎಸ್‌ಟಿ–1/ಐಎನ್‌ಕ್ಯೂ–1/21/2004–05, ದಿನಾಂಕ:21ನೇ ಜುಲೈ, 2009

ಈ ಕೆಳಗೆ ಸಹಿ ಮಾಡಿರುವ ಡಾ: ಬಾಬುರಾವ್ ಮುಡಬಿ, ಭಾ.ಆ.ಸೇ. ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಆದ ನಾನು ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಕೆ.ಎಂ. ಶಿವಪ್ರಕಾಶ, ಕೃಷಿ ಸಹಾಯಕರು, ರೈತ ಸಂಪರ್ಕ ಕೇಂದ್ರ, ಕಸಬಾ–2, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿವಮೊಗ್ಗ ಇವರ ವಿರುದ್ಧದ (ಸುಮಾರು 10 ವರ್ಷಕ್ಕೂ ಮೇಲ್ಪಟ್ಟು ಅನಧಿಕೃತ ಗೈರು ಹಾಜರಿ) ಆರೋಪವು ವಿಚಾರಣಾ ವರದಿಯಲ್ಲಿ ಸಾಭೀತಾಗಿರುವುದರಿಂದ "ದೋಷಿ" ಎಂದು ಹಾಗೂ ಇಲ್ಲಿಯವರೆಗೂ "ಪರಿವೀಕ್ಷಣಾ ಅವಧಿ" ಘೋಷಣೆಯಾಗದಿರುವುದರಿಂದ ಇವರನ್ನು ಪರಿವೀಕ್ಷಣಾ ನಿಯಮ 1977ರ ಅಧಿಸೂಚನೆಯಂತೆ ಮತ್ತು ಕರ್ನಾಟಕ ನಾಗರೀಕರ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(vii) ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ ತೆಗೆದುಹಾಕಲು ಆದೇಶಿಸಿರುತ್ತೇನೆ.

ಡಾ: ಬಾಬುರಾವ್ ಮುಡಬಿ

ಪಿ.ಆರ್.706 ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿ.

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ, ಲೋ.ಬಂ & ಒ.ಜ.ಸಾ.ಇ. ನಂ. 7, ಉಪವಿಭಾಗ, ಸೊರಬ

ಸುತ್ತೋಲೆ

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(1)ರ ಅಡಿಯಲ್ಲಿ ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯವಿಧಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ:ಸಿ.ಬಿ.ಎಸ್./ ಮಾಹಿತಿ ಹಕ್ಕು ಕೈಪಿಡಿ/2005/ಇ.ಎಸ್.ಎಲ್/05–06/ದಿನಾಂಕ:19.09.2005ರ ಪ್ರಕಾರ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಾದ ಶ್ರೀ ಎಸ್.ಡಿ. ವಿಶ್ವನಾಥ, ನಂ.7 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ ವಿಭಾಗ ಸೊರಬ. ಇವರು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ (ಎಸ್.ಪಿ.ಐ.ಓ) ನೇಮಕಗೊಂಡಿದ್ದು, ಮಾಹಿತಿ ನೀಡುವ ಪ್ರಕ್ರಿಯೆಯು ಸುಲಲಿತವಾಗಿ ನಡೆಯಲು ಅನುಕೂಲವಾಗುವಂತೆ ಶ್ರೀ ಅನಿಲ್ ಕುಮಾರ್, ಸಹಾಯಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.7ನೇ ಉಪ ವಿಭಾಗ ಸೊರಬ. ಇವರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಒ) ಯಾಗಿ ನೇಮಕಗೊಳಿಸಲಾಗಿದೆ.

ಈ ಕಛೇರಿಯ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುವ ಸಲುವಾಗಿ ಮಾಹಿತಿ ಹಕ್ಕು ಕೈಪಿಡಿ–2005 ನ್ನು ಈ ಮೂಲಕ ಪರಿಷ್ಕರಿಸಿ ಹೊರಡಿಸಲಾಗಿದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಸೊರಬ.

ಕರ್ತವ್ಯದ ಹಾಜರಾತಿ

ದಿನಾಂಕ:01.04.2009

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ–2005 ಸೆಕ್ಷನ್ 5(1) ರ ಪ್ರಕಾರ ಶ್ರೀ ಎಸ್.ಡಿ. ವಿಶ್ವನಾಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ.ಐ.ಓ) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ:01.04.2009 ರಿಂದ ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಎಸ್.ಡಿ. ವಿಶ್ವನಾಥ
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಕರ್ತವ್ಯದ ಹಾಜರಾತಿ

ದಿನಾಂಕ:01.04.2009

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ–2005 ಸೆಕ್ಷನ್ 5(2) ರ ಪ್ರಕಾರ ಶ್ರೀ ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್ ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ) ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 01.04.2009 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಅನೀಲ್ ಕುಮಾರ್
ಸಹಾಯಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಮೇಲಿನ ಅಧಿಕಾರಿಗಳು ಮಾಹಿತಿಯನ್ನು 30 ದಿನಗಳೊಳಗಾಗಿ ನೀಡದಿದ್ದ ಪಕ್ಷದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಮತ್ತು ಮೇಲ್ಮನವಿಯನ್ನು ಈ ಕೆಳಕಂಡ ಅಧಿಕಾರಿಗಳಿಗೆ ನೀಡಬಹುದು.
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಸುವರ್ಣ ಕರ್ನಾಟಕ – 2008
ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಮಾಹಿತಿ ಹಕ್ಕು ಕೈಪಿಡಿ – 2005
ಸೆಕ್ಷನ್ 4 (1) (ಬಿ) ಅನ್ವಯ

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಛೇರಿ –
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ.7, ಉಪ ವಿಭಾಗ
ಸೊರಬ. ಶಿವಮೊಗ್ಗ ಜಿಲ್ಲೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ ಸೊರಬ. ಶಿವಮೊಗ್ಗ ಜಿಲ್ಲೆ.

ಪ್ರಕಟಣೆ

1.	ಮಾಹಿತಿ ಪಡೆಯಲು ಹಕ್ಕು ಅಧಿನಿಯಮ, ನಿಯಮಗಳು 2005 ದಿನಾಂಕ:11.10.2005 ಮತ್ತು ಪರಿಷ್ಕರಣೆ ದಿನಾಂಕ:31.05.2009 ರಲ್ಲಿ ಇದ್ದಂತೆ.
2.	ಮಾಹಿತಿ ಕೋರಿಕೆ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು. ಅರ್ಜಿ ನಮೂನೆಯನ್ನು ಉಚಿತವಾಗಿ ಈ ಕಛೇರಿಯ ಸಾರ್ವಜನಿಕ ಮಾಹಿತಿ ಹಕ್ಕು ವಿಭಾಗದಿಂದ ಪಡೆಯಬಹುದು.
3.	ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಈ ಕಛೇರಿಯ ಸಾರ್ವಜನಿಕ ಟಪಾಲು ಸ್ವೀಕೃತಿ ವಿಭಾಗದಲ್ಲಿ ಸಲ್ಲಿಸಬೇಕು ಮತ್ತು ಸ್ವೀಕೃತಿಯನ್ನು ತಪ್ಪದೇ ಪಡೆಯಬೇಕು ಮತ್ತು ರೂ. 10.00 ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
4.	ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ ಸಂದಾಯ ಮಾಡಬೇಕಾದ ಶುಲ್ಕದ ಮಾಹಿತಿಯನು ನಿಮಗೆ 7 ದಿನಗಳ ಒಳಗೆ ತಿಳಿಸಲಾಗುವುದು.
5.	ಶುಲ್ಕ ಪಾವತಿಸಿದ ದಿನಾಂಕದಿಂದ 30 ದಿನಗಳೊಳಗೆ ಕೋರಿದ ಮಾಹಿತಿಯನ್ನು ಒದಗಿಸಲಾಗುತ್ತದೆ.
6.	ಅರ್ಜಿಯಲ್ಲಿ ಕೋರಿದ ಮಾಹಿತಿಯನ್ನು ಒದಗಿಸಲು ಅವಕಾಶವಿದ್ದಲ್ಲಿ 15 ದಿನಗಳೊಳಗೆ ತಿಳಿಸಲಾಗುವುದು.
7.	ನಿಗದಿತ ಕಾಲಾವಧಿಯಲ್ಲಿ ಮಾಹಿತಿ ಅಥವಾ ಸೂಚನೆ ನೀಡದಿದ್ದಲ್ಲಿ ಅಥವಾ ಆದೇಶದಿಂದ ಅರ್ಜಿದಾರರು ಬಾಧಿತರಾದಲ್ಲಿ 30 ದಿನಗಳೊಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು.
8.	ಮಾಹಿತಿ ನೀಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.7 ಉಪ ವಿಭಾಗ, ಸೊರಬ ಇವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.
9.	ಮೇಲ್ಮನವಿ ಸಲ್ಲಿಸಲು ಅಧೀಕ್ಷಕ ಇಂಜಿನಿಯರ್, ಲೋ.ಇ. ಶಿವಮೊಗ್ಗ ವೃತ್ತ, ಶಿವಮೊಗ್ಗ ಇವರು ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ.
10.	ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ದಿನಾಂಕ:01.04.2009.
ಸ್ಥಳ: ಸೊರಬ

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.7 ಲೋ.ಬಂ ಮತ್ತು ಒ.ಜ.ಸಾ.ಇಲಾಖೆ, ಸೊರಬ

ದಿನಾಂಕ:

ಸುತ್ತೋಲೆ

2005 ರ ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಕಾಯ್ದೆ 22) ಅಡಿಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರಿ ಅಧಿನಿಯಮದ ಸೆಕ್ಷನ್ 5(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 5(2) ರ ಅಡಿಯಲ್ಲಿ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಮತ್ತು ಸೆಕ್ಷನ್ 19(1) ರ ಅಡಿಯಲ್ಲಿ ಮೇಲ್ಮನವಿ ಪ್ರಾಧಿಕಾರ ಎಂದು ನೇಮಕ ಮಾಡಲಾಗಿದೆ.

ಕ್ರ. ಸಂ.	ಕಛೇರಿ ವಿಳಾಸ	ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1)	ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5(2)	ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19(1)
1	ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ.	ಎಸ್.ಡಿ ವಿಶ್ವನಾಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ.	ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್, ನಂ.7ನೇ ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಉಪ ವಿಭಾಗ ಸೊರಬ.	ಅಧೀಕ್ಷಕ ಅಭಿಯಂತರರು ಲೋ. ಬಂ. ಮತ್ತು ಒ. ಜ. ಸಾ. ಇಲಾಖೆ, ಶಿವಮೊಗ್ಗ ವೃತ್ತ ಶಿವಮೊಗ್ಗ.

ಎಸ್.ಡಿ. ವಿಶ್ವನಾಥ
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಾಹಿತಿ ಹಕ್ಕು ಕೈಪಿಡಿ – 2005 ಸೆಕ್ಷನ್ 4(1) (ಬಿ) ಅನ್ವಯ

1. ಸಂಸ್ಥೆ ಬಗ್ಗೆ ವಿವರಗಳು – ಕಾರ್ಯಗಳು ಮತ್ತು ಕರ್ತವ್ಯಗಳು

(ಅ) ಸಂಸ್ಥೆಯ ಹೆಸರು – ಲೋ.ಇ.ನಂ.7 ಉಪ ವಿಭಾಗ, ಸೊರಬ.

(ಆ) ರಚನೆ –

ಸಹಾಯಕ ಕಾರ್ಯಪಾಲಕ ಇಂಜಿನಿಯರ್–1

ತಾಂತ್ರಿಕ ಶಾಖೆ	ಆಡಳಿತ ಶಾಖೆ	ಪ್ರವಾಸಿ ಮಂದಿರದ ಸಿಬ್ಬಂದಿ ಶಾಖೆ
ಸಹಾಯಕ ಇಂಜಿನಿಯರ್–2	ಪ್ರ.ದ.ಸ. –1	ಮೇಟಿ–1 (ಖಾಲಿ ಇದೆ)
ಕಿರಿಯ ಇಂಜಿನಿಯರ್–2	ದ್ವಿ.ದ.ಸ.–2	ವಾಟರ್‌ಬಾಯ್–1 (ನಿಯೋಜನೆ ಶಿವಮೊಗ್ಗ ವೃತ್ತ ಶಿವಮೊಗ್ಗ)
ವರ್ಕ್ ಇನ್ಸ್‌ಪೆಕ್ಟರ್–1	ಗ್ರೂಪ್ 'ಡಿ'–2	ಸ್ಲೀಪರ್–1

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ. 7, ಉಪ ವಿಭಾಗ, ಸೊರಬ.

ಕಾರ್ಯಗಳು ಮತ್ತು ಕರ್ತವ್ಯಗಳು

ಸೊರಬ ತಾಲ್ಲೂಕು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳು, ರಸ್ತೆಗಳು ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಆರ್ಥಿಕ ಹಾಗೂ ಸೇವೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ ಹಾಗೂ ಸೊರಬ ತಾಲ್ಲೂಕಿಗೆ ಸಂಬಂಧಿಸಿದಂತೆ ಒಳಗೊಂಡಿರುತ್ತದೆ.

2. ಅಧಿಕಾರಿಗಳು ಮತ್ತು ಸಿಬ್ಬಂಧಿಯವರ ಕರ್ತವ್ಯಗಳು:

(1) ಸಹಾಯಕ ಕಾರ್ಯಪಾಲಕ ಇಂಜಿನಿಯರ್–1:

ಸೊರಬ ತಾಲ್ಲೂಕು ಲೋ.ಇ. ಉಪವಿಭಾಗದ ವ್ಯಾಪ್ತಿಗೆ ಒಳಗೊಂಡಂತೆ ಸೊರಬ ತಾಲ್ಲೂಕಿಗೆ ಅಧಿಕೃತ ಮುಖ್ಯಸ್ಥರಾಗಿದ್ದು, ಸರ್ಕಾರಿ ನಿಯಮಗಳ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಾವಳಿಗೆ ಒಳಪಟ್ಟ ಪ್ರಕರಣಗಳ ವಿಲೇವಾರಿ ಮತ್ತು ಎಲ್ಲಾ ವ್ಯವಹಾರದ ಜವಾಬ್ದಾರಿ ಹೊಂದಿರುತ್ತಾರೆ ಹಾಗೂ ಅಧೀನ ಸಿಬ್ಬಂದಿಯ ಮೇಲ್ವಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ.

(2) ಸಹಾಯಕ ಇಂಜಿನಿಯರ್–1:

ಸೊರಬ ತಾಲ್ಲೂಕಿನ ಉಳವಿ ಮತ್ತು ಕಸಬಾ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಕಟ್ಟಡ, ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಅಂದರೆ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವುದು.

(3) ಸಹಾಯಕ ಇಂಜಿನಿಯರ್–2:

ಸೊರಬ ತಾಲ್ಲೂಕಿನ ಕಸಬಾ ಮತ್ತು ಚಂದ್ರಗುತ್ತಿ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಕಟ್ಟಡ, ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಅಂದರೆ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವಹಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವುದು.

(4) ಕಿರಿಯ ಇಂಜಿನಿಯರ್–1:

ಸೊರಬ ತಾಲ್ಲೂಕಿನ ಆನವಟ್ಟಿ ಮತ್ತು ಜಡೆ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಕಟ್ಟಡ, ಸೇತುವೆ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಟೆಂಡರ್ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಪಾವತಿಗಾಗಿ ಸ.ಕಾ.ಇಂ. ರವರಿಗೆ ಸಲ್ಲಿಸುವುದು. ಅದಲ್ಲದೆ ಸ.ಕಾ.ಇಂ.ರವರು ವಹಿಸಿದ ಇತರೆ ಕೆಲಸಗಳು.

(5) ಕಿರಿಯ ಇಂಜಿನಿಯರ್–2:

ಡಿ.ಎಂ. : ಉಪವಿಭಾಗ ಶಾಖೆಯ ಮಾಸಿಕ ಎಂ.ಎಂ.ಆರ್. ಮೀಟಿಂಗ್ ಪತ್ರಗಳನ್ನು ಕ್ರೋಢೀಕರಿಸಿ ಸಲ್ಲಿಸುವುದು. ಎಲ್.ಎ.ಕ್ಯೂ.ಎಲ್.ಸಿ.ಕ್ಯೂ. ಪತ್ರಗಳ ವ್ಯವಹಾರ ನಿರ್ವಹಣೆ, ರಸ್ತೆಗಳ ನಕ್ಷೆ ನಿರ್ವಹಣೆ ಕಟ್ಟಡ ಸೇತುವೆಗಳ ಬಗ್ಗೆ ಮತ್ತು ರಸ್ತೆಗಳಲ್ಲಿ ಚಲಿಸುವ ವಾಹನಗಳ ಗಣಕೀಕರಣದ ಬಗ್ಗೆ ವರದಿ ಸಲ್ಲಿಕೆ.

(6) ಕಿರಿಯ ಇಂಜಿನಿಯರ್–3 (ತಾತ್ಕಾಲಿಕ ನಿಯೋಜನೆ–1):

ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಶಿವಮೊಗ್ಗ ವಿಭಾಗ ಶಿವಮೊಗ್ಗ ಕಛೇರಿಯಿಂದ ಈ ಉಪವಿಭಾಗ ಕಛೇರಿಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸೊರಬ ತಾಲ್ಲೂಕಿನ ಕುಪ್ಪಗಡ್ಡೆ, ಜಡೆ ಮತ್ತು ಉಳವಿ ಹೋಬಳಿಗಳ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗಳು, ರಸ್ತೆ, ಸೇತುವೆ ಮತ್ತು ಸೊರಬ ಪಟ್ಟಣದಲ್ಲಿ ಕಟ್ಟಡ ಕಾಮಗಾರಿ ಇತ್ಯಾದಿಗಳ ಉಸ್ತುವಾರಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಟೆಂಡರ್ ದಾಖಲೆಗಳನ್ನು ಸಿದ್ದಪಡಿಸುವುದು. ನಿಯತಕಾಲಿಕ ವರದಿಗಳನ್ನು ಉಪವಿಭಾಗ ಕಛೇರಿಗೆ ಸಲ್ಲಿಸುವುದು ಗುತ್ತಿಗೆದಾರರ ಬಿಲ್ಲುಗಳನ್ನು ಸಿದ್ದಪಡಿಸುವುದು ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ ಪಾವತಿಗಾಗಿ ಸ.ಕಾ.ಇಂ. ರವರಿಗೆ ಸಲ್ಲಿಸುವುದು. ಅದಲ್ಲದೆ ಸ.ಕಾ.ಇಂ.ರವರು ವಹಿಸಿದ ಇತರೆ ಕೆಲಸಗಳು.

(7) ಪ್ರಥಮ ದರ್ಜೆ ಸಹಾಯಕ–1:

ಆಡಳಿತ ಶಾಖೆಯ ಪತ್ರ ವ್ಯವಹಾರ ಉಪವಿಭಾಗ ಕಛೇರಿಯ ಕಾಮಗಾರಿ ಮತ್ತು ಸಾಮಾನ್ಯ ನಗದು ಪುಸ್ತಕ ನಿರ್ವಹಣೆ, ಮಂಜೂರಾದ ಕಾಮಗಾರಿ ಬಿಲ್ಲುಗಳ ಪ್ರಿ ಆಡಿಟ್ ಮಾಡುವುದು, ಸಿಬ್ಬಂದಿ ವೆಚ್ಚದ ವರದಿ ಸಲ್ಲಿಸುವುದು. ರಹಸ್ಯ ವರದಿಗಳ ನಿರ್ವಹಣೆ, ರಶೀದಿ ಪುಸ್ತಕ ಚಲನ್ ನಿರ್ವಹಣೆ, ಸಿಬ್ಬಂದಿ ವರ್ಗದ ಸೇವಾ ಪುಸ್ತಕ ನಿರ್ವಹಣೆ. ಸ.ಕಾ.ಇಂ, ರವರು ನಿರ್ದೇಶಿಸುವ ಯಾವುದೇ ಕೆಲಸಗಳು.

(8) ದ್ವಿತೀಯ ದರ್ಜೆ ಸಹಾಯಕ–1:

ಉಗ್ರಾಣ ಶಾಖೆಗೆ ಸಂಬಂಧಿಸಿದ ವ್ಯವಹಾರ ಮಾಸಿಕ ಲೆಕ್ಕ ಪತ್ರ ಸದ್ಯಕ್ಕೆ ಅರ್ಧವಾರ್ಷಿಕ, ವಾರ್ಷಿಕ ವರದಿ ಸಲ್ಲಿಕೆ, ಉಗ್ರಾಣ ಶಾಖೆಗೆ ಸಂಬಂಧಿಸಿದ ಇತರೆ ಕಡತಗಳ ವಿಲೇವಾರಿ, ಕಾಮಗಾರಿಗೆ ಸಂಬಂಧಿಸಿದ ಪತ್ರ ವ್ಯವಹಾರ ಮತ್ತು ಅಧಿಕಾರಿ/ಸಿಬ್ಬಂದಿಗಳ ವೇತನ ಬಿಲ್ಲು ತಯಾರಿಕೆ ಹಾಗೂ ಸಲ್ಲಿಕೆ. ಸ.ಕಾ.ಇಂ, ರವರು ನಿರ್ದೇಶಿಸುವ ಕೆಲಸಗಳು.

(9) ದ್ವಿತೀಯ ದರ್ಜೆ ಸಹಾಯಕ–2:

ಆಮದು ಮತ್ತು ರಫ್ತು ವಹಿ ನಿರ್ವಹಣೆ, ಉದ್ಯೋಗ ವಿನಿಮಯ ಕಛೇರಿಯ ವರದಿಗಳ ಸಲ್ಲಿಕೆ. ಕಛೇರಿಯ ಅಧಿಕಾರಿ/ಸಿಬ್ಬಂಧಿಯವರ ಪ್ರಯಾಣ ಭತ್ಯೆ ಬಿಲ್ಲುಗಳನ್ನು ತಯಾರಿಸುವುದು ಹಾಗೂ ಸ.ಕಾ.ಇಂ, ರವರು ನಿರ್ದೇಶಿಸುವ ಕೆಲಸಗಳು.

(10) ಗ್ರೂಪ್ 'ಡಿ'–1:

ಕಛೇರಿಯ ಎಲ್ಲಾ ಕೊಠಡಿಗಳನ್ನು ಶುಚಿಯಾಗಿಡುವುದು. ಕಡತಗಳ ವಿಲೇವಾರಿ ಬಗ್ಗೆ ಅಧಿಕಾರಿ:ಸಿಬ್ಬಂದಿಯವರಿಗೆ ಸಹಕರಿಸುವುದು, ತಲುಪಿಸುವುದು. ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸುವುದು.

(11) ಗ್ರೂಪ್ 'ಡಿ'–2:

ಕಛೇರಿಯ ಜೀಪು ಚಾಲನೆಗೆ ಮಂಜೂರಾದ ಹುದ್ದೆಯಿಲ್ಲದ ಕಾರಣ ಸದರಿ ನೌಕರರು ವಾಹನ ಚಾಲನೆಗೆ ಅವಶ್ಯವಿರುವ ದಾಖಲಾತಿಗಳನ್ನು ಹೊಂದಿರುವ ಕಾರಣ ಉಪವಿಭಾಗದ ಜೀಪು ಚಾಲನೆಗೆ ತಾತ್ಕಾಲಿಕವಾಗಿ ನಿಯೋಜಿಸಿದೆ.

(12) ವರ್ಕ್ ಇನ್ಸ್‌ಪೆಕ್ಟರ್ :

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಸೂಚಿಸಿರುವಂತೆ ಶಾಖಾಧಿಕಾರಿಗಳ ಕಾಮಗಾರಿ ಕಾರ್ಯ ನಡೆಯುವ ಸಮಯದಲ್ಲಿ ಸ್ಥಳದಲ್ಲಿದ್ದು ಉಸ್ತುವಾರಿ ನಿರ್ವಹಣೆ, ಹಾಗೂ ಪ್ರತಿನಿತ್ಯ ಈ ಕಾಮಗಾರಿ ಬಗ್ಗೆ ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ವರದಿ ಮಾಡುವುದು.

(13) ಪ್ರವಾಸಿ ಮಂದಿರದ ಸಿಬ್ಬಂದಿ:

(1) ಮೇಟಿ : ಖಾಲಿ

(2) ವಾಟರ್‌ಬಾಯ್: ವೃತ್ತ ಕಛೇರಿಯಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.

(3) ಸ್ವೀಪರ್: ಪ್ರವಾಸಿ ಮಂದಿರದ ಆವರಣ, ಕೊಠಡಿ, ಶೌಚಾಲಯ ಶುಚಿತ್ವದ ನಿರ್ವಹಣೆ.

4. ಕಾರ್ಯನಿರ್ವಹಿಸುವವರಿಗೆ ಅನುಸರಿಸುವ ಮಾನದಂಡಗಳು :

ಕೆ.ಪಿ.ಡಬ್ಲ್ಯೂ.ಡಿ. 'ಡಿ' ಕೋಡ್ ಮತ್ತು ಕೆ.ಪಿ.ಡಬ್ಲ್ಯೂ. ಡಿ.ಎ.ಕೋಡ್ ಕರ್ನಾಟಕ ಆಕ್ಟ್–2002 ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

5. ಕಾರ್ಯಗಳನ್ನು ನಿರ್ವಹಿಸುವಲ್ಲಿ ಇಲಾಖೆಯ ಸಿಬ್ಬಂದಿ ಹೊಂದಿರುವ ಅಥವಾ ಉಪಯೋಗಿಸುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿ ಮತ್ತು ದಾಖಲೆಗಳು:

(ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು –ನ 1958

(ಆ) ಕರ್ನಾಟಕ ಆರ್ಥಿಕ ಸಂಹಿತೆ ನಿಯಮ

(ಇ) ಖಜಾನೆ ಸಂಹಿತೆ

(ಈ) ಸಾದಿಲ್ವಾರ್ ವೆಚ್ಚದ ಕೈಪಿಡಿ

(ಉ) ಕೆ.ಪಿ.ಡಬ್ಲ್ಯೂ.ಡಿ 'ಎ' ಕೋಡ್

(ಊ) ಕೆ.ಪಿ.ಡಬ್ಲ್ಯೂ.ಡಿ. 'ಡಿ' ಕೋಡ್

(ಋ) ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966

(ಎ) ಕರ್ನಾಟಕ ನಾಗರೀಕ ಸೇವೆಗಳು (ಸಿ.ಸಿ.ಎ) ನಿಯಮಗಳು 1957

(ಏ) ಕಾರ್ಯಾಲಯದ ಕೈಪಿಡಿ

(ಐ) ಉಗ್ರಾಣದ ಕೈಪಿಡಿ

(ಒ) ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ನಿಯಮಗಳು (ಆದೇಶ 02.02.01)

(ಓ) ಲೋ.ಇ. ಮತ್ತು ನೀರಾವರಿ ಇಲಾಖಾ ಅಧಿಕಾರಿ ಪ್ರತ್ಯಾಯೋಜನೆ ನಿಯಮಗಳು (ಆದೇಶ 15.12.1984)

(ಔ) ಸೇವಾ ವಿಷಯಗಳು ಇತ್ಯಾದಿ ವಿಚಾರದಲ್ಲಿ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ ಆರ್ಥಿಕ ಇಲಾಖೆ, ಲೋ.ಇ. ಹೊರಡಿಸಿದ ಆದೇಶ, ಸುತ್ತೋಲೆ ಸೂಚನೆಗಳು

(ಅಂ) ಇಲಾಖಾ ಮುಖ್ಯಸ್ಥರು ಹೊರಡಿಸಿದ ಸುತ್ತೋಲೆ ಮತ್ತು ಆದೇಶಗಳು

6. ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪಟ್ಟಿ

1. ವಿಷಯ ವಹಿ/ಸಿಬ್ಬಂದಿ ವಹಿ.
2. ನಗದು ಪುಸ್ತಕ ವಹಿ.
3. ವಸತಿಗೃಹ ಬಾಡಿಗೆ ವಹಿ.
4. ರವಾನೆವಹಿ/ಆಮದುವಹಿ
5. ಸ್ಥಳೀಯ ಬಟಾವಡೆ ಪುಸ್ತಕ

6. ಆಕಸ್ಮಿಕ ರಜಾ ವಹಿ
7. ನೌಕರರ ಸೇವಾ ವಹಿ
8. ಇನ್‌ಕಂಬೆನ್ಸಿ ವಹಿ
9. ವಿಧಾನ ಸಭಾ/ವಿಧಾನ ಪರಿಷತ್ ಪ್ರಶ್ನೆಗಳಿಗೆ ಸಂಬಂಧಿಸಿದ ರಿಜಿಸ್ಟರ್
10. ನ್ಯಾಯಾಲಯ/ಕೆ.ಎಟ್ ಪ್ರಕರಣಗಳ ಕಡತ
11. ಆಯವ್ಯಯ ಅಂದಾಜು ಪಟ್ಟಿ ಕಡತ
12. ಇಲಾಖಾ ಕಟ್ಟಡ, ರಸ್ತೆ ಮತ್ತು ಸೇತುವೆಗಳ ಅಂಕಿ ಅಂಶದ ರಿಜಿಸ್ಟರ್
13. ನಿವೃತ್ತಿ ವೇತನ ನಿಗಾ ವಹಿ
14. ಕಾರ್ಯನಿರ್ವಹಣಾ (ರಹಸ್ಯ) ವರದಿಗಳ ದಾಖಲು ವಹಿ
15. ಟಿ ಆಂಡ್ ಪಿ ಸ್ವೀಕೃತಿ ವಹಿ.
16. ಟಿ ಆಂಡ್ ಪಿ ನೀಡಿಕೆ ವಹಿ.
17. ಉಗ್ರಾಣ ದಾಸ್ತಾನು ವಹಿ.
18. ಉಗ್ರಾಣ ನೀಡಿಕೆ ವಹಿ.
19. ಎಸ್.ಬಿ.ಆರ್. ವಹಿ.
20. ಸ್ಟಾಂಪ್ ವಹಿ.
21. ತುಂಡುಗುತ್ತಿಗೆ ಪ್ರಸ್ತಾವನೆ ವಹಿ.
22. ನೌಕರರ ಸೇವಾ ಪುಸ್ತಕಗಳು.
23. ಅರ್ಧವಾರ್ಷಿಕ ದಾಸ್ತಾನು ವಹಿ.
24. ವಾರ್ಷಿಕ ಟಿ ಆಂಡ್ ಪಿ ವಹಿ.

7. ನೀತಿ ನಿಯಮಗಳನ್ನು ರೂಪಿಸಲು ಸಾರ್ವಜನಿಕರೊಂದಿಗೆ ಸಮಾಲೋಚಿಸಲು ಅಸ್ತಿತ್ವದಲ್ಲಿರುವ ಕಾರ್ಯವಿಧಾನದ ವಿವರಗಳು.

ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಉಪವಿಭಾಗದ ಮುಖ್ಯಸ್ಥರಾದ ಶ್ರೀ ಎಸ್.ಡಿ. ವಿಶ್ವನಾಥ ಸ.ಕಾ.ಇಂ. ಇವರನ್ನು ಮತ್ತು ಸಹಾಯಕ ಮಾಹಿತಿ ಅಧಿಕಾರಿಯನ್ನಾಗಿ ಶ್ರೀ ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್ ಇವರನ್ನು ನೇಮಕ ಮಾಡಲಾಗಿದೆ. ಇವರು ಸಂಬಂಧಿಸಿದ ಸಾರ್ವಜನಿಕ ವ್ಯಾಪ್ತಿಗಳಿಂದ ದೂರು ಆಕ್ಷೇಪಣೆಗಳನ್ನು ಆಹ್ವಾನಿಸಿ ಪರಿಶೀಲಿಸುತ್ತಾರೆ.

8. ಸರ್ಕಾರದ ಒಂದು ಭಾಗವಾಗಿ ಅಥವಾ ಸಲಹೆಗಳನ್ನು ಪಡೆಯುವ ಎರಡು ಅಥವಾ ಹೆಚ್ಚು ವ್ಯಾಪ್ತಿಗಳನ್ನೊಳಗೊಂಡ ಮಂಡಳಿ, ಪರಿಷತ್ತು ಸಮಿತಿ ಮತ್ತು ಇತರೆ ಅಂಗಗಳು ಮತ್ತು ಅವುಗಳ ಸಭೆಗಳು ಸಾರ್ವಜನಿಕ ಪ್ರದೇಶಕ್ಕೆ ಮುಕ್ತವಾಗಿದೆಯೆ ಅಥವಾ ಈ ಸಭಾ ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತಿವೆಯೇ ಎಂಬ ಬಗ್ಗೆ ವಿವರಣೆ.

– ಯಾವುದು ಇರುವುದಿಲ್ಲ –

9. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.7, ಲೋಕೋಪಯೋಗಿ ಇಲಾಖೆ, ಉಪವಿಭಾಗ ವ್ಯಾಪ್ತಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ದೂರವಾಣಿ ಸಂಖ್ಯೆ ವಿವರ.

ಕ್ರ. ಸಂ.	ಹೆಸರು ಶ್ರೀಯುತರಾದ	ಹುದ್ದೆ	ಕಛೇರಿ	ದೂರವಾಣಿ ಸಂಖ್ಯೆ	
				ಮನೆ	ಮೊಬೈಲ್
1.	ಎಸ್.ಡಿ. ವಿಶ್ವನಾಥ	ಸ.ಕಾ.ಇಂ. (29.08.08ರಿಂದ)	272319	–	9449833655
2.	ಅನಿಲ್ ಕುಮಾರ್	ಸ.ಇಂ.	"		9448185421
3.	ಹೆಚ್. ರಾಮಚಂದ್ರಪ್ಪ	ಸ.ಇಂ.	"		9481193201
4.	ಬಿ. ಓಂಕಾರನಾಯ್ಕ್	ಕಿ.ಇಂ.	"		9448852979
5.	ವಿ.ಆರ್.ರಾಜೇಂದ್ರ ಪ್ರಸಾದ್	ಕಿ.ಇಂ.	"	270426	9901346471
6.	ಮುತ್ತಪ್ಪ	ಪ್ರ.ದ.ಸ.	"	–	9480768548
7.	ಎಸ್.ಇ. ನೀಲಪ್ಪ	ದ್ವಿ.ದ.ಸ.	"		9008520566
8.	ಶಾಂತವೀರ	ದ್ವಿ.ದ.ಸ.	"		9740897093
9.	ಕೆ. ಶ್ರೀಧರ್	ಕಿ.ಕೆ.ನಿ.	"	272930	9241327789
10.	ಟಿ. ಹೆನ್ರಿ	'ಡಿ' ದರ್ಜೆ	"		9448921659
11.	ಪಾಂಡು	'ಡಿ' ದರ್ಜೆ	"		9449573606

ಪ್ರವಾಸಿ ಮಂದಿರದ ಸಿಬ್ಬಂದಿ

ಕ್ರ. ಸಂ.	ಹೆಸರು ಶ್ರೀಯುತರಾದ	ಹುದ್ದೆ	ಕಛೇರಿ	ದೂರವಾಣಿ ಸಂಖ್ಯೆ	
				ಮನೆ	ಮೊಬೈಲ್
12.	ಗುತ್ತಮ್ಮ	ಸ್ವೀಪರ್	272319		–
13.	ನಾಗರಾಜ ಭಟ್ ಎಸ್.ಬಿ.	ವಾಟರ್ ಬಾಯ್	272319		–
	ಪ್ರತಿ ನಿಯೋಜನಾ ಸಿಬ್ಬಂದಿ (ಶಿವಮೊಗ್ಗ ವಿಭಾಗ ಕಛೇರಿಯಿಂದ ಈ ಕಛೇರಿಗೆ)				
1.	ಶ್ರೀಪಾದ ಜೆ.	ಕಿ.ಇಂ.	272319		9448500249

10. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು.

ಕ್ರ.ಸಂ.	ಹೆಸರು ಮತ್ತು ಹುದ್ದೆ	ವೇತನ ಶ್ರೇಣಿ	ಮೂಲ ವೇತನ
1.	ಎಸ್.ಡಿ. ವಿಶ್ವನಾಥ, ಸ.ಕಾ.ಇಂ.	14050–25050	23850
2.	ಅನಿಲ್ ಕುಮಾರ್, ಸ.ಇಂ.	11400–21600	13350
3.	ಹೆಚ್. ರಾಮಚಂದ್ರಪ್ಪ ಸ.ಇಂ.	11400–21600	12650
4.	ಬಿ. ಓಂಕಾರನಾಯ್ಕ್ ಕಿ.ಇಂ.	8825–16000	9750
5.	ವಿ.ಆರ್. ರಾಜೇಂದ್ರ ಪ್ರಸಾದ್, ಕಿ.ಇಂ.	8825–16000	9275
6.	ಮುತ್ತಪ್ಪ ಪ್ರ.ದ.ಸ.	8825–16000	12000
7.	ಎಸ್.ಇ. ನೀಲಪ್ಪ, ದ್ವಿ.ದ.ಸ.	6250–12000	7800
8.	ಶಾಂತವೀರ	5800–10500	6000
9.	ಕೆ. ಶ್ರೀಧರ್, ಕಿ.ಕೆ.ನಿ.	7275–13350	12300
10.	ಟಿ. ಹೆನ್ರಿ, 'ಡಿ' ದರ್ಜೆ	5200–8200	7450
11.	ಪಾಂಡು, 'ಡಿ' ದರ್ಜೆ	5200–8200	6250
	ಪ್ರವಾಸಿ ಮಂದಿರದ ಸಿಬ್ಬಂದಿ		
12.	ಗುತ್ತಮ್ಮ, ಸ್ವೀಪರ್	4800–7275	6250
	ನಿಯೋಜನೆ ಮೇಲೆ ಇರುವ ನೌಕರರು (ವೃತ್ತ ಕಛೇರಿ ಶಿವಮೊಗ್ಗದಲ್ಲಿ)		
13.	ಎಸ್.ಬಿ. ನಾಗರಾಜಭಟ್, ವಾಟರ್ ಬಾಯ್	4800–7275	7100
	ಪ್ರತಿನಿಯೋಜನಾ ಸಿಬ್ಬಂದಿ		
14.	ಶ್ರೀಪಾದ ಜೆ. ಕಿ.ಇಂ.	8825–16000	11700

11. 2008–09ನೇ ಸಾಲಿನ ಆಯವ್ಯಯದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಪವಿಭಾಗ ಸೊರಬ ವಿವಿಧ ಯೋಜನಾವಾರು ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗಧಿಪಡಿಸಲಾದ ಅನುದಾನದ ವಿವರಗಳು.

ಕ್ರ. ಸಂ.	ಲೆಕ್ಕ ಶೀರ್ಷಿಕೆ	2008–09 ರ ಅನುದಾನ (ರೂ.ಲಕ್ಷಗಳಲ್ಲಿ)
1	**2**	**3**
1.	3054 – 12ನೇ ಹಣಕಾಸು	63.11
2.	4059 – ಲೋಕೋಪಯೋಗಿ ಇಲಾಖಾ ಕಟ್ಟಡಗಳು	60.00
3.	4059 – ಜಿಲ್ಲಾಡಳಿತ	70.00
4.	4059 – ಇತರೆ ಇಲಾಖೆ	450.00
5.	4202 – ತಾಂತ್ರಿಕ ಶಿಕ್ಷಣ	200.00
6.	4216 – ವಸತಿಗೃಹ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಇಲಾಖೆ	70.00

ಕ್ರ. ಸಂ.	ಲೆಕ್ಕ ಶೀರ್ಷಿಕೆ	2009–10 ರ ಅನುದಾನ (ರೂ.ಲಕ್ಷಗಳಲ್ಲಿ)
1.	ನಬಾರ್ಡ್ ಅಡಿಯಲ್ಲಿ ಪದವಿಪೂರ್ವ ಕಾಲೇಜು ನಿರ್ಮಾಣ.	30.24
2.	ನಂಜುಂಡಪ್ಪ ವರದಿ ಅಡಿಯಲ್ಲಿ	193.75
3.	5054 – ನಬಾರ್ಡ್ ಗ್ರಾಮೀಣ ರಸ್ತೆ ನಿರ್ಮಾಣ (ಟಿಎಸ್‌ಪಿ)	0.77
4.	5054 – ಇತರೆ ರಸ್ತೆ ನಿರ್ಮಾಣ (ಟಿಎಸ್‌ಪಿ)	1.64
5.	5054 – (ಯೋಜನೆ) ಕೆಶಿಪ್	10.67
6.	5054 – (ಯೋಜನೆ) ನಬಾರ್ಡ್ ಗ್ರಾಮೀಣ ರಸ್ತೆ ನಿರ್ಮಾಣ	3.21
7.	5054 – (ಯೋಜನೆ) ಇತರೆ ರಸ್ತೆ ನಿರ್ಮಾಣ	7.72
8.	5054 – (ಯೋಜನೆ) ಕೆಶಿಪ್ ಟಿಎಸ್‌ಪಿ	20.06
9.	2059 – (ಯೋಜನೇತರ) ನಿರ್ವಹಣೆ	11.00
10.	2216 – ನಿರ್ವಹಣೆ (ಯೋಜನೇತರೆ) ವಸತಿ	2.78
11.	ಸುವರ್ಣ ರಸ್ತೆ ವಿಕಾಸ ಯೋಜನೆಯಡಿ	104.16

12. ಸಹಾಯ ಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಧಾನ , ಅದಕ್ಕಾಗಿ ನಿಗಧಿಗೊಳಿಸಲಾದ ಮೊತ್ತ ಮತ್ತು ಫಲಾನುಭವಿಗಳ ವಿವರ.

-- ಯಾವುದೂ ಇರುವುದಿಲ್ಲ --

13. ರಿಯಾಯಿತಿಗಳನ್ನು ಪಡೆದವರ : ಅಧಿಕಾರ ಪತ್ರಗಳನ್ನು ಮಂಜೂರು ಮಾಡಿದ ಬಗ್ಗೆ ವಿವರಗಳು.

-- ಯಾವುದೂ ಇರುವುದಿಲ್ಲ --

14. ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಲಭ್ಯವಿರುವ ಮಾಹಿತಿಗಳ ವಿವರ.

-- ಯಾವುದೂ ಇರುವುದಿಲ್ಲ --

15. ಸಾರ್ವಜನಿಕ ಉಪಯೋಗಕ್ಕಾಗಿ ಪುಸ್ತಕ ಭಂಡಾರ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಅಲ್ಲಿ ದೊರೆಯುವ ಮತ್ತು ಕೆಲಸದ ಅವಧಿಯ ವಿವರಗಳು.

-- ಯಾವುದೂ ಇರುವುದಿಲ್ಲ --

16. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ ಇತ್ಯಾದಿಗಳ ವಿವರಗಳು:**

ಮಾಹಿತಿ ಹಕ್ಕು ಅಧಿನಿಯಮ 2005 (ಕೇಂದ್ರ ಅಧಿನಿಯಮ ನಂ.22)ರ ಸೆಕ್ಷನ್ 5(1), 5(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಉಪವಿಭಾಗ ಕಛೇರಿಯ ಕೆಳಕಂಡ ಅಧಿಕಾರಿಗಳನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕಾತಿ ಮಾಡಲಾಗಿದೆ.

(ಎ) ಶ್ರೀ ಎಸ್.ಡಿ. ವಿಶ್ವನಾಥ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸೆಕ್ಷನ್ 5(1) ರಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ.

(ಬಿ) ಶ್ರೀ ಅನೀಲ್ ಕುಮಾರ್ ಸಹಾಯಕ ಇಂಜಿನಿಯರ್ ಸೆಕ್ಷನ್ 5(2) ರಂತೆ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ.

17. ನಿಗದಿಗೊಳಿಸಲಾಗುವ ಇತರೆ ಮಾಹಿತಿಗಳು:

ಸರ್ಕಾರದ ಮಾಹಿತಿ ಪಡೆಯುವ ಹಕ್ಕು ಅಧಿನಿಯಮಗಳನ್ನು ರಚಿಸಿದ ನಂತರ ಅದರಲ್ಲಿ ಬೇರೆ ಯಾವುದಾದರೂ ಮಾಹಿತಿಗಳನ್ನು ನಿಗದಿಗೊಳಿಸಿದ್ದಲ್ಲಿ ಅದನ್ನು ಅಳವಡಿಸಲಾಗುವುದು.

ಎಸ್.ಡಿ. ವಿಶ್ವನಾಥ
ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ನಂ.7, ಉಪ ವಿಭಾಗ, ಸೊರಬ.

ಪಿ.ಆರ್.708

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಆಕುಕ 182 ಪಿಐಎಂ 2009, ಬೆಂಗಳೂರು, ದಿನಾಂಕ:16ನೇ ಜುಲೈ, 2009

ವಿಷಯ: ಆಯುಷ್ ಇಲಾಖೆಯ ವೈದ್ಯರು ದರ್ಜೆ–1 (ಯುನಾನಿ) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009 ರಲ್ಲಿರುವಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 182 ಪಿಐಎಂ 2009, ದಿನಾಂಕ:16.05.2009.

ಆಯುಷ್ ಇಲಾಖೆಯ ವೈದ್ಯರು ದರ್ಜೆ–1 (ಯುನಾನಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖಿತ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 182 ಪಿಐಎಂ 2009, ದಿನಾಂಕ:16.05.2009 ಯನ್ವಯ ಪ್ರಕಟಿಸಿ, ಬಾಧಿತ ಅಧಿಕಾರಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಇದುವರೆಗೂ ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಯಾವುದೇ ಆಕ್ಷೇಪಣೆಗಳನ್ನು ನಿಗದಿತ ಕಾಲಾವಧಿಯಲ್ಲಿ ಸ್ವೀಕರಿಸಿರುವುದಿಲ್ಲ.

ಆದುದರಿಂದ, ವೈದ್ಯರು ದರ್ಜೆ–1 (ಯುನಾನಿ) ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.01.2009 ರಲ್ಲಿರುವಂತೆ ಸಿದ್ಧಪಡಿಸಿ ಅನುಬಂಧದಲ್ಲಿ ಇದರೊಂದಿಗೆ ಲಗತ್ತಿಸಿ ಅಂತಿಮವಾಗಿ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

(ಭಾರತೀಯ ವೈದ್ಯ ಪದ್ಧತಿ)

ಅನುಬಂಧ

01.01.2009ರಲ್ಲಿರುವಂತೆ ಆಯುರ್ವೇದ ಇಲಾಖೆಯ ವೈದ್ಯರು ದರ್ಜೆ–1 (ಯುನಾನಿ) ವೃಂದದ ಜೇಷ್ಠತಾ ಪಟ್ಟಿ

ಕ್ರ. ಸಂ.	ಹೆಸರು	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಹುಟ್ಟಿದ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ	ಷರಾ
1.	ಡಾ:ಗೌಸ್ ಅಹಮದ್ ಖರೇಶಿ	ಮುಂಬಡ್ತಿ	12.06.50	14.02.75	26.08.2005	26.08.2005	30.06.2008 ರಂದು ವಯೋನಿವೃತ್ತಿ ಹೊಂದಿರುತ್ತಾರೆ
2.	ಡಾ: ಗೌಸಿಯಾ ತಾಜ್ ಖುರೇಶಿ	ಮುಂಬಡ್ತಿ	01.05.52	22.07.73	24.08.2005	24.08.2005	
3.	ಡಾ: ಖಲೀಲುರ್ ರೆಹಮಾನ್	ಮುಂಬಡ್ತಿ	01.07.52	02.08.79	31.08.2005	31.08.2005	
4.	ಡಾ: ರಫಿಯಾ ಬೇಗಂ	ಮುಂಬಡ್ತಿ	04.05.55	21.07.81	10.08.2005	10.08.2005	
5.	ಡಾ: ಎಸ್.ಟಿ.ಎ. ಖಾದ್ರಿ	ಮುಂಬಡ್ತಿ	01.09.59	24.07.81	16.08.2005	16.08.2005	
6.	ಡಾ: ಹಫೀಜ್ ಅಶ್ಫಾಕ್ ಅಹಮದ್	ಮುಂಬಡ್ತಿ	06.04.56	27.07.81	06.09.2005	06.09.2005	
7.	ಡಾ: ಕೈಸರ್ ಪರ್ವೀನ್	ಮುಂಬಡ್ತಿ	25.12.59	22.10.86	20.08.2005	20.08.2005	
8.	ಡಾ: ಯು.ಸನಾವುಲ್ಲಾ	ಮುಂಬಡ್ತಿ	01.06.58	28.10.86	10.08.2005	10.08.2005	

ಎನ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.707

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,

(ಭಾರತೀಯ ವೈದ್ಯ ಪದ್ಧತಿ)

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'Charcoal (Marada Ijjilu)' for the periods from 01.04.2008 to 31.03.2009 and 01.04.2009 to 31.03.2010-reg.

Ref: Application Dated:27.06.2009 of Sri Ramakrishana, Proprietor, Durga Parameshwara Enterprises, Sy.No.104, Ekarajapura Village, Sulibele Hobli, Hosakote Taluk, Bangalore Rural District-562 114.

In the application cited above Sri Ramakrishana, Proprietor, Durga Parameshwara Enterprises, Sy.No.104, Ekarajapura Village, Sulibele Hobli, Hosakote Taluk, Bangalore Rural District-562 114 has sought clarification regarding the rate of tax applicable on 'Charcoal (Marada Ijjilu)' for the periods from 01.04.2008 to 31.03.2009 and 01.04.2009 to 31.03.2010.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No. CLR.CR.58/09-10, Dated:20th July, 2009

It is hereby clarified that 'Charcoal (Marada Ijjilu)' is exempt from VAT during the year 2008-09 and from 01.04.2009 on wards under entry 15 of the First Schedule to the Karnataka Value Added Tax Act, 2003.

PRADEEP SINGH KHAROLA

PR-709 Commissioner of Commercial Taxes (Karnataka), Bangalore.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'power management system for customer application in mobile telecommunication'-reg.

Ref: Application Dated:13.06.2009 of Sri M. Venugopal Rao, CEO & Managing Director, Pace Power Systems Pvt Ltd., V-12, Industrial Estate, Kumbalgodu, Bangalore-Mysore Highway, Bangalore-560 074.

In the application cited above Sri M. Venugopal Rao, CEO & Managing Director, Pace Power Systems Pvt Ltd., V-12, Industrial Estate, Kumbalgodu, Bangalore-Mysore Highway, Bangalore-560 074, has sought clarification regarding the rate of tax applicable on 'power management system for customer application in mobile telecommunication' covered by sub-heading 8517 of the Central Excise Tariff Act.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No. CLR.CR.44/09-10, Dated:15th July, 2009

It is hereby clarified that 'power management system for customer application in mobile telecommunication' falling under sub-heading 8517 of Central Excise Tariff Act, 1985 is taxable at 4% under entry 53 of Third Schedule to the KVAT Act, 2003 read with Sl.No.1 of Notification No.FD 116 CSL 2006 (16), Dated:06.04.2006 as amended by Notifications No.FD 116 CSL 2006(17), Dated:29.04.2006 and FD 43 CSL 07(II) Dated:25.03.2007.

PRADEEP SINGH KHAROLA

PR-710 Commissioner of Commercial Taxes (Karnataka), Bangalore.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಅಧಿಕೃತ ಜ್ಞಾಪನ

ಸಂಖ್ಯೆ: ಸಿಆಸುಇ 08 ಹೆಚ್‌ಹೆಚ್‌ಎಲ್ 09, ಬೆಂಗಳೂರು, ದಿನಾಂಕ:21ನೇ ಜುಲೈ, 2009

ಕರ್ನಾಟಕದ ಖ್ಯಾತ ಹಿಂದೂಸ್ಥಾನಿ ಗಾಯಕಿ ಪದ್ಮವಿಭೂಷಣ ಪ್ರಶಸ್ತಿ ವಿಜೇತೆ ವಿದುಷಿ ಶ್ರೀಮತಿ ಗಂಗೂಬಾಯಿ ಹಾನಗಲ್ ರವರು ಮಂಗಳವಾರ ದಿನಾಂಕ:21.07.2009ರಂದು ಬೆಳಿಗ್ಗೆ ನಿಧನರಾದ ವಿಷಯವನ್ನು ಕರ್ನಾಟಕ ರಾಜ್ಯ ಸರ್ಕಾರವು ತೀವ್ರ ಸಂತಾಪದಿಂದ ಈ ಮೂಲಕ ಪ್ರಕಟಿಸಿದೆ.

ದಿವಂಗತರ ಗೌರವಾರ್ಥವಾಗಿ ಧಾರವಾಡ ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳಿಗೂ ಮತ್ತು ಎಲ್ಲಾ ಶಾಲಾ ಕಾಲೇಜುಗಳಿಗೂ (ಅನುದಾನ ಪಡೆಯುವ ವಿದ್ಯಾ ಸಂಸ್ಥೆಗಳೂ ಸೇರಿದಂತೆ) ದಿನಾಂಕ:22.07.2009 ರಂದು ಬುಧವಾರ ಸಾರ್ವಜನಿಕ ರಜೆಯನ್ನು ಘೋಷಿಸಲಾಗಿದೆ. ಅಲ್ಲದೆ, ದಿನಾಂಕ:21.07.2009 ಹಾಗೂ 22.07.2009ರಂದು (ಉಭಯ ದಿನಗಳು ಸೇರಿ) ಎರಡು ದಿನಗಳು ರಾಜ್ಯಾದ್ಯಂತ ಶೋಕವನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ನಿಯತವಾಗಿ ರಾಷ್ಟ್ರಧ್ವಜವನ್ನು ಹಾರಿಸಲಾಗುವ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು. ದಿವಂಗತರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗುವುದು.

ಕೆ.ವಿ. ರಾಮು
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ರಾಜ್ಯ ಶಿಷ್ಟಾಚಾರ).

ಪಿ.ಆರ್.723

IN THE COURT OF COMMISSIONER FOR WORKMEN'S COMPENSATION, BIDAR

No.LOB/WCA/Cr-F-27/2009

Applicants:		**Respondents:**
1) Ayesha begum W/o Late Md Javeed @ Javeed Miyan, Age:22 years occu: House hold R/o Gandhi Nagar Colony, Mailoor, Bidar. & 3 Others.	**V/s**	1) Md Maji @ Md khaja S/o Shaik Hyder, Age:60 yrs. Occu: Business, R/o Labour, Galli latur District: Osmanabad, (M.S.) 2) DM National Insurance Co. Ltd., through Gulbarga.

PROCLAIMATION

Sri/Smt. Ayesha begum W/o.F/o.S/o. Md Javeed @ Javad meeyan, R/o. Gandhi nagar colony Mailoor, have/ has filed application in this Court claiming compensation stating that Late: Md Javeed @ Javad meeyan was working as Driver Under the Respondent No I he met with an accident arising out of and during the course of employment as a result he died on 23.04.2009.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner For Workmen's
Compensation, Bidar.

IN THE COURT OF COMMISSIONER FOR WORKMEN'S COMPENSATION, BIDAR

No.LOB/WCA/Cr-F-29/2009

Applicants:		**Respondents:**
1) Laxmi W/o Late Shanmukh Suryawanshi, Age: 25 Yrs. Occu: House hold, R/o LIG colony, Bidar and Other.	**V/s**	1) Pandit S/o Vithal Rao Kankatte, Age:50 Yrs. Occu: Agri, R/o Janapur Tq: B'kalyan district Bidar. 2) Kabir S/o Gundappa, Age: Major, Occu: Centering contractor, R/o Janapur. Tq:BK Dist: Bidar.

PROCLAIMATION

Sri/Smt. Laxmi W/o Late Shanmukh Suryawanshi, R/o. LIG colony, Bidar, have/ has filed application in this Court claiming compensation stating that Late: Shanmukh Suryawanshi was working as Centering Labour Under the Respondent No I he met with an accident arising out of and during the course of employment as a result he died on 31.03.2007.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner For Workmen's
Compensation, Bidar.

PR-724

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ ತುಮಕೂರು, ಇವರ ನ್ಯಾಯಾಲಯದ ನಡವಳಿಕೆಗಳು

ವಿಷಯ: ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಕಲ್ಲೂರು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಕಲ್ಲೂರು ಇದರಲ್ಲಿ ನಡೆದಿರುವ ಹಣ ದುರುಪಯೋಗದ ಬಗ್ಗೆ ಮಾಜಿ ವ್ಯವಸ್ಥಾಪಕರಾದ ಶ್ರೀ ಕೆ.ಡಿ. ಅನಂತರಾಮಯ್ಯ ಮತ್ತು ಅವರ ಕಾನೂನು ವಾರಸುದಾರರ ಹೆಸರಿನಲ್ಲಿ, ಜಂಟಿಯಲ್ಲಿರುವ ಸ್ಥಿರಾಸ್ತಿಯನ್ನು ಸಹಕಾರಿ ಕಾಯಿದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಆದೇಶ ಮಾಡುವ ಬಗ್ಗೆ.

ಉಲ್ಲೇಖ: 1) ಬ್ಯಾಂಕಿನ ವ್ಯವಸ್ಥಾಪಕರ ಪತ್ರದ ದಿನಾಂಕ:09.04.2009.
2)ದಿನಾಂಕ:27.02.2009 ರಂದು ಈ ನ್ಯಾಯಾಲಯದಲ್ಲಿ ದಾಖಲಾಗಿರುವ ಅಧಿಬಾರ ಅರ್ಜಿ ಸಂಖ್ಯೆ:04/2008–2009.

ಪ್ರಸ್ತಾವನೆ:

ಶ್ರೀ ಕೆ.ಡಿ. ಅನಂತರಾಮಯ್ಯನವರು, ವ್ಯವಸ್ಥಾಪಕರಾಗಿ ದಿನಾಂಕ:01.04.2006 ರಿಂದ 31.03.2007ರ ಅವಧಿಯಲ್ಲಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಕಲ್ಲೂರು, ಗುಬ್ಬಿ ತಾಲ್ಲೂಕು ಇದರಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ಇವರು ಸದರಿ ಬ್ಯಾಂಕಿನಲ್ಲಿ ರೂ.21,560–00ಗಳ ಬ್ಯಾಂಕಿನ ಹಣವನ್ನು ದುರುಪಯೋಗ ಮಾಡಿರುವುದು ಬ್ಯಾಂಕಿನ 2006–2007ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಿಂದ ಕಂಡುಬಂದಿರುತ್ತದೆ.

ಈ ರೀತಿಯ ದುರುಪಯೋಗದ ಹಣದ ವಸೂಲಾತಿಗಾಗಿ ಬ್ಯಾಂಕಿನ ವ್ಯವಸ್ಥಾಪಕರು ಉಲ್ಲೇಖ (2)ರ ರೀತ್ಯಾ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 69ರಡಿಯಲ್ಲಿ ಅಧಿಬಾರ ಅರ್ಜಿಯನ್ನು ದಿನಾಂಕ:27.02.2009 ರಂದು ದಾಖಲು ಮಾಡಿರುತ್ತಾರೆ. ಈ ದಾವೆಯನ್ನು ಕಡತದ ಮೇಲೆ ತೆಗೆದುಕೊಂಡು, ದಿನಾಂಕ:16.03.2009 ರಿಂದ ವಿಚಾರಣೆ ಪ್ರಾರಂಭಿಸಲು ಆರೋಪದ ಸಹಿತದ ನೋಟೀಸನ್ನು ದಿನಾಂಕ:06.03.2009 ರಂದು ವಾದಿ ಮತ್ತು ಪ್ರತಿವಾದಿಯವರಿಗೆ ನೀಡಲಾಗಿತ್ತು. ದಿನಾಂಕ:16.03.2009, ದಿನಾಂಕ:28.03.2009, ದಿನಾಂಕ:06.04.2009, ದಿನಾಂಕ:09.04.2009, ದಿನಾಂಕ:18.04.2009 ರಂದು ಪ್ರಕರಣದ ವಿಚಾರಣೆಯನ್ನು ನಡೆಸಲಾಗಿರುತ್ತದೆ.

ಉಲ್ಲೇಖ (1) ದಿನಾಂಕ:09.04.2009ರ ಪತ್ರದಲ್ಲಿ ಸದರಿ ಬ್ಯಾಂಕಿನ ವ್ಯವಸ್ಥಾಪಕರು, ದಾವೆಯಲ್ಲಿ ಮನವಿ ಮಾಡಿ ಪ್ರತಿವಾದಿಗಳು ದುರುಪಯೋಗ ಪಡಿಸಿದ ಹಣ ರೂ.21,560–00 ಮತ್ತು ಬಡ್ಡಿ ಸಮೇತ ವಸೂಲಿ ಕುರಿತು ಹಾಗೂ ಬ್ಯಾಂಕಿನ 2007–2008ನೇ ಸಾಲಿನ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿದ್ದು, ಈ ಸಾಲಿನಲ್ಲಿಯೂ ಸಹ ಸದರಿಯವರಿಂದ ಎದುರುದಾರರಿಂದ (ಪ್ರತಿವಾದಿಗಳಿಂದ) ರೂ.5,00,000–00 (ಐದುಲಕ್ಷ) ಗಳ ಹಣ ದುರುಪಯೋಗವಾಗಿರುವುದು ಕಂಡುಬಂದಿದ್ದು, ಈ ದುರುಪಯೋಗದ ಹಣದ ವಸೂಲಿ ಕುರಿತು, ಹಣದ ಭದ್ರತೆಗಾಗಿ ದಾವೆಯ ಅಂತಿಮ ಫಲಿತಾಂಶವನ್ನು ಕಾಯ್ದಿರಿಸಿ, ಸದರಿ ಪ್ರತಿವಾದಿಗಳ ಹೆಸರಿನಲ್ಲಿ ಮತ್ತು ಅವರ ಹಕ್ಕುಬದ್ಧ, ಕಾನೂನು ವಾರಸುದಾರರಾದ ಪತ್ನಿಯವರ ಹೆಸರಿನಲ್ಲಿ, ಜಂಟಿ ಇರುವ ಸ್ಥಿರಾಸ್ತಿಗಳನ್ನು ಸಹಕಾರಿ ಕಾಯಿದೆ 1959ರ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಆದೇಶ ನೀಡಬೇಕೆಂದು ಕೋರಿರುತ್ತಾರೆ.

ಮತ್ತು ದಿನಾಂಕ:26.03.2009ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ:5ರಲ್ಲಿ ತೀರ್ಮಾನಿಸಿರುವಂತೆ, ಶ್ರೀ ಕೆ.ಡಿ. ಅನಂತರಾಮಯ್ಯ ಮತ್ತು ಕುಟುಂಬದವರು ಹೊಂದಿರುವ ಸ್ಥಿರಾಸ್ತಿಯನ್ನು ಪರಭಾರೆ

ಮಾಡಿದಲ್ಲಿ ಹಣವನ್ನು ವಸೂಲಿ ಮಾಡಲು ತೊಂದರೆಯಾಗುವುದೆಂದು ಉದ್ದೇಶಿಸಿ, ಈಗಾಗಲೇ ದಾಖಲು ಮಾಡಿರುವ ದಾವೆಯನ್ನು ಒಳಗೊಂಡಂತೆ ತೀರ್ಪುಪೂರ್ವ ಜಪ್ತಿ ಆದೇಶ ನೀಡಬೇಕೆಂದು, ಸಹಾಯಕ ನಿಬಂಧಕರನ್ನು ಕೋರಿ ತೀರ್ಮಾನಿಸಿರುವ ಸಭೆ ನಡವಳಿಕೆ ಲಗತ್ತಿಸಿರುತ್ತಾರೆ.

ಆದುದರಿಂದ ಈ ನ್ಯಾಯಾಲಯವು, ವಿಚಾರಣೆಗಾಗಿರುವ ಅಧಿಬಾರ ಅರ್ಜಿ ಸಂಖ್ಯೆ: 04/2008–09ನ್ನು ಅಂತಿಮ ತೀರ್ಪು ಕಾಯ್ದಿರಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 103ರನ್ವಯ, ಈ ನ್ಯಾಯಾಲಯದಲ್ಲಿರುವ ದಾವೆಯ ತೀರ್ಪುಪೂರ್ವ, ಈ ಕೆಳಕಂಡ ಷೆಡ್ಯೂಲ್‌ನಲ್ಲಿನ ಸ್ಥಿರಾಸ್ತಿಗಳನ್ನು ಜಪ್ತಿಮಾಡಿ, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನಂ.ಸನಿ–32/ಎ.ಬಿ.ಎನ್./ಡಿ.ಡಿ.ಎಸ್/ಕಲಂ103/06/2009–10, ದಿನಾಂಕ:8ನೇ ಮೇ, 2009

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/2001, ದಿನಾಂಕ:21.11.2001 ರಲ್ಲಿ ಪ್ರತ್ಯಾಯೋಜಿಸಲ್ಪಟ್ಟಿರುವ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 103ರ ಪ್ರಕಾರ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಶ್ರೀ ಕೆ. ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ, ತುಮಕೂರು, ಆದ ನಾನು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಕೆ.ಡಿ. ಅನಂತರಾಮಯ್ಯ ಮಾಜಿ ವ್ಯವಸ್ಥಾಪಕರು, ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಕಲ್ಲೂರು, ಗುಬ್ಬಿ ತಾಲ್ಲೂಕು, ಇವರ ಪತ್ನಿ ಶ್ರೀಮತಿ ಲೀಲಾ ರವರ ಹೆಸರಿನಲ್ಲಿರುವ, ಈ ಕೆಳಕಂಡ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಇರುವ ದಾವೆಯ ಅಂತಿಮ ತೀರ್ಪಿಗೆ ಒಳಪಟ್ಟು, ಈ ಆದೇಶ ಪೂರ್ವ ಜಪ್ತಿ ಆದೇಶ ಹೊರಡಿಸಿರುತ್ತೇನೆ.

ಇವರುಗಳು ಈ ನ್ಯಾಯಾಲಯದಿಂದ ಮುಂದಿನ ಆದೇಶ ನೀಡುವವರೆಗೆ ಅಥವಾ ಸ್ವತ್ತುಗಳಿಗೆ ತತ್ಸಮಾನವಾದ ನಗದು ಭದ್ರತೆ ನೀಡುವವರೆಗೆ ವಿಲೇವಾರಿ ಮಾಡುವುದಾಗಲೀ, ಪರಭಾರೆ ಮಾಡುವುದಾಗಲೀ ಅಥವಾ ವರ್ಗಾಯಿಸುವುದಾಗಲೀ ಮಾಡುವಂತಿಲ್ಲ. ಒಂದುವೇಳೆ, ಈ ಆದೇಶವನ್ನು ನಿರ್ಲಕ್ಷಿಸಿ ಮಾಡಿದರೂ, ಈ ಸ್ವತ್ತು ಕೊಂಡಲ್ಲಿ ಅಥವಾ ಇನ್ನಾವುದೇ ವಿಧದಲ್ಲಿ ವರ್ಗಾಯಿಸಿಕೊಂಡಲ್ಲಿ ಅದು ಸಿಂಧುವಾಗುವುದಿಲ್ಲ. (ಸಕ್ರಮವಾಗುವುದಿಲ್ಲ) ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ದುರುಪಯೋಗದಾರರು, ಕಾನೂನು ವಾರಸುದಾರರು, ಈ ಜಪ್ತಿ ಆದೇಶದ ವ್ಯಾಪ್ತಿಯಿಂದ ಹೊರಬರಲು ಇಚ್ಛಿಸಿದಲ್ಲಿ, ಜಪ್ತಿಗೊಳಿಸಲ್ಪಟ್ಟ ಆಸ್ತಿಗಳ ಮೌಲ್ಯಕ್ಕೆ ತಕ್ಕಷ್ಟು ಮತ್ತು ಈ ನ್ಯಾಯಾಲಯವು ಸರಿ ಎಂದು ಭಾವಿಸುವ ತಕ್ಕಷ್ಟು ನಗದು ಭದ್ರತೆಯನ್ನು ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಕಲ್ಲೂರು, ಗುಬ್ಬಿ ತಾಲ್ಲೂಕು, ಇದರಲ್ಲಿ ತೊಡಗಿಸಿ, ಈ ಬಗ್ಗೆ ಮೂಲ ಚಲನ್ ಪ್ರತಿಯನ್ನು, ದಿನಾಂಕ:30.06.2009ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ಈ ನ್ಯಾಯಾಲಯಕ್ಕೆ ಹಾಜರುಪಡಿಸುವುದರ ಮೂಲಕ ಈ ಜಪ್ತಿ ಆದೇಶದಿಂದ ಹೊರಗುಳಿಯಬಹುದೆಂದು ಸಹ ತಿಳಿಸಲಾಗಿದೆ. ಮೇಲೆ ನಿಗದಿಪಡಿಸಿದ ಅವಧಿಯೊಳಗೆ ನಗದು ಭದ್ರತೆ ನೀಡಲು ವ್ಯಾಜ್ಯದ ಪ್ರತಿವಾದಿಗಳು ವಿಫಲವಾದಲ್ಲಿ, ಈ ಷರತ್ತು ಪೂರ್ವಕ ಜಪ್ತಿ ಆದೇಶ ಸ್ಥಿರಗೊಳ್ಳುವುದಲ್ಲದೇ, ಖಾಯಂಗೊಳ್ಳುವುದು ಎಂದು ತಿಳಿಯತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:08.05.2009ರಂದು ನೀಡಿರುತ್ತೇನೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಸ್ವತ್ತಿನ ಷೆಡ್ಯೂಲ್

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ. ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎಕರೆ–ಗುಂಟೆ	ತರಹೆ	ಚೆಕ್ಕುಬಂದಿ
1.	ಶ್ರೀಮತಿ ಲೀಲಾ ಕೋಂ ಕೆ.ಡಿ. ಅನಂತರಾಮಯ್ಯ ಕಲ್ಲೂರು, ಕಡಬಾ ಹೋಬಳಿ, ಗುಬ್ಬಿ ತಾಲ್ಲೂಕು.	914	240/3 ಎಫ್	1.08	ಖುಷ್ಕಿ	ಪೂರ್ವಕ್ಕೆ–ತೋರೆಹಳ್ಳ ಪಶ್ಚಿಮಕ್ಕೆ– ರಸ್ತೆ ಉತ್ತರಕ್ಕೆ– ಬೋರಲಿಂಗಯ್ಯನವರ ಜಮೀನು ದಕ್ಷಿಣಕ್ಕೆ– ಪಾಲಾಕ್ಷಯ್ಯ ನವರ ಜಮೀನು

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ. ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎಕರೆ–ಗುಂಟೆ	ತರಹೆ	ಚೆಕ್ಕುಬಂದಿ
2.	ಶ್ರೀಮತಿ ಲೀಲಾ ಕೋಂ ಕೆ.ಡಿ. ಅನಂತರಾಮಯ್ಯ ಕಲ್ಲೂರು, ಕಡಬಾ ಹೋಬಳಿ, ಗುಬ್ಬಿ ತಾಲ್ಲೂಕು.	914	240/3 ಎಫ್	0.24	ಖುಷ್ಕಿ	ಪೂರ್ವಕ್ಕೆ–ತೋರೆಹಳ್ಳ ಪಶ್ಚಿಮಕ್ಕೆ– ರಸ್ತೆ ಉತ್ತರಕ್ಕೆ– ಬೋರಲಿಂಗಯ್ಯನವರ ಜಮೀನು ದಕ್ಷಿಣಕ್ಕೆ– ಪಾಲಾಕ್ಷಯ್ಯ ನವರ ಜಮೀನು
3.	ಶ್ರೀಮತಿ ಲೀಲಾ ಕೋಂ ಕೆ.ಡಿ. ಅನಂತರಾಮಯ್ಯ ಕಲ್ಲೂರು, ಕಡಬಾ ಹೋಬಳಿ, ಗುಬ್ಬಿ ತಾಲ್ಲೂಕು.	409/387	---	52x19 ಅಡಿಗಳ ನಿವೇಶನದಲ್ಲಿನ ವಾಸದ ಹೆಂಚಿನ ಮನೆ (ಕಲ್ಲೂರು)	ವಾಸದ ಹೆಂಚಿನ ಮನೆ	ಪೂರ್ವಕ್ಕೆ–ಗಲ್ಲಿ ಪಶ್ಚಿಮಕ್ಕೆ– ರಸ್ತೆ ಉತ್ತರಕ್ಕೆ– ಗಲ್ಲಿ ದಕ್ಷಿಣಕ್ಕೆ– ತಿರುಗಾಡಲು ರಸ್ತೆ ಮತ್ತು ಈಶ್ವರಪ್ಪನವರ ಮನೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಪಿ.ಆರ್.712 ತುಮಕೂರು ಉಪವಿಭಾಗ, ತುಮಕೂರು.

ತಹಶೀಲ್ದಾರರು, ಶ್ರೀನಿವಾಸಪುರ ತಾಲ್ಲೂಕು

ಅಧಿಸೂಚನೆ

ನಂ.ಮಾ.ಹ.ಅ.ನಿಯಮ 12:2007–08, ದಿನಾಂಕ:

ವಿಷಯ: ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಪ್ರಕರಣ ಕಲಂ4(1)(ಬಿ) ಅನುಸಾರ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕಛೇರಿಯ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ.

ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರ (ಸೆಂಟ್ರಲ್ ಆಕ್ಟ್ 22 ಆಫ್ 2005) ಸೆಕ್ಷನ್ 5(1) 5(2) ಮತ್ತು 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಹಶೀಲ್ದಾರ್‌ರ ಕಛೇರಿ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರಿರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ "ಸಾರ್ವಜನಿಕ ಆಧಿಕಾರಿ" ಮತ್ತು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ" ಹಾಗೂ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ. (ಸರ್ಕಾರದ ಅಧಿಸೂಚನೆ ನಂ.ಕ.ಇ 37 ವಿಮಕ 2005, ದಿನಾಂಕ:12.08.2005)

1.4(ಬಿ)(1) ಅ: ಇಲಾಖೆಯ ವಿವರಗಳು ರಚನಾಸೂಚಿ ಕಾರ್ಯಗಳು ಹಾಗೂ ಕರ್ತವ್ಯಗಳು

ಕ್ರ. ಸಂ.	ಕಛೇರಿಯ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(2)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 19(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ
1.	ತಾಲ್ಲೂಕು ಕಛೇರಿ ಶ್ರೀನಿವಾಸಪುರ	ತಹಶೀಲ್ದಾರ್, ಶ್ರೀನಿವಾಸಪುರ	ತಾಲ್ಲೂಕು ಶಿರಸ್ತೆದಾರರು, ತಾ.ಕಛೇರಿ, ಶ್ರೀನಿವಾಸಪುರ	ಸಹಾಯಕ ಕಮೀಷನರ್ ಕೋಲಾರ
2.	ನಾಡ ಕಛೇರಿ, ಯಲ್ದೂರು	ಉಪ ತಹಶೀಲ್ದಾರ್ ಯಲ್ದೂರು	ದ್ವಿ.ದ.ಸ. ನಾಡ ಕಛೇರಿ	ತಹಶೀಲ್ದಾರ್ ಶ್ರೀನಿವಾಸಪುರ
3.	ನಾಡ ಕಛೇರಿ, ಗೌನಿಪಲ್ಲಿ	ಉಪ ತಹಶೀಲ್ದಾರ್, ಗೌನಿಪಲ್ಲಿ	ದ್ವಿ.ದ.ಸ. ನಾಡ ಕಛೇರಿ	ತಹಶೀಲ್ದಾರ್ ಶ್ರೀನಿವಾಸಪುರ
4.	ಕಂದಾಯ ನಿರೀಕ್ಷಕರು ಕಸಬಾ ಹೋಬಳಿ	ಕಂದಾಯ ನಿರೀಕ್ಷಕರು ಕಸಬಾ	ಆಯಾ ಗ್ರಾಮದ ಗ್ರಾಮ ಲೆಕ್ಕಿಗರು	ತಹಶೀಲ್ದಾರ್ ಶ್ರೀನಿವಾಸಪುರ

ಕ್ರ. ಸಂ.	ಕಛೇರಿಯ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(2)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 19(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ
5.	ಕಂದಾಯ ನಿರೀಕ್ಷಕರು ರೋಣೂರು ಹೋಬಳಿ	ಕಂದಾಯ ನಿರೀಕ್ಷಕರು ರೋಣೂರು	ಆಯಾ ಗ್ರಾಮದ ಗ್ರಾಮ ಲೆಕ್ಕಿಗರು	ತಹಶೀಲ್ದಾರ್ ಶ್ರೀನಿವಾಸಪುರ
6.	ಕಂದಾಯ ನಿರೀಕ್ಷಕರು ನೆಲವಂಕಿ ಹೋಬಳಿ	ಕಂದಾಯ ನಿರೀಕ್ಷಕರು ನೆಲವಂಕಿ	ಆಯಾ ಗ್ರಾಮದ ಗ್ರಾಮಸ್ಥರು	ತಹಶೀಲ್ದಾರ್ ಶ್ರೀನಿವಾಸಪುರ
7.	ಭೂ ಮಾಪನ ಉಪ ವಿಭಾಗ, ಶ್ರೀನಿವಾಸಪುರ	ಪರ್ಯಾವೀಕ್ಷಕರು, ಭೂ ಮಾಪನ ಶಾಖೆ, ಮಾಗಡಿ	ಆಯಾ ಗ್ರಾಮದ ಭೂ ಮಾಪಕರು	ತಹಶೀಲ್ದಾರ್ ಶ್ರೀನಿವಾಸಪುರ
8.	ಆಹಾರ ವಿಭಾಗ, ಶ್ರೀನಿವಾಸಪುರ	ಆಹಾರ ಶಿರಸ್ತೆದಾರ್ ಶ್ರೀನಿವಾಸಪುರ	ಆಹಾರ ನಿರೀಕ್ಷಕರು, ಮಾಗಡಿ	ತಹಶೀಲ್ದಾರ್ ಶ್ರೀನಿವಾಸಪುರ

4(2) 1 ಬಿ :– ಶ್ರೀನಿವಾಸಪುರ ತಾಲ್ಲೂಕಿನ ಸಾಮಾನ್ಯ ಮಾಹಿತಿಗಳು

1	**ಭೌಗೋಳಿಕ ವಿಸ್ತೀರ್ಣ**	85824 ಹೆಕ್ಟೇರ್
2.	**ಒಟ್ಟು ಜನಸಂಖ್ಯೆ**	184721
	1) ಗ್ರಾಮೀಣ ಜನಸಂಖ್ಯೆ	161762
	2) ನಗರ ಜನಸಂಖ್ಯೆ	22959
	3) ನಗರ ಪ್ರದೇಶ	–
	4) ಗಂಡಸರು	93631
	5) ಹೆಂಗಸರು	91090
	6) ಪ.ಜಾತಿ	ಗಂ.23843, ಹೆಂ.23435
	7) ಪ.ಪಂ	ಗಂ.9635, ಹೆಂ.9252
	8) ಲಿಂಗಾನುಪಾತ	973
	9) ಜನಸಾಂದ್ರತೆ	21.3
3.	**ಶೈಕ್ಷಣಿಕ ಸಂಸ್ಥೆಗಳು**	
	1) ವೈದ್ಯಕೀಯ ಕಾಲೇಜು	ಇಲ್ಲಾ
	2) ಇಂಜನಿಯರಿಂಗ್ ಕಾಲೇಜು	ಇಲ್ಲಾ
	3) ಡೆಂಟಲ್ ಕಾಲೇಜು	ಇಲ್ಲಾ
	4) ಆಯುರ್ವೇದಿಕ್ ಕಾಲೇಜು	ಇಲ್ಲಾ
	5) ಲಾ ಕಾಲೇಜು	ಇಲ್ಲಾ
	6) ಪದವಿ ಪೂರ್ವ ಕಾಲೇಜು	5
	7) ಪದವಿ ಕಾಲೇಜು	1
	8) ಹೈ ಸ್ಕೂಲ್	24
	9) ಹಿ.ಪ್ರಾ.ಶಾಲೆ	107
	10) ಕಿ.ಪ್ರಾ.ಶಾಲೆ	238
	11) ಸಾಕ್ಷರತೆ ಪ್ರಮಾಣ	59.90
	12) ಹೆಂಗಸರು ಸಾಕ್ಷರತೆ	48.2
4.	1) ಕೃಷಿಕರು	43716
	2) ಕೃಷಿ ಕಾರ್ಮಿಕರು	32910
5.	**ಮಳೆ ಪ್ರಮಾಣ**	
	1) ವಾಡಿಕೆ ಮಳೆ	722
	2) ವಾಸ್ತವಿಕ ಮಳೆ	773.7
	3) ಮಳೆ ಮಾಪನಗಳು	6

6.	**ಬ್ಯಾಂಕುಗಳು**	
	1) ವಾಣಿಜ್ಯ ಬ್ಯಾಂಕು	8
	2) ಗ್ರಾಮೀಣ ಬ್ಯಾಂಕು	5
	3) ಇತರೆ ಬ್ಯಾಂಕ್	
	4) ಸಹಕಾರಿ ಬ್ಯಾಂಕ್	5
	5) ಕ್ರೆಡಿಟ್ ಸಹಕಾರಿ ಸಂಘ	–
7.	**ರಸ್ತೆಗಳು**	
	1) ರಾಜ್ಯ ಹೆದ್ದಾರಿ	95 ಕಿ.ಮೀ
	2) ಮುಖ್ಯ ಜಿಲ್ಲಾ ರಸ್ತೆ	123 ಕಿ.ಮೀ
	3) ಹಳ್ಳಿ ರಸ್ತೆ	661 ಕಿ.ಮೀ
	4) ಇತರೆ ಜಿಲ್ಲಾ ರಸ್ತೆ	7. ಕಿ.ಮೀ
8.	**ಅಂಗನವಾಡಿ ಕೇಂದ್ರಗಳು**	313
9.	**ವಿವಿಧ ವೇತನದಾರರು**	
	1) ವೃದ್ಧಾಪ್ಯ ವೇತನ	7693
	2) ವಿಧವಾ ವೇತನ	2983
	3) ಅಂಗವಿಕಲ ವೇತನ	2103
10.	**ನಾಡ ಕಛೇರಿ**	2
11.	**ಹೋಬಳಿ**	5
12.	**ಕಂದಾಯ ಗ್ರಾಮಗಳು**	347
13.	**ಗ್ರಾಮ ಪಂಚಾಯ್ತಿಗಳು**	25

4 ಬಿ (1) ಇ :– ಕಾರ್ಯ ವಿಧಾನ:

1) ತಹಶೀಲ್ದಾರು, ಶ್ರೀನಿವಾಸಪುರ ತಾಲ್ಲೂಕಿನ ಕಂದಾಯ ಆಡಳಿತ ವ್ಯವಸ್ಥೆಯ ಮುಖ್ಯಸ್ಥರಾಗಿದ್ದು, ಕಂದಾಯ ಆಡಳಿತ ಹಾಗೂ ಕಾನೂನು ಸುವ್ಯವಸ್ಥೆಯ ಸಂಪೂರ್ಣ ಅಧಿಕಾರ ಹೊಂದಿದವರಾಗಿರುತ್ತಾರೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 11 ರಂತೆ ತಾಲ್ಲೂಕಿಗೆ ಒಬ್ಬರಂತೆ ತಹಶೀಲ್ದಾರರನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ಕೇಂದ್ರ ಹಾಗೂ ರಾಜ್ಯ ಅಧಿನಿಯಮಗಳಲ್ಲಿ ನಿಯಮಿಸಿದ ಎಲ್ಲಾ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ತಹಶೀಲ್ದಾರರು ತಾಲ್ಲೂಕಿನ ದಂಡಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

4(ಬಿ)1.11

ಕಂದಾಯ ಇಲಾಖೆಯು ಈ ಕೆಳಕಂಡ ಸಾಮಾನ್ಯ ಕಾರ್ಯಗಳನ್ನು ಪ್ರಮುಖವಾಗಿ ನಿರ್ವಹಿಸುತ್ತಿದೆ.

ಅ.

1. ಕಾರ್ಯಕಾರಿ ದಂಡಾಧಿಕಾರಿಯ ಕಾರ್ಯ ನಿರ್ವಹಣೆ.
2. ಸಾರ್ವಜನಿಕ ದೂರು ನಿರ್ವಹಣೆ.
3. ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ.
4. ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು.
5. ಎಲ್ಲಾ ರೀತಿಯ ಗಣತಿ ಕಾರ್ಯಗಳನ್ನು ನಡೆಸುವುದು. (ಜನಗಣತಿ, ಜಾನುವಾರು ಗಣತಿ, ಕೃಷಿ ಗಣತಿ, ಆರ್ಥಿಕ ಗಣತಿ)
6. ಜಿಲ್ಲಾಧಿಕಾರಿಗಳ ಪರವಾಗಿ ಶಿಷ್ಟಾಚಾರ ಕಾರ್ಯ ನಿರ್ವಹಣೆ.
7. ಪ್ರಕೃತಿ ವಿಕೋಪ, ನೈಸರ್ಗಿಕ ಮತ್ತು ಮಾನವ ನಿರ್ಮಿತ ವಿಕೋಪಗಳಿಂದ ಭಾದಿತವಾದವರಿಗೆ ಪರಿಹಾರ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯನಿರ್ವಹಣೆ.
8. ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಮೊದಲಾದ ಸಾಮಾಜಿಕ ಸುರಕ್ಷತೆಯ ಕ್ರಮಗಳ ನಿರ್ವಹಣೆ.
9. ಆಯುಧ ಕಾಯ್ದೆಯಡಿ ಪ್ರಕರಣ ವಿಲೇವಾರಿ.
10. ಆದಾಯ, ಜಾತಿ ವಾಸ್ತವ್ಯದ ಬಗ್ಗೆ ದೃಢೀಕರಣ ಪತ್ರ ನೀಡುವುದು.

11. ನ್ಯಾಯಾಲಯದಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ.
12. ಸರ್ಕಾರದಿಂದ ಕಾಲಕಾಲಕ್ಕೆ ಜಾರಿಗೆ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ನಿರ್ವಹಣೆ.

ಆ. ಕಂದಾಯ ಆಡಳಿತ

1. ರಾಜ್ಯದಲ್ಲಿನ ಭೂ ದಾಖಲೆಗಳ ನಿರ್ವಹಣೆ ಎಲ್ಲಾ ಜಮೀನುಗಳ ಭೂ ಮಾಪನ.
2. ಭೂ ಕಂದಾಯ ನೀರು ತೆರಿಗೆ, ಸರ್ಕಾರಿ ಬಾಕಿ ವಸೂಲಾತಿ.
3. ಗೋಮಾಳ, ಕೆರೆ ಅಂಗಳ, ಉಪವನಗಳು ಇತ್ಯಾದಿ ಸಾಮುದಾಯಿಕ ಜಮೀನುಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಕಾದಿರಿಸಿದ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ.
4. ಅಕ್ರಮ ಸಕ್ರಮ ಸಮಿತಿಗೆ ಪೂರಕ ಮಾಹಿತಿ ಹಾಗೂ ದಾಖಲಾತಿ ನಿರ್ವಹಣೆ.
5. ಭೂ ಸುಧಾರಣೆ ಮತ್ತು ಗಣಿಗಾರಿಕೆ ನಿಬಂಧನೆಗಳ ನಿರ್ವಹಣೆ.
6. ಭೂ ಪರಿವರ್ತನೆ.
7. ಜಾತಿ, ಆದಾಯ, ವಾಸ್ತವ್ಯ ದೃಢೀಕರಣ ಪತ್ರ ವಿಲೇವಾರಿ.
8. ವೃದ್ದಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಮೊದಲಾದ ಸಾರ್ವಜನಿಕ ಸುರಕ್ಷತಾ ಕಾರ್ಯಗಳ ಮಂಜೂರಾತಿ.
9. ಕರ್ನಾಟಕ ಭೂ ಕಂದಾಯ ಕಾಯ್ದೆಯಡಿಯಲ್ಲಿ ಬರುವ ಎಲ್ಲಾ ವ್ಯವಹಾರಗಳ ನಿರ್ವಹಣೆ.

ಇ. ಕಾನೂನು ಆಡಳಿತ

ತಹಶೀಲ್ದಾರರು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಮತ್ತು ಕಾನೂನುಗಳ ವಿವರ

1. ಕರ್ನಾಟಕ ಭೂ ಸುಧಾರಣೆ ಕಾಯ್ದೆ ಅಧಿನಿಯಮ 1961 ಮತ್ತು ನಿಯಮಾವಳಿ 1974
2. ಕರ್ನಾಟಕ ಹಲವು ಇನಾಂ ರದ್ಧತಿ ಅಧಿನಿಯಮ 1977.
3. ಕರ್ನಾಟಕ ಗ್ರಾಮ ನೌಕರಿಗಳ ರದ್ಧತಿ ಅಧಿನಿಯಮ 1961.
4. ಕರ್ನಾಟಕ ಪುರಸಭೆಗಳ ಅಧಿನಿಯಮ 1964.
5. ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ 1974 ಮತ್ತು ನಿಯಮಾವಳಿ 1975
6. ಕರ್ನಾಟಕ ವೃದ್ಧಾಪ್ಯ ವೇತನ ನಿಯಮಾವಳಿ.
7. ನಿರ್ಗತಿಕ ವಿಧವಾ ವೇತನ ನಿಯಮಾವಳಿ.
8. ದೈಹಿಕ ಅಂಗವಿಕಲರಿಗೆ ನಿರ್ವಹಣಾ ಭತ್ಯೆ ಮಂಜೂರಿ ನಿಯಮಾವಳಿ.
9. ಕರ್ನಾಟಕ ಋಣ ವಿಮೋಚನಾ ಅಧಿನಿಯಮ.
10. ಮತದಾರರ ನೋಂದಣಿ ನಿಯಮಾವಳಿ.
11. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ 1966.
12. ಕರ್ನಾಟಕ ನೀರಾವರಿ ಅಧಿನಿಯಮ 1965.
13. ಕರ್ನಾಟಕ ನೀರಾವರಿ(ನೀರಿನ ಕರ ಆಕರಣೆ) ನಿಯಮಾವಳಿ 1965
14. ಕರ್ನಾಟಕ ಅರಣ್ಯ ನಿಯಮಾವಳಿ 1969.
15. ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ 1966.
16. ಏಲಕ್ಕಿ ಅಧಿನಿಯಮ 1965.
17. ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ 1974 ಮತ್ತು ಅದರಡಿಯ ನಿರ್ವಹಣೆ.


ದಂಡಾಧಿಕಾರಿಯಾಗಿ ತಹಶೀಲ್ದಾರು ಈ ಕೆಳಗಿನ ಕಾಯ್ದೆಗಳಡಿಯಲ್ಲಿ ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ.

1. ದಂಡ ಪ್ರಕ್ರಿಯೆ ಸಂಹಿತೆ 1974.
2. ಭಾರತ ಸಾಕ್ಷ್ಯ ಅಧಿನಿಯಮ 1963.
3. ಕರ್ನಾಟಕ ಪೋಲಿಸ್ ಅಧಿನಿಯಮ 1963
4. ಜೀತದಾಳು ಪದ್ಧತಿ (ನಿರ್ಮೂಲನೆ) ಅಧಿನಿಯಮ 1976.
5. ಪ್ರಮಾಣ ವಚನ ಅಧಿನಿಯಮ 1960.
6. ಭಾರತೀಯ ಮುದ್ರಾಂಕ ಅಧಿನಿಯಮ 1975.
7. ಪ್ರಾಣಿಗಳ ಹಿಂಸೆ ಅಧಿನಿಯಮ 1960.
8. ಕರ್ನಾಟಕ ಭಿಕ್ಷಾಟನಾ ಅಧಿನಿಯಮ 1944.
9. ಸಾರ್ವಜನಿಕ ಆರೋಗ್ಯ ಅಧಿನಿಯಮ 1944.

10. ಕರ್ನಾಟಕ ಮಾರಾಟ ಕರ ಅಧಿನಿಯಮ 1957.
11. ಸತಿ ಹೋಗುವ (ನಿಷೇದ) ಅಧಿನಿಯಮ 1944.
12. ಪ.ಜಾತಿ: ಪ.ವರ್ಗಗಳ (ದೌರ್ಜನ್ಯ ನಿಷೇದ)ಅಧಿನಿಯಮ 1989.
13. ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ಅಧಿನಿಯಮ.
14. ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ದಾರ

4 ಬಿ(1) ರಲ್ಲಿ 11

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳ ಮತ್ತು ಕರ್ತವ್ಯದ ವಿವರಗಳು.



ತಾಲ್ಲೂಕು ಕಛೇರಿಯ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ.

ತಾಲ್ಲೂಕು ಕಛೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ನಂ.ಸಿಬ್ಬಂದಿ ಸಿ.ಆರ್ 119:06-07 ದಿನಾಂಕ:14-12-2006 ರಂತೆ ಅಧಿಕೃತ ಜ್ಞಾಪನಗಳಲ್ಲಿ ಕಾರ್ಯನಿರ್ವಹಣಾ ಆದೇಶ ಜಾರಿಗೊಳಿಸಿದೆ. ಅಂತೆಯೇ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

ಮೇಲೆ ತಿಳಿಸಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ (ಗ್ರೂಪ್ ಸಿ ಮತ್ತು ಡಿ) ತಹಶೀಲ್ದಾರರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ಕಛೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂಧಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರ ತಹಶೀಲ್ದಾರ್‌ರಾಗಿರುತ್ತಾರೆ.

1) ಕಾಗದ ಪತ್ರಗಳ ಸ್ವೀಕೃತಿ ವಿಲೇವಾರಿ

ಸಾರ್ವಜನಿಕರಿಂದ, ಅಧೀನ ಕಛೇರಿಗಳಿಂದ ಮತ್ತು ಸರ್ಕಾರ ಹಾಗೂ ಮೇಲಾಧಿಕಾರಿಗಳಿಂದ ಬರುವಂತಹ ಎಲ್ಲಾ ಕಾಗದ ಪತ್ರ ಕಡತಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ಸ್ವೀಕರಿಸಿ ಸಾರ್ವಜನಿಕರ ಮನವಿ ಬಗ್ಗೆ ಸ್ಥಳದಲ್ಲೇ ಸ್ವೀಕೃತಿ ಪತ್ರವನ್ನು ನೀಡಿದ ನಂತರ ಕಛೇರಿಯ ತಹಶೀಲ್ದಾರರ ಮುಖಾಂತರ ತಹಶೀಲ್ದಾರರ ಗಮನಕ್ಕೆ ತಂದು ಸ್ವೀಕೃತಿ ಶಾಖೆಯಲ್ಲಿ ದಾಖಲಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಪ್ರತಿ ಕಾಗದ ಪತ್ರಗಳನ್ನು ಶಾಖೆವಾರು ಗುರುತಿಸುವಂತೆ ಹಾಕಿದ ನಂತರ ಅಗತ್ಯ ಕ್ರಮ ಕೈಗೊಳ್ಳಲು ನೀಡಲಾಗುತ್ತದೆ. ಉದಾಹರಣೆಗೆ.

1. ಭೂ ಮಂಜೂರಾತಿ (ಎಲ್.ಎನ್.ಡಿ)
2. ಭೂ ಸುಧಾರಣೆ (ಎಲ್.ಆರ್.ಎಫ್)
3. ಭೂ ಸ್ವಾಧೀನ (ಎಲ್.ಎ.ಕ್ಯೂ)

4. ಲೆಕ್ಕ ಶಾಖೆ (ಡಿ.ಸಿ.ಬಿ)
5. ಪ್ರಕೃತಿ ವಿಕೋಪ (ಸಿ.ಎ.ಎಲ್)
6. ಹಕ್ಕು ದಾಖಲೆ (ಆರ್.ಆರ್.ಟಿ)
7. ಸಿಬ್ಬಂದಿ ಶಾಖೆ (ಇ.ಎಸ್.ಟಿ)
8. ಅಭಿಲೇಖಾಲಯ (ಆರ್. ಕೆ)
9. ಭೂ ಪರಿವರ್ತನೆ (ಎ.ಎಲ್.ಎನ್)
10. ಚುನಾವಣೆ (ಇ.ಎಲ್.ಎನ್)
11. ಆಡಳಿತ (ಎ.ಡಿ.ಎಂ)
12. ಮೆಜಿಸ್ಟೀರಿಯಲ್ (ಎಂ.ಎ.ಜಿ)
13. ಕರ್ನಾಟಕ ಪರಿಶಿಷ್ಟ ಜಾತಿ (ವರ್ಗಗಳ ಪರಭಾರೆ ನಿಷೇದ) ಪಿ.ಟಿ.ಸಿ.ಎಲ್
14. ನೀರಾವರಿ (ಐ.ಆರ್.ಆರ್)
15. ಅರಣ್ಯ (ಎಫ್.ಒ.ಆರ್)
16. ಸಾಲ್ವೆನ್ಸಿ (ಎಸ್.ಒ.ಎಲ್)
17. ಮಿಸಲೇನಿಯಸ್ (ಎಂ.ಎಸ್.ಸಿ)
18. ಸಾರ್ವಜನಿಕ ಕುಂದು ಕೊರತೆ (ಸಿ.ಎಂ.ಪಿ)

4 ಬಿ(1) IV

1. ಕಛೇರಿ ಪ್ರಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು

1. ತಹಶೀಲ್ದಾರರ ಕಛೇರಿಯಲ್ಲಿ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ವಿಷಯ ನಿರ್ವಾಹಕರಿಗೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ.
2. ಸಾರ್ವಜನಿಕರಿಂದ ಸ್ವೀಕರಿಸಲಾಗುವ ಕಾಗದ ಪತ್ರಗಳಿಗೆ ಸ್ವೀಕೃತಿ ನೀಡುವುದಲ್ಲದೆ ಕಾರ್ಯಗತ ಅವಧಿ ನಿಗದಿಪಡಿಸಿ ತಿಳಿಸಲಾಗುವುದು.
3. ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಸ್ವೀಕರಿಸಲಾಗುವ ಎಲ್ಲಾ ಮನವಿಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಮೂದಾದ ಕಾಲದಲ್ಲಿ ಉತ್ತರ ನೀಡುವುದು.

ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಮಾಹೆಯಲ್ಲೂ ಕಂದಾಯ ನಿರೀಕ್ಷಕರ ಮತ್ತು ಗ್ರಾಮಲೆಕ್ಕಿಗರ ಸಭೆ ಕರೆಯಲಾಗುವುದು.

ಕಛೇರಿ ಕೈಪಿಡಿ ನಿಯಮಾವಳಿ ರೀತ್ಯಾ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರು ಸ್ವೀಕರಿಸಿ ಗರಿಷ್ಠ 5 ದಿನಗಳೊಳಗೆ ನಿರ್ವಾಹಕರು ಎಲ್ಲಾ ಸ್ವೀಕರಿಸುವ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರ ದಿನಚರಿಯಲ್ಲಿ ನಮೂದಿಸಿಕೊಂಡು ತದ ನಂತರ ವಿಷಯ ಅನುಕ್ರಮವಾಗಿ ದಾಖಲಿಸಿಕೊಂಡು ಕಡತಗಳಲ್ಲಿ ಟಿಪ್ಪಣಿ ಹಾಕಿ ಮಂಡಿಸುತ್ತಾರೆ. ವಿಷಯ ನಿರ್ವಾಹಕರೆಲ್ಲರೂ ಕಛೇರಿ ಕಾರ್ಯ ವಿಧಾನ ರೀತ್ಯಾ ಕಟ್ಟು (Five bundle system) ವಿಧಾನ ಅಳವಡಿಸಿ ಕಾರ್ಯ ನಿರ್ವಹಿಸುತ್ತಾರೆ.

ವಿಷಯ ನಿರ್ವಾಹಕರಿಂದ ಬಂದಂತಹ ಎಲ್ಲಾ ಕಡತಗಳ ಪರಿಶೀಲನೆ ಮಾಡಿ ಶಾಖಾ ಮುಖ್ಯಸ್ಥರು ವಿಳಂಭವಾಗದ ರೀತಿ ವಿಷಯವಾರು ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಸೂಕ್ತ ಅಭಿಪ್ರಾಯದೊಂದಿಗೆ ಸಲ್ಲಿಸುತ್ತಾರೆ.

ಕಡತಗಳಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಅನುಸರಿಸುವ ಬಗ್ಗೆ ಕಾರ್ಯ ವಿಧಾನ ಕಛೇರಿ ಕೈಪಿಡಿಯ ನಿಯಮಾವಳಿ ರೀತಿ ವಹಿಸಲಾಗುವುದು.

4 ಬಿ(1) V

ತಹಶೀಲ್ದಾರರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳು

ತಹಶೀಲ್ದಾರರು ಮೇಲೆ ರೂಪಿಸಲಾದ ಕಾಯ್ದೆ ನಿಯಮಗಳಡಿ ನಿರ್ವಹಿಸುವ ಎಲ್ಲಾ ಕಡತಗಳಲ್ಲಿ ಅಂತಿಮ ಆದೇಶ ನೀಡಿ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನು ಅನುಸರಿಸಿ ಪ್ರವರ್ಗ 'ಎ' 'ಬಿ' 'ಸಿ' 'ಡಿ' ಮತ್ತು 'ಇ' ಎಂದು ವರ್ಗೀಕರಿಸಿ ನಿರ್ವಹಿಸಲಾಗುತ್ತಿದೆ.

ವರ್ಗೀಕರಣ ಅವಧಿ ಕೆಳಕಂಡಂತಿರುತ್ತದೆ.

'ಎ' ಡಿಸ್ – ಶಾಶ್ವತ
'ಬಿ' ಡಿಸ್ – 30 ವರ್ಷಗಳು
'ಸಿ' ಡಿಸ್ – 10 ವರ್ಷಗಳು
'ಡಿ' ಡಿಸ್ – 5 ವರ್ಷಗಳು
'ಇ' ಡಿಸ್ – 1 ವರ್ಷ

4 ಬಿ(1) VI

ಕಛೇರಿ ಕೆಲಸಕ್ಕಾಗಿ ಉಪಯೋಗಿಸಬೇಕಾದ ವಹಿಗಳು ಮತ್ತು ದಾಖಲೆಗಳು ಕಛೇರಿಯ ಕೆಲಸದ ಬಗ್ಗೆ ಈ ಕೆಳಗಿನ ವಹಿಗಳನ್ನು ಇಟ್ಟು ಕೆಲಸ ನಿರ್ವಹಿಸಲಾಗುತ್ತದೆ.

1) ಟಪ್ಪಾಲು ವಹಿ
2) ಅರೆ ಸರ್ಕಾರಿ ಪತ್ರಗಳ ಬಗ್ಗೆ ವಹಿ.
3) ಚುಕ್ಕೆ ಗುರುತಿನ ಪ್ರಶ್ನೆ ವಹಿ.
4) ಹಾಜರಾತಿ ವಹಿ.
5) ಚಲನ್ ವಹಿ.
6) ಅಕ್ರಮ ಸಕ್ರಮ ಮಂಜೂರಾತಿ ವಹಿ.
7) ಮನೆ ನಿವೇಶನ ಮಂಜೂರಾತಿ ವಹಿ.
8) ಬಂದೂಕು ಪರವಾನಗೆ ವಹಿ.
9) ವೃದ್ಧಾಪ್ಯ ವಿಧವಾ ಅಂಗವಿಕಲ ವೇತನ ವಹಿ.
10) ಬಾಕಿ ಪಟ್ಟಿ ವಹಿ.
11) ವಿಷಯ ನಿರ್ವಾಹಕರಲ್ಲಿರುವ ವಹಿಗಳು
    1. ದಿನವಹಿ
    2. ವಾರವಹಿ
12) ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಸಿಬ್ಬಂದಿ ವೇತನ ವಹಿ.
13) ಪ್ರಾಕೃತಿಕ ವಿಕೋಪ ಪರಿಹಾರ ಮಂಜೂರಾತಿ ವಹಿ.
14) ಆರಾಧನಾ, ತಸ್ತೀಕ್ ಮಂಜೂರಾತಿ ವಹಿ.
15) ಭೂ ಪರಿವರ್ತನಾ ಹಿಂಬರಹ ವಹಿ.
16) ಸೇವಾ ವಹಿಯ ಸಂಚಲನ ವಹಿ.
17) ಭೂ ಸುಧಾರಣಾ ಮಂಜೂರಾತಿ ವಹಿ.

4 ಬಿ(1) VII

ಅದರ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತ ಯಾವುದೇ ವ್ಯವಸ್ಥೆ ವಿವರಗಳು.

1) ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.
2) ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಸಭೆಗಳನ್ನು ಏರ್ಪಡಿಸುವುದು.
3) ಸಾರ್ವಜನಿಕರ ಕುಂದು ಕೊರತೆ ಆಲಿಸುವುದು.
4) ಪಾರದರ್ಶಕ ಕಾಯ್ದೆ ಅನುಷ್ಠಾನ.
5) ಎಲ್ಲಾ ವರ್ಗದ ಜನರಿಂದ ಸ್ವೀಕರಿಸುವಂತಹ ಅಹವಾಲುಗಳು.

ರೈತ ಸಂಘಟನೆಗಳು, ವಿದ್ಯಾರ್ಥಿಗಳು ಕುಂದುಕೊರತೆಗಳಿಲ್ಲದೆ ಇನ್ನಿತರ ಸಂಘಟನೆಗಳಿಂದ ನಡೆಸುವ ಪ್ರತಿಭಟನೆಗಳ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಿಸಿದವರಿಗೆ ರವಾನಿಸಿ ಮಾಹಿತಿ ಪಡೆದು ಪರಿಹಾರ ಒದಗಿಸುವುದಲ್ಲದೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಲಾಗುತ್ತಿದೆ. ಸಾರ್ವಜನಿಕ ದೂರು ಕೋಶ ಮುಖೇನ ಸ್ವೀಕರಿಸುವ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ.

6) ಪ್ರಾಕೃತಿಕ ವಿಕೋಪ

ನೈಸರ್ಗಿಕ ವಿಕೋಪಗಳಾದ ಅತಿವೃಷ್ಟಿ ಸೇರಿದಂತೆ ಎಲ್ಲಾ ವಿಕೋಪಗಳ ಬಗ್ಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತಿದೆ. ಅಲ್ಲದೆ ಸಾರ್ವಜನಿಕರಿಗೆ ಮನವರಿಕೆ ಅಗತ್ಯವಿದ್ದಲ್ಲಿ ಸಂಕಷ್ಟದ ಮಾಹಿತಿ ಪಡೆಯಲು ಹಾಗೂ ತುರ್ತು ಪರಿಹಾರ ನೀಡಲು ತಾಲ್ಲೂಕು ಕಛೇರಿಯಲ್ಲಿ ಕಂಟ್ರೋಲ್ ರೂಮ್ ತೆರೆಯಲಾಗಿದೆ. ತಾಲ್ಲೂಕು ಕಛೇರಿಯ ದೂರವಾಣಿ ಸಂಖ್ಯೆ :7245233 ಆಗಿರುತ್ತದೆ.

7) ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಸಿ ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ.

4 ಬಿ(1)

ಮಂಡಳಿ : ಪರಿಷತ್ತು :ಸಮಿತಿಗಳಲ್ಲಿ ಎರಡು ಹಾಗೂ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳಿಂದ ರಚಿಸಲಾದ ಸಮಿತಿಯ ಸಲಹೆ ಹಾಗೂ ಸರ್ಕಾರದ ನಡವಳಿಕೆಗಳು.

ಕಛೇರಿಯಲ್ಲಿ ಸರ್ಕಾರದ ಆದೇಶದಂತೆ ಅಕ್ರಮ ಸಕ್ರಮೀಕರಣ ಸಮಿತಿ ಭೂ ನ್ಯಾಯ ಮಂಡಳಿಯ ಸಮಿತಿ, ಆರಾಧನಾ ಸಮಿತಿಗಳು ರಚನೆಯಾಗಿ ಕೆಲಸ ನಿರ್ವಹಿಸಲಾಗುತ್ತದೆ.

4 (ಬಿ)

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಮಾಹಿತಿ ಪುಸ್ತಕ ಮತ್ತು ವೇತನ ವಿವರ ತಹಶೀಲ್ದಾರರು ಕಛೇರಿಯ ಮುಖ್ಯಸ್ಥರಾಗಿದ್ದು, ಕಛೇರಿಯ ಮುಖ್ಯಸ್ಥರಿಗೆ ಸರ್ಕಾರ ಇಲ್ಲವೇ ಇಲಾಖೆ ನೀಡಿದ ಹಕ್ಕು ಭಾದ್ಯತೆಗಳಿಗನುಗುಣವಾಗಿ ಕರ್ತವ್ಯ ನಿರ್ವಹಣೆ.

ಕ್ರ. ಸಂ.	ಅಧಿಕಾರಿ ನೌಕರರ ಪದನಾಮ	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ	ದೂರವಾಣಿ ಸಂಖ್ಯೆ
1.	ತಹಶೀಲ್ದಾರ್	1	11400–21600	246222
2.	ಉಪತಹಶೀಲ್ದಾರ್	2	10000–18150	246222
3.	ಪರಿಯಾವೀಕ್ಷಕರು	1	8825–16000	246222
4.	ಕಂದಾಯ ನಿರೀಕ್ಷಕರು	5	7275–13350	246222
5.	ಪ್ರ.ದ.ಸ	6	7275–13350	246222
6.	ದ್ವಿ.ದ.ಸ	14	(5800–10500)	246222
7.	ತೃ.ದ.ಸ	2	(5500–9500)	246222
8.	ಆಪ್ತ ಸಹಾಯಕ ಹುದ್ದೆ (ಶಾಸಕರು)	1	(5800–10500)	246222
9.	ಪ್ರ.ದ.ಭೂ.ಮಾಪಕರು	1	(775–13350)	246222
10.	ದ್ವಿ.ದ.ಭೂ	12	(6250–12000)	246222
11.	ಬೆರಳಚ್ಚುಗಾರರು	3	(5800–10500)	246222
12.	ಗ್ರಾಮ ಲೆಕ್ಕಿಗರು	44	(5800–10500)	246222
13.	ವಾಹನ ಚಾಲಕರು	1	(5800–10500)	246222
14.	ಡಿ–ದರ್ಜೆ ನೌಕರರು	11	(4800–7275)	246222
15.	ಬಾಂದು ಜವಾನರು	10	(4800–7275)	246222

4 ಬಿ(1) XI

2006–07 ನೇ ಸಾಲಿನ ಆಯವ್ಯಯದ ಬಗ್ಗೆ ಟಿಪ್ಪಣಿ

ಶ್ರೀನಿವಾಸಪುರ ತಾಲ್ಲೂಕಿಗೆ ಸಂಬಂಧಿಸಿದಂತೆ 2007–08 ನೇ ಸಾಲಿನ ಆಯವ್ಯಯದ ಅಂದಾಜು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವೇತನ ಅಂದಾಜು	ವೇತನೇತರ ಅಂದಾಜು	ಷರಾ
1.	2–53–00–094–7–01 ತಾಲ್ಲೂಕು ಕಛೇರಿ ಶ್ರೀನಿವಾಸಪುರ	4150500.00	1200000.00	
2.	2506–00–10–1–01 ಭೂ ಸುಧಾರಣೆ	96500.00		
3.	2029–00–193–101 ಗ್ರಾ.ಲೆ	4022500.00	120000.00	
4.	2053–00–094–701 ಭೂ ಮಾಪನ	2354400		
5.	2015–00–102–0–01 ಚುನಾವಣೆ	4038500.00		
6.	2515–00–101–017 ಚುನಾವಣೆ	124800.00		
7.	2408–01–001–0–01 ಆಹಾರ ಶಾಖೆ	454300.00		
8.	2011 ವಿಧಾನ ಸಭಾ ಆಪ್ತ ಸಹಾಯಕರು	99500.00		
9.	2029 ಕೆಳದರ್ಜೆ ನೌಕರರು	1039500.00		
10.	2071 ಮಾಜಿ ಪಟೇಲರು ಮತ್ತು ಮಾಜಿ ಶ್ಯಾನುಬೋಗರು	300000.00		
11.	2029 ಗ್ರಾಮ ಸಹಾಯಕರು	1176000.00		

4 ಬಿ(1) XII

ಇಲಾಖೆಯಲ್ಲಿ ಸಹಾಯಧನದ ನೀಡುವ ಕಾರ್ಯಕ್ರಮಗಳು.

NSAP, OAP, PHP, DWP, SSY

4 ಬಿ(1) XIII

ಇಲಾಖೆಯಲ್ಲಿ ಅಧಿಕಾರ ಪತ್ರದ ವಿಷಯಕ್ಕೆ ಸಂಬಂಧಿಸಿದಂತೆ.

–ಅನ್ವಯಿಸುವುದಿಲ್ಲ–

4 ಬಿ(1) XIV

ಕಛೇರಿಯಲ್ಲಿರುವ ಮಾಹಿತಿಯನ್ನು ವೆಬ್ ಸೈಟ್ ನಲ್ಲಿ ನೀಡಿರುವ ಬಗ್ಗೆ ವಿವರ.

ಕಛೇರಿಯಲ್ಲಿ ಪಹಣಿ ಮತ್ತು ಖಾತಾ ಬದಲಾವಣೆಗೆ ಸಂಬಂಧಿಸಿದಂತೆ "ಕಿಯೋಸ್ಕ್ ಕೇಂದ್ರ" ತೆರೆಯಲಾಗಿದ್ದು, ಜನರಿಗೆ ಪಹಣೀ ಪತ್ರಗಳನ್ನು ನೀಡಲಾಗುತ್ತಿದೆ.

4 ಬಿ(1)

ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲು ಲಭ್ಯವಿರುವ ಸುತ್ತೋಲೆಗಳು ಹಾಗೂ ಗ್ರಂಥಾಲಯಗಳು ಮತ್ತು ವಾಚನಾಲಯಗಳು ಅದರ ವಿವರ:

ಕಛೇರಿಯಲ್ಲಿ ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆಗಳೂ ಇರುತ್ತವೆ. ಗ್ರಂಥಾಲಯ ಇರುವುದಿಲ್ಲ.

ಸಾರ್ವಜನಿಕರ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇದರ ವಿವರಗಳು.

ಅಧಿಸೂಚನೆ

ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 ರ ಪ್ರಕರಣ ಕಲಂ (ಬಿ) ಅನುಸಾರ ಪ್ರಕಟಿಸಬೇಕಾದ ವಿವರಗಳ ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005 ರ (ಸೆಂಟ್ರಲ್ ಆಕ್ಟ್ 22 ಆಪ್ 2005) ಸೆಕ್ಷನ್ 5(1) 5(2) ಮತ್ತು 19(1) ರ ಪ್ರದತ್ತ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಾಲ್ಲೂಕು ಕಛೇರಿಯ ಮಾಹಿತಿಯ ಕೋರುವ ಅರ್ಜಿಗಳೂ ಅಥವಾ ಅಧಿಕಾರಿಗಳನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ.

ಕ್ರ. ಸಂ.	ಕಛೇರಿಯ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 5(2)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ 19(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ
1.	ತಾಲ್ಲೂಕು ಕಛೇರಿ ಶ್ರೀನಿವಾಸಪುರ	ತಹಶೀಲ್ದಾರ್, ಶ್ರೀನಿವಾಸಪುರ	ತಾಲ್ಲೂಕು ಶಿರಸ್ತೆದಾರರು, ತಾ.ಕಛೇರಿ, ಶ್ರೀನಿವಾಸಪುರ	ಸಹಾಯಕ ಕಮೀಷನರ್ ಕೋಲಾರ
2.	ನಾಡ ಕಛೇರಿ, ಯಲ್ದೂರು	ಉಪ ತಹಶೀಲ್ದಾರ್ ಯಲ್ದೂರು	ದ್ವಿ.ದ.ಸ. ನಾಡ ಕಛೇರಿ	ತಹಶೀಲ್ದಾರ್ ಶ್ರೀನಿವಾಸಪುರ
3.	ನಾಡ ಕಛೇರಿ, ಗೌನಿಪಲ್ಲಿ	ಉಪ ತಹಶೀಲ್ದಾರ್, ಗೌನಿಪಲ್ಲಿ	ದ್ವಿ.ದ.ಸ. ನಾಡ ಕಛೇರಿ	ತಹಶೀಲ್ದಾರ್ ಶ್ರೀನಿವಾಸಪುರ
4.	ಕಂದಾಯ ನಿರೀಕ್ಷಕರು ಕಸಬಾ ಹೋಬಳಿ	ಕಂದಾಯ ನಿರೀಕ್ಷಕರು ಕಸಬಾ	ಆಯಾ ಗ್ರಾಮದ ಗ್ರಾಮ ಲೆಕ್ಕಿಗರು	ತಹಶೀಲ್ದಾರ್ ಶ್ರೀನಿವಾಸಪುರ
5.	ಕಂದಾಯ ನಿರೀಕ್ಷಕರು ರೋಣೂರು ಹೋಬಳಿ	ಕಂದಾಯ ನಿರೀಕ್ಷಕರು ರೋಣೂರು	ಆಯಾ ಗ್ರಾಮದ ಗ್ರಾಮ ಲೆಕ್ಕಿಗರು	ತಹಶೀಲ್ದಾರ್ ಶ್ರೀನಿವಾಸಪುರ
6.	ಕಂದಾಯ ನಿರೀಕ್ಷಕರು ನೆಲವಂಕಿ ಹೋಬಳಿ	ಕಂದಾಯ ನಿರೀಕ್ಷಕರು ನೆಲವಂಕಿ	ಆಯಾ ಗ್ರಾಮದ ಗ್ರಾಮಸ್ಥರು	ತಹಶೀಲ್ದಾರ್ ಶ್ರೀನಿವಾಸಪುರ
7.	ಭೂ ಮಾಪನ ಉಪ ವಿಭಾಗ, ಶ್ರೀನಿವಾಸಪುರ	ಪರ್ಯಾವೀಕ್ಷಕರು, ಭೂ ಮಾಪನ ಶಾಖೆ, ಮಾಗಡಿ	ಆಯಾ ಗ್ರಾಮದ ಭೂ ಮಾಪಕರು	ತಹಶೀಲ್ದಾರ್ ಶ್ರೀನಿವಾಸಪುರ
8.	ಆಹಾರ ವಿಭಾಗ, ಶ್ರೀನಿವಾಸಪುರ	ಆಹಾರ ಶಿರಸ್ತೆದಾರ್ ಶ್ರೀನಿವಾಸಪುರ	ಆಹಾರ ನಿರೀಕ್ಷಕರು, ಮಾಗಡಿ	ತಹಶೀಲ್ದಾರ್ ಶ್ರೀನಿವಾಸಪುರ

4 ಬಿ(1) XVII

ನಿರ್ದಿಷ್ಟ ಪಡಿಸಬಹುದಾದ ಇತರ ಮಾಹಿತಿಗಳು

ಕಛೇರಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಅರ್ಜಿಗಳನ್ನು ಪಡೆದು ಸೂಕ್ತ ಹಿಂಬರಹದ ಮೂಲಕ ಅರ್ಜಿದಾರರಿಗೆ ಮಾಹಿತಿ ನೀಡಲಾಗುತ್ತಿದೆ.

ದಸ್ತಾವೇಜು ಪ್ರತಿಗಳನ್ನು ಆದೇಶದ ನಕಲುಗಳನ್ನು ಪಡೆಯಲು ಇಚ್ಛಿಸಿದಲ್ಲಿ ಅರ್ಜಿಯನ್ನು ಸಲ್ಲಿಸಿ ಅದಕ್ಕಾಗಿ ನಿಗದಿಪಡಿಸಿದ ಶುಲ್ಕವನ್ನು ತುಂಬಿ ಗರಿಷ್ಟ 7 ದಿನಗಳ ಒಳಗಾಗಿ ನಕಲು ಪ್ರತಿಗಳನ್ನು ಪಡೆಯುವ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತದೆ.

ವಹಿಗಳಲ್ಲಿ ನಮೂದಿಸಿದ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ಪತ್ರಗಳನ್ನು ನೀಡಲಾಗುವುದು ಹಾಗೂ ಸಾರ್ವಜನಿಕ ಮನವಿ ಬಗ್ಗೆ ಪ್ರತ್ಯೇಕ ಸ್ವೀಕೃತಿ ಪತ್ರವನ್ನು ನೀಡಲಾಗುತ್ತದೆ.

ಶಿರಸ್ತೇದಾರರು:

ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಮತ್ತು ಲೆಕ್ಕ ಪತ್ರ : ಚುನಾವಣೆ: ಕಂದಾಯ: ಕಾನೂನು: ಶಿಷ್ಠಾಚಾರ:ಸ್ವೀಕೃತಿ ಮತ್ತು ರವಾನೆ ಶಾಖೆಗಳಿಗೆ ಶಿರಸ್ತೇದಾರರು ಇರುತ್ತಾರೆ. ಅವರಿಗೆ ವಹಿಸಲಾದ ಶಾಖೆಯ ಮೇಲ್ವಿಚಾರಣೆ ಮಾಡುತ್ತಾರೆ. ಇವರುಗಳು ಕಛೇರಿಯ ಅಧಿಕಾರಿಗಳಿಗೆ ಅಧೀನ ಸಿಬ್ಬಂದಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ.

ಕಛೇರಿಯ ಸಿಬ್ಬಂದಿಗಳ ಸಂಕಲನ ಕರ್ತವ್ಯ ನಿರ್ವಹಣೆಗಳು, ಸಿಬ್ಬಂದಿ ನೇಮಕಾತಿ:ಶಿಸ್ತಿನ ಕ್ರಮ ಕಾರ್ಯನಿರ್ವಹಣೆ:

ತಾಲ್ಲೂಕು ವ್ಯಾಪ್ತಿಯ ಎಲ್ಲಾ ಅಧೀನ ಕಾರ್ಯಾಲಯಗಳು, ಮತ್ತು ನಾಡ ಕಛೇರಿಗಳ ನಿರ್ವಹಣೆ ಮಾಡಲಾಗುವುದು. ಗ್ರಾಮ ಸಹಾಯಕರ ನೇಮಕ: ವರ್ಗಾವಣೆಗಳನ್ನು ನಡೆಸುವುದು.

ನೈಸರ್ಗಿಕ ವಿಕೋಪ:

ಬರ ಮತ್ತು ಅತಿವೃಷ್ಟಿಗಳು ಸಂಭವಿಸಿದಾಗ ತುರ್ತು ರಕ್ಷಣಾ ಕ್ರಮಗಳನ್ನು ಜರುಗಿಸುವುದು ಮತ್ತು ಸಂತ್ರಸ್ಥರಿಗೆ ಪರಿಹಾರ ನೀಡಲಾಗುವುದು. ಸಿಡಿಲು ಬಡಿದು ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡಲು ಮತ್ತು ಬೆಂಕಿ ಆಕಸ್ಮಿಕ ಸಂಭವಿಸಿದಾಗ ಕ್ರಮ ಕೈಗೊಳ್ಳಲಾಗುತ್ತಿದೆ.

ಭೂ ಮಂಜೂರಾತಿ:

ಕಛೇರಿಯಲ್ಲಿ ಭೂ ಮಂಜೂರಾತಿಯ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು. ಅಕ್ರಮ ಸಕ್ರಮದ ಸಮಿತಿಗಳಲ್ಲಿ ಮಂಜೂರಾದ ಪ್ರಕರಣಗಳಿಗೆ ಹಕ್ಕು ಪತ್ರ ನೀಡಲಾಗುತ್ತಿದೆ. ಸರ್ಕಾರಿ ಅನಧಿಕೃತ ಅತಿಕ್ರಮಣ ಮಾಡಿರುವುದನ್ನು ಕ್ರಮ ಜರುಗಿಸಿ ತೆರವುಗೊಳಿಸಲಾಗುವುದು.

ಭೂ ಸ್ವಾಧೀನ:

ಭೂ ಸ್ವಾಧೀನತೆಯು ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸಲಾಗುವುದು.

ಭೂ ಸುಧಾರಣೆ:

ಕರ್ನಾಟಕ ಭೂ ಸುಧಾರಣೆ ಕಾಯದೆ 1961ರಲ್ಲಿ ಅವಕಾಶವಿದ್ದಂತೆ ಕಲಂ 48 ರಡಿಯಲ್ಲಿ ನೇಮಕವಾದ ಭೂ ಸುಧಾರಣಾ ಸಮಿತಿಗೆ ಕಾರ್ಯದರ್ಶಿಯಾಗಿ ಕಾನೂನಿನ ಪರಿಮಿತಿಯಲ್ಲಿ ಕೆಲಸ ನಿರ್ವಹಿಸುವುದು.

ಬೇಡಿಕೆ ವಸೂಲಿ ಬಾಕಿ(ಡಿ.ಸಿ.ಬಿ):

ಕೃಷಿ ಜಮೀನುಗಳ ಹಿಡುವಳಿಗಳ ಮೇಲೆ ನಿಗದಿತ ಪಡಿಸಿದ ಕಂದಾಯ ನೀರಾವರಿ ಕರ ಮತ್ತು ಇತರ ಕಂದಾಯಗಳ ಬೇಡಿಕೆ ಪಟ್ಟಿ ತಯಾರಿಸುವುದು, ವಸೂಲಿ ಮತ್ತು ಬಾಕಿಗಳ ನಿರ್ವಹಣೆ ಕೈಗೊಳ್ಳುವುದು.

ಸರ್ಕಾರದ ಇತರೆ ಇಲಾಖೆಗಳಿಂದ ವಸೂಲಿ ಮಾಡದೆ ಇರುವ ತೆರಿಗೆಗಳ ಬಾಕಿಗಳು ಮತ್ತು ಸಾಲಗಳನ್ನು ಬಾಕಿ ಇರುವ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿವರ್ತಿಸಿ, ವಸೂಲಿ ಕ್ರಮ ಜರುಗಿಸುವುದು.

ಗಣಿಗಾರಿಕೆ :

ಗಣಿಗಾರಿಕೆ ಸಂಬಂಧಿಸಿದಂತೆ ಪ್ರಕರಣಗಳ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಜಮಾಬಂದಿ :

ಎಲ್ಲಾ ಕಂದಾಯ ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕಂದಾಯ ನಿಗದಿ ವಸೂಲಾತಿ ಮತ್ತು ಬಾಕಿ ವಿವರಗಳನ್ನೊಳಗೊಂಡಂತೆ ಹಾಗೂ ಭೂ ಕಂದಾಯ ಮಾಡುವ ಮತ್ತು ಸರ್ಕಾರಿ ಜಮೀನುಗಳ ವಿವರಗಳನ್ನೊಳಗೊಂಡಂತೆ ವಾರ್ಷಿಕ ಜಮಾಬಂದಿ ನಡೆಸಲಾಗುವುದು.

ಹುಜೂರು ಜಮಾಬಂದಿಗೆ ಸಂಬಂಧಿಸಿದಂತೆ ಟಿಪ್ಪಣಿ ತಯಾರಿಸಿ ಸಹಾಯಕ ಕಮೀಷನರ್ ರಾಮನಗರಂ ಅಥವಾ ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ದೇವಸ್ಥಾನ ವಕ್ಫ್ :

ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನದ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ತ್ವಸ್ತೀಕ್ ಭತ್ಯೆ ಪಾವತಿಸುವುದು.

ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ಕರೆದು ಧಾರ್ಮಿಕ ಸಂಸ್ಥೆಗಳಿಗೆ ಅನುದಾನದ ಬಗ್ಗೆ ಶಿಫಾರಸು ಪಡೆದು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು ಅನುದಾನ ಮಂಜೂರಾಗಿ ಬಂದ ಧಾರ್ಮಿಕ ಸಂಸ್ಥೆಗಳಿಗೆ ಹಣ ಪಾವತಿಸಿ ಬಳಕೆ ಪ್ರಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ಲೆಕ್ಕಪತ್ರ:

ಕಛೇರಿಯ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ ಸಾದಿಲ್ವಾರು ವೆಚ್ಚ ವಾಹನಗಳ ಇಂಧನ ಮತ್ತು ದುರಸ್ತಿ ವೆಚ್ಚಗಳಿಗೆ ಮಂಜೂರಾದ ಹಣದ ಬಗ್ಗೆ ಬೆಲೆಗಳ ತಯಾರಿಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಚುನಾವಣೆ:

ಕೇಂದ್ರ ಚುನಾವಣಾ ಆಯೋಗದಿಂದ ನಿಗದಿಪಡಿಸಿದ ಲೋಕಸಭೆ ಚುನಾವಣೆ ಮತ್ತು ವಿಧಾನ ಸಭೆ ಚುನಾವಣೆ ಹಾಗೂ ರಾಜ್ಯ ಸರ್ಕಾರದ ಸ್ಥಳೀಯ ಸಂಸ್ಥೆ ಚುನಾವಣೆಗಳಾದ ತಾಲ್ಲೂಕು ಪಂಚಾಯತ್ ಗ್ರಾಮ ಪಂಚಾಯತ್ ನಗರ ಪಂಚಾಯತ್‌ಗಳ ಚುನಾವಣೆ ಕಾರ್ಯಸೂಚಿ ಪ್ರಕಾರ ಚುನಾವಣೆ ಕಾರ್ಯಕ್ರಮಗಳನ್ನು ರೂಪಿಸುವುದು ಚುನಾವಣೆಗೆ ಸಂಬಂಧಿಸಿದ ಅವ್ಯವಹಾರಗಳ ನಿರ್ವಹಣೆ ಮತ್ತು ಮತದಾರರಿಗೆ ಗುರುತು ಚೀಟಿ ನೀಡುವುದು ಹಾಗೂ ಮತದಾರರ ಪಟ್ಟಿಯ ನಿರ್ವಹಣೆ ಮಾಡುವುದು.

ಸಿ.ಎಂ.ಪಿ.:

ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಬಂದ ಪತ್ರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಜಿಲ್ಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಸಭೆ ಮತ್ತು ರಾಷ್ಟ್ರೀಯ ಹಬ್ಬಗಳು:

ತಾಲ್ಲೂಕಿನಲ್ಲಿ ನಡೆಯುವ ಎಲ್ಲಾ ಉತ್ಸವ ರಾಷ್ಟ್ರೀಯ ಹಬ್ಬಗಳು ಮತ್ತು ತಾಲ್ಲೂಕು ಅಭಿವೃದ್ಧಿ ಕಾರ್ಯಕ್ರಮ ಬಗ್ಗೆ ಜರುಗುವ ಸಭೆ ಸಮಾರಂಭಗಳನ್ನು ನಿರ್ವಹಣೆ ಮಾಡುವುದು.

ಅಭಿಲೇಖಾಲಯ:

ಕಛೇರಿಯ ಪ್ರತಿಯೊಂದು ಶಾಖೆಯಿಂದ ನಿರ್ವಹಣೆಗಾಗಿ ಕಛೇರಿ ಸಹಾಯಕದಿಂದ ಬೇರೆ ಬೇರೆ ಬಾಕಿಯ ವಿಲೆಗಳ ಬೇರೆ ಬೇರೆ ವರ್ಗಗಳ ಕಾಗದ ಪತ್ರಗಳ ವ್ಯವಹಾರಗಳನ್ನು ಎಷ್ಟು ಕಾಲ ಕಾಯ್ದಿರಿಸಬೇಕೆಂಬುದನ್ನು ತಿಳಿದು ಈ ಕೆಳ ಕಾಣಿಸಿದ ಪ್ರಕಾರ ವಿಭಜನೆ ಮಾಡಲಾಗುವುದು ಶ್ರೇಣಿವಾರು ಹೊಂದಿಸಿ ಇಡಲಾಗುವುದು.

'ಎ' ಡಿಸ್ – ಅನಿರ್ದಿಷ್ಟ (ಖಾಯಂ)

'ಬಿ' ಡಿಸ್ – 30 ವರ್ಷಗಳು

'ಸಿ' ಡಿಸ್ – 10 ವರ್ಷಗಳು

'ಡಿ' ಡಿಸ್ – 5 ವರ್ಷಗಳು

'ಇ' ಡಿಸ್ – 1 ವರ್ಷ

ಮೇಲೆ ಕಾಣಿಸಿದ ವಿಲೇವಾರಿಗಳ ಅವಧಿ ಮುಗಿದ ನಂತರ ಕಛೇರಿಯ ಮುಖ್ಯಸ್ಥರ ಆದೇಶವನ್ನು ಪಡೆದು 'ಎ' ಮತ್ತು 'ಬಿ' ಡಿಸ್ ಗಳಲ್ಲಿನ ಕಡತಗಳನ್ನು ಹೊರತುಪಡಿಸಿ ನಾಶಗೊಳಿಸಲಾಗುವುದು.

ಕಾರ್ಯಾಲಯದ ಪೀಠೋಪಕರಣ ಕಾರ್ಯನಿರ್ವಹಣೆ ಯಂತ್ರ ಸಾಮಾಗ್ರಿಗಳ ಖರೀದಿ ಮತ್ತು ದುರಸ್ತಿ ಕಾರ್ಯಾಲಯದ ವ್ಯವಹಾರಕ್ಕೆ ಅವಶ್ಯವಿರುವ ಲೇಖನ ಸಾಮಾಗ್ರಿ ಖರೀದಿ ಮತ್ತು ವಿತರಣೆ ಕಛೇರಿಯ ಸುವ್ಯವಸ್ಥೆ ವಿದ್ಯುದ್ದೀಕರಣ ನಿರ್ವಹಣೆ ವಿವಿಧ ಕಾಯ್ದೆ ಅಡಿ ಇರುವ ಎಲ್ಲಾ ಪುಸ್ತಕಗಳನ್ನು ಸುಸ್ಥಿತಿಯಲ್ಲಿ ಇಡುವುದು ಮತ್ತು ಸಂಬಂಧಪಟ್ಟ ಕಡತವನ್ನು ನೀಡುವುದು ಅಲ್ಲದೇ ಸಾರ್ವಜನಿಕರು ಕೋರುವ ದಾಖಲೆಗಳನ್ನು ನಿಯಾಮಾನುಸಾರ ನೀಡಲಾಗುತ್ತದೆ.

ಸಾಮಾಜಿಕ ಭದ್ರತಾ ಯೋಜನೆ:

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಅನುದಾನ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ನಂತರ ಪಾವತಿಸುವುದು ವೃದ್ಧಾಪ್ಯ, ಅಂಗವಿಕಲ ವಿಧವಾ ವೇತನದಾರರಿಗೆ ಮಂಜೂರಿ ಪತ್ರ ನೀಡಲಾಗುವುದು ಜಾತಿ ಆದಾಯ ಮತ್ತು ವಾಸ್ತವ್ಯ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದು ಮತ್ತು ನಿರ್ವಹಣೆ.

ಸ್ವೀಕೃತಿ:

ಕಛೇರಿಗೆ ಸ್ವೀಕೃತವಾಗುವ ಸರ್ಕಾರದ ಅಧೀನ ಕಾರ್ಯಾಲಯದ ಮತ್ತು ಜಿಲ್ಲಾಧಿಕಾರಿಗಳ ಮತ್ತು ಸಹಾಯಕ ಕಮೀಷನರ್ ಸಾರ್ವಜನಿಕರ ಮತ್ತು ಸ್ಥಳೀಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತವಾಗುವ ಅರ್ಜಿಗಳಿಗೆ ಮತ್ತು ಪತ್ರಗಳಿಗೆ ತನಿಖೆ ನಡೆಸಿ ಕ್ಲಿಷ್ಟ ಸಮಯದಲ್ಲಿ ಮಾಹಿತಿಯನ್ನು ನೀಡಲಾಗುವುದು.

ಶ್ರೀನಿವಾಸಪುರ ತಾಲ್ಲೂಕು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ವಿವರ			
ಕ್ರಮ ಸಂಖ್ಯೆ	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಪಡೆಯುತ್ತಿರುವ ಮೂಲ ವೇತನ	ದೂರವಾಣಿ ಸಂಖ್ಯೆ
1.	ಬಿ.ಎಸ್. ಮಂಜುನಾಥಸ್ವಾಮಿ, ತಹಶೀಲ್ದಾರ್	12,300–00	246222
2.	ಆರ್. ನಾರಾಯಣ ವಿಠಲ್, ತಾ.ಶಿ	14800–00	246222
3.	ಆರ್.ಪಿ. ಶಿವಶಂಕರ್, ಆ.ಶಿ	14800–00	246222
4.	ಡಿ. ಶಿವರಾಜ್, ಉ.ತ	11,700–00	246222
5.	ಜಿ. ನರಸಿಂಹಯ್ಯ, ಉ.ತ	14,800–00	246222
6.	ಸಿ.ಎಂ.ಮುಗಲ್ ಖೋಡ್, ಆರ್.ಆರ್.ಟಿ, ಶಿ	14,400–00	246222
7.	ಚಂದ್ರಕಾಂತಮ್ಮ, ಚು.ಶಿ	12300–00	246222
8.	ಗಾದಿವೆಂಕಟರಾಮಯ್ಯ , ರಾ,ನಿ	8825–00	246222
9.	ಎಸ್. ರಾಜಣ್ಣ, ಪ್ರ.ದ.ಸ	12,000–00	246222
10.	ಆರ್. ಅಂಜಲಿದೇವಿ, ಪ್ರ.ದ.ಸ	7,450–00	246222
11.	ಬಿ.ಎಂ. ಚಂದ್ರಯ್ಯ, ಪ್ರ.ದ.ಸ	8825–00	246222
12.	ವಿ. ನಂಜುಂಡರೆಡ್ಡಿ, ಆ.ನಿ	9,050–00	246222
13.	ಇ. ಶಂಕರರೆಡ್ಡಿ, ಗ್ರಾ.ಲೆ	7,800–00	246222
14.	ಸಿ.ಎಂ. ಅಂಬರೀಶ್, ಗ್ರಾ.ಲೆ	7,800–00	246222
15.	ಎನ್. ಅಶ್ವಥನಾರಾಯಣ, ಗ್ರಾ.ಲೆ	8000–00	246222
16.	ಎನ್. ಸೋಮಪ್ಪ, ಗ್ರಾ.ಲೆ	8,400–00	246222
17.	ಎನ್. ಪ್ರದೀಪ್ ಬಾಬು, ಗ್ರಾ.ಲೆ	6125–00	246222
18.	ವಿ. ಪ್ರಕಾಶ್, ಗ್ರಾ.ಲೆ	6800–00	246222
19.	ವಿ.ಎಂ. ಶಿವಪ್ರಕಾಶ್, ಗ್ರಾ.ಲೆ	6000–00	246222
20.	ಎ.ಎಸ್. ಕೈಲಾಸ್, ಗ್ರಾ.ಲೆ	9,275–00	246222
21.	ಎನ್. ವೆಂಕಟಶಾಮಿ, ಗ್ರಾ.ಲೆ	7,625–00	246222
22.	ಪಿ. ರಾಮಕೃಷ್ಣಪ್ಪ, ಗ್ರಾ.ಲೆ	7,800–00	246222
23.	ಹೆಚ್. ನವೀನ್ ಕುಮಾರ್, ಗ್ರಾ.ಲೆ	6000–00	246222
24.	ಬೆಳ್ಳಪ್ಪ, ಗ್ರಾ.ಲೆ	9750–00	246222
25.	ಪಾರ್ವತಮ್ಮ, ಗ್ರಾ.ಲೆ	6000–00	246222
26.	ಎನ್.ಬೈರಾರೆಡ್ಡಿ, ಗ್ರಾ.ಲೆ	7450–00	246222
27.	ಕೆ.ವಿ. ತಿಮ್ಮರಾಯಪ್ಪ, ಗ್ರಾ.ಲೆ	6650–00	246222
28.	ರವಿಚಂದ್ರಾಚಾರಿ, ಗ್ರಾ.ಲೆ	8600–00	246222

ಕ್ರಮ ಸಂಖ್ಯೆ	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಪಡೆಯುತ್ತಿರುವ ಮೂಲ ವೇತನ	ದೂರವಾಣಿ ಸಂಖ್ಯೆ
29.	ಎಸ್. ಸುರೇಶ್, ಗ್ರಾ.ಲೆ	6000–00	246222
30.	ಎಸ್.ವಿ. ಜನಾರ್ದನ್, ಗ್ರಾ.ಲೆ	5800–00	246222
31.	ಮಂಗಳಗೌರಮ್ಮ, ಗ್ರಾ.ಲೆ	7450–00	246222
32.	ಕೆ.ಎಸ್. ಬೈಯಣ್ಣ, ಗ್ರಾ.ಲೆ	7450–00	246222
33.	ಬಿ.ಎಂ. ಶ್ರೀನಿವಾಸರೆಡ್ಡಿ , ಗ್ರಾ.ಲೆ	7800–00	246222
34.	ಆರ್.ಜಿ. ಗೋಪಾಲ ಕೃಷ್ಣರೆಡ್ಡಿ, ಗ್ರಾ.ಲೆ	7625–00	246222
35.	ಎಂ.ಎನ್. ವಸುಂದರಾದೇವಿ, ಗ್ರಾ.ಲೆ	6650–00	246222
36.	ಎಂ.ಎಸ್. ನವೀನ್ ಕುಮಾರ್ ಗ್ರಾ.ಲೆ	6125–00	246222
37.	ವಿಜಯ್ ಕುಮಾರ್, ಗ್ರಾ.ಲೆ	5800–00	246222
38.	ಕಿರಣ್ ಕುಮಾರ್, ಗ್ರಾ.ಲೆ	6125–00	246222
39.	ಕೆ.ಎಂ. ರಮೇಶ್, ಗ್ರಾ.ಲೆ	7800–00	246222
40.	ಎಂ.ಹೆಚ್. ನಾರಾಯಣಸ್ವಾಮಿ, ಗ್ರಾ.ಲೆ	7450–00	246222
41.	ಎ.ಎನ್. ಗುರುರಾಜರಾವ್, ಗ್ರಾ.ಲೆ	7,625–00	246222
42.	ಅಬ್ದುಲ್ ಸಲೀಂ, ಗ್ರಾ.ಲೆ	7800–00	246222
43.	ಆರ್. ಲಕ್ಷ್ಮಣರೆಡ್ಡಿ, ಗ್ರಾ.ಲೆ	7625–00	246222
44.	ಕೆ.ಎನ್. ಮುನಿಯಪ್ಪ, ಗ್ರಾ.ಲೆ	7450–00	246222
45.	ಆರ್. ಸುಬ್ಬಾರೆಡ್ಡಿ, ಗ್ರಾ.ಲೆ	7625–00	246222
46.	ಎ. ಜಯಚಂದ್ರ, ಗ್ರಾ.ಲೆ	6000–00	246222
47.	ಸಿ.ಪಿ. ಶಿವಪ್ರಕಾಶ್, ಗ್ರಾ.ಲೆ	5900–00	246222
48.	ಜಿ. ಕೋಮಲ, ಗ್ರಾ.ಲೆ	5900–00	246222
49.	ಜಿ. ನಾಗರಾಜ್, ಗ್ರಾ.ಲೆ	5900–00	246222
50.	ಪಿ.ವಿ. ವಿಶ್ವನಾಥ್, ಗ್ರಾ.ಲೆ	5900–00	246222
51.	ಟಿ.ಎನ್. ತೇಜೆಗೌಡ, ಗ್ರಾ.ಲೆ	5900–00	246222
52.	ಜಿ.ನವೀನ್, ಗ್ರಾ.ಲೆ	5900–00	246222
53.	ಎನ್. ಮೋಹನ್ ಕುಮಾರ್, ಗ್ರಾ.ಲೆ	5900–00	246222
54.	ಹೆಚ್.ಎಸ್. ಪ್ರಮೋದ್ ಕುಮಾರ್, ಗ್ರಾ.ಲೆ	5900–00	246222
55.	ಬಿ.ಎಸ್. ಪ್ರಭುಶಂಕರ್, ಗ್ರಾ.ಲೆ	5900–00	246222
56.	ಬಿ. ಪದ್ಮಾವತಿ, ದ್ವಿ.ದ.ಸ	5800–00	246222
57.	ವೈ. ಹನುಮಂತಪ್ಪ, ದ್ವಿ.ದ.ಸ	8600–00	246222
58.	ಹೆಚ್.ವಿ. ಶ್ರೀನಿವಾಸಯ್ಯ, ದ್ವಿ.ದ.ಸ	7625–00	246222
59.	ಎಸ್. ರೆಡ್ಡೆಪ್ಪ, ದ್ವಿ.ದ.ಸ	5800–00	246222
60.	ಎನ್. ಚಂಗಲರಾಯಪ್ಪ, ದ್ವಿ.ದ.ಸ	7450–00	246222

ಕ್ರಮ ಸಂಖ್ಯೆ	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಪಡೆಯುತ್ತಿರುವ ಮೂಲ ವೇತನ	ದೂರವಾಣಿ ಸಂಖ್ಯೆ
61.	ಬಿ. ಅನುಸೂಯ, ದ್ವಿ.ದ.ಸ	7450–00	246222
62.	ಎನ್. ನಾರಾಯಣಸ್ವಾಮಿ, ದ್ವಿ.ದ.ಸ	7450–00	246222
63.	ಎನ್. ಜನಾರ್ದನಗೌಡ, ದ್ವಿ.ದ.ಸ	7450–00	246222
64.	ಸಿ. ನಾರಾಯಣರೆಡ್ಡಿ, ದ್ವಿ.ದ.ಸ	7625–00	246222
65.	ಕೆ.ವಿ. ಜಗನ್ನಾಥ್, ದ್ವಿ.ದ.ಸ	9050–00	246222
66.	ಬಿ. ಜಯಣ್ಣ, ದ್ವಿ.ದ.ಸ	7450–00	246222
67.	ಸತ್ಯಲಕ್ಷ್ಮೀ, ದ್ವಿ.ದ.ಸ	10500–00	246222
68.	ಎ. ರಂಜಿತ, ದ್ವಿ.ದ.ಸ	5800–00	246222
69.	ಜಿ.ಆರ್. ಪ್ರೇಮಕುಮಾರ್. ಪ್ರ.ದ.ಬು	11700–00	246222
70.	ಪಿ. ಸ್ವಪ್ನ, ಪ್ರ.ದ.ಸ	7625–00	246222
71.	ಎಂ.ಎ. ಮುದ್ದುವೀರಪ್ಪ ದ್ವಿ.ದ.ಬು	8200–00	246222
72.	ನಾಗಭೂಷಣ, ದ್ವಿ.ದ.ಬು	6950–00	246222
73.	ಎಂ. ನಾಗಾರ್ಜುನ. ದ್ವಿ.ದ.ಬು	8600–00	246222
74.	ಟಿ.ಸಿ. ಹುಚ್ಚಮಾಸ್ತಿಗೌಡ , ದ್ವಿ.ದ.ಬು	8200–00	246222
75.	ಎಂ.ಎಲ್. ವಸಂತಕುಮಾರ್, ದ್ವಿ.ದ.ಬು	8000–00	246222
76.	ಕೆ.ಹೆಚ್. ಮೃತ್ಯುಂಜಯ, ದ್ವಿ.ದ.ಬು	6250–00	246222
77.	ಕೆ.ವಿ. ಶ್ರೀನಿವಾಸಯ್ಯ, ದಪ್ತರ್ ಬಂದ್	7450–00	246222
78.	ಎಂ. ನಾರಾಯಣಮ್ಮ ,ಡಿ.ದರ್ಜೆ	4300–00	246222
79.	ಗಂಗಪ್ಪ, ಡಿ.ದರ್ಜೆ	8400–00	246222
80.	ಡಿ.ಪಿ. ಸುಬ್ಬರಾಯಪ್ಪ, ಡಿ.ದರ್ಜೆ	8200–00	246222
81.	ಸರೋಜಮ್ಮ, ಡಿ.ದರ್ಜೆ	7275–00	246222
82.	ಆರ್. ಸುರೇಶ್, ಡಿ.ದರ್ಜೆ	7100–00	246222
83.	ಸಫೂರಾಬಿ, ಡಿ.ದರ್ಜೆ	6125–00	246222
84.	ಸಿ.ಎಂ. ನಾಗೇಂದ್ರ, ಡಿ.ದರ್ಜೆ	5000–00	246222
85.	ಗೋವಿಂದಪ್ಪ, ಡಿ.ದರ್ಜೆ	7100–00	246222
86.	ಆರ್. ಚಂದ್ರಶೇಖರಪ್ಪ, ಡಿ.ದರ್ಜೆ	8000–00	246222
87.	ಕೆ. ಚಂದ್ರ, ಬಾ.ಜ	8000–00	246222
88.	ಸಿ.ಕೆ. ಗಂಗಪ್ಪ, ಬಾ.ಜ	6800–00	246222
89.	ಸಿ.ಎಂ. ನಾರಾಯಣಸ್ವಾಮಿ, ಬಾ.ಜ	7100–00	246222
90.	ಸಿ. ವೆಂಕಟೇಶಗೌಡ, ಬಾ.ಜ	7100–00	246222
91.	ಡಿ.ಎಂ. ವೆಂಕಟೇಶಪ್ಪ, ಬಾ.ಜ	7100–00	246222
92.	ಎಂ. ಶ್ರೀನಿವಾಸ್, ಬಾ.ಜ	6000–00	246222

ಕ್ರಮ ಸಂಖ್ಯೆ	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಪಡೆಯುತ್ತಿರುವ ಮೂಲ ವೇತನ	ದೂರವಾಣಿ ಸಂಖ್ಯೆ
ಗ್ರಾಮ ಸಹಾಯಕರು			
1.	ಶ್ರೀನಿವಾಸ ಕಲ್ಲೂರು, ಗ್ರಾ.ಸ	2,000–00	246222
2.	ಅಶ್ವಥಮ್ಮ, ನಂಬಿಹಳ್ಳಿ, ಗ್ರಾ.ಸ	2,000	246222
3.	ವಿ. ಮುನಿಶಾಮಪ್ಪ, ದಳಸನೂರು, ಗ್ರಾ.ಸ	2,000	246222
4.	ಬಾಲಪ್ಪ, ಪಾಳ್ಯ, ಗ್ರಾ.ಸ	2,000	246222
5.	ಆಂಜನೇಯಪ್ಪ, ಕೊಡಿಚರುವು, ಗ್ರಾ.ಸ	2,000	246222
6.	ವೆಂಕಟಸ್ವಾಮಿ, ವೈ.ಹೊಸಕೋಟೆ, ಗ್ರಾ.ಸ	2,000	246222
7.	ವೆಂಕಟೇಶಪ್ಪ, ಗಿಜಗಾನಹಳ್ಳಿ, ಗ್ರಾ.ಸ	2,000	246222
8.	ನಾರೆಪ್ಪ, ತೆರ್ನಹಳ್ಳಿ, ಗ್ರಾ.ಸ	2,000	246222
9.	ಆಂಜನೇಯಪ್ಪ, ಚಲ್ದಗಾನಹಳ್ಳಿ, ಗ್ರಾ.ಸ	2,000	246222
10.	ಸುನಿಲ್ ಕುಮಾರ್, ಹೆಬ್ಬಟ, ಗ್ರಾ.ಸ	2,000	246222
11.	ಏಳೆಯಪ್ಪ, ಜೆ. ತಿಮ್ಮಸಂದ್ರ, ಗ್ರಾ.ಸ	2,000	246222
12.	ವೆಂಕಟೇಶಪ್ಪ, ರೋಣೂರು, ಗ್ರಾ.ಸ	2,000	246222
13.	ನಾರಾಯಣಸ್ವಾಮಿ, ನಾಗದೇವನಹಳ್ಳಿ, ಗ್ರಾ.ಸ	2,000	246222
14.	ಬೈಚಪ್ಪ, ದಿಂಬಾಲ, ಗ್ರಾ.ಸ	2,000	246222
15.	ದೊಡ್ಡಪ್ಪ, ಎಚ್ಚನಹಳ್ಳಿ, ಗ್ರಾ.ಸ	2,000	246222
16.	ಮುನಿವೆಂಕಟಪ್ಪ,ಸೋಮಯಾಜಲಹಳ್ಳಿ, ಗ್ರಾ.ಸ	2,000	246222
17.	ನರಸಿಂಹಪ್ಪ, ಮಣಿಗಾನಹಳ್ಳಿ, ಗ್ರಾ.ಸ	2,000	246222
18.	ಎನ್. ವೆಂಕಟರವಣ, ತಾಡಿಗೊಳ್, ಗ್ರಾ.ಸ	2,000	246222
19.	ಟಿ.ಎನ್.ಆಂಜನೇಯಪ್ಪ, ಆರ್. ತಿಮ್ಮಸಂದ್ರ, ಗ್ರಾ.ಸ	2,000	246222
20.	ನಾರಾಯಣಸ್ವಾಮಿ ಪೆಗಳಪಲ್ಲಿ, ಗ್ರಾ.ಸ	2,000	246222
21.	ಸಿ. ವೆಂಕಟಸ್ವಾಮಿ, ಮಟ್ಟಕನ್ನಸಂದ್ರ, ಗ್ರಾ.ಸ	2,000	246222
22.	ಕೆ. ಮುನಿಯಪ್ಪ, ಹೊಗಳಗೆರೆ, ಗ್ರಾ.ಸ	2,000	246222
23.	ವೆಂಕಟೇಶಪ್ಪ, ಲಕ್ಷ್ಮೀಸಾಗರ, ಗ್ರಾ.ಸ	2,000	246222
24.	ರಾಮಪ್ಪ, ಕೊಳತ್ತೂರು, ಗ್ರಾ.ಸ	2,000	246222
25.	ಟಿ. ರಾಮಪ್ಪ, ಮುತ್ತಕಪಲ್ಲಿ, ಗ್ರಾ.ಸ	2,000	246222
26.	ಎಂ. ಶ್ರೀನಿವಾಸ್, ಯಲ್ದೂರು, ಗ್ರಾ.ಸ	2,000	246222
27.	ಶ್ರೀರಾಮಪ್ಪ, ರಾಯಲ್ಪಾಡು, ಗ್ರಾ.ಸ	2,000	246222
28.	ಜಿ.ವಿ.ವೆಂಕಟರವಣ, ಮುದಿಮಡುಗು, ಗ್ರಾ.ಸ	2,000	246222
29.	ಕೆ. ಗಂಗುಲಪ್ಪ, ಯರ್ರಂವಾರಿಪಲ್ಲಿ, ಗ್ರಾ.ಸ	2,000	246222
30.	ವಿ.ಎನ್. ವೆಂಕಟರವಣ. ವೇಂಪಲ್ಲಿ, ಗ್ರಾ.ಸ	2,000	246222
31.	ಚಿನ್ನಬಿಡ್ಡಪ್ಪ, ಬೈರಗಾನಪಲ್ಲಿ, ಗ್ರಾ.ಸ	2,000	246222

ಕ್ರಮ ಸಂಖ್ಯೆ	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಪಡೆಯುತ್ತಿರುವ ಮೂಲ ವೇತನ	ದೂರವಾಣಿ ಸಂಖ್ಯೆ
32.	ವೆಂಕಟರವಣ, ಕೂರಿಗೇಪಲ್ಲಿ, ಗ್ರಾ.ಸ	2,000	246222
33.	ಕಿಟ್ಟಣ್ಣ, ಗೌನಿಪಲ್ಲಿ, ಗ್ರಾ.ಸ	2,000	246222
34.	ವೆಂಕಟಪ್ಪ, ಅಡ್ಡಗಲ್, ಗ್ರಾ.ಸ	2,000	246222
35.	ವೆಂಕಟಪ್ಪ, ಕೋಡಿಪಲ್ಲಿ, ಗ್ರಾ.ಸ	2,000	246222
36.	ಕೆ. ಸುಬ್ಬನ್ನ, ಲಕ್ಷ್ಮೀಪುರ, ಗ್ರಾ.ಸ	2,000	246222
37.	ಕೆ. ಮುನಿಯಪ್ಪ, ಪುಲಗೂರಕೋಟೆ, ಗ್ರಾ.ಸ	2,000	246222
38.	ಮುನಿಶಾಮಿ ಮಂಚಿನೀಳ್ಳಕೋಟೆ, ಗ್ರಾ.ಸ	2,000	246222
39.	ಎನ್. ವೆಂಕಟೇಶಪ್ಪ, ಹೆಚ್ಚುವರಿ, ಗ್ರಾ.ಸ	2,000	246222
40.	ಕೆ. ಮಲ್ಲಿಕಾರ್ಜುನ, ಯಲ್ದೂರು,	2,000	246222
41.	ಬಿ. ಶ್ರೀನಿವಾಸಯ್ಯ, ರೋಣೂರು,	2,000	246222
42.	ನಾಗರಾಜ, ನೆಲವಂಕಿ	2,000	246222
43.	ಎಸ್. ಶ್ರೀನಿವಾಸ್, ರಾಯಲ್ಪಾಡು	2,000	246222
44.	ಆಂಜಪ್ಪ, ಇಮರಕುಂಟೆ, ಗ್ರಾ.ಸ	2,000	246222

ತಹಶೀಲ್ದಾರ್, ಶ್ರೀನಿವಾಸಪುರ ತಾಲ್ಲೂಕು,
ಶ್ರೀನಿವಾಸಪುರ.

ಪಿ.ಆರ್.145

IN THE COURT OF COMMISSIONER FOR WORKMEN'S COMPENSATION, BIDAR

No.LOB/WCA/Cr-F-25/2009,

Applicants:		**Respondents:**
1) Smt. Sunita W/o Late Gorkha, Age:35 years Occu: Household, R/o. Village Sangnal Tq: Aurad, Dist: Bidar and one other.	**V/s**	1) Jyothi W/o Suryakanth, age: Major, Occu:Business, R/o Patil Galli Near Rukmani Temple, Tq: Aurad-B, Dist: Bidar.

PROCLAIMATION

Sri/Smt. Sunita W/o.F/o.S/o. Late Gorkha, R/o. Village Sangnal Tq: Aurad-B, Dist: Bidar. have/ has filed application in this Court claiming compensation stating that Late: Gorkha was working as stone crushing Under the Respondent No I he met with an accident arising out of and during the course of employment as a result he died on 30.05.2008.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner For Workmen's
Compensation, Bidar.

PR-684

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಮತ್ತಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ದಾವಣಗೆರೆ–ತಾ: ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪ್ರಸ್ತಾವನೆ ಸಂಖ್ಯೆ: ಸನಿ31 /ಸ್ಥಗಿತ/ 08–09 ಸಿಆರ್–36, ದಿನಾಂಕ:06.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ನಂ.ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–23/2008–09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ ಕೆ.ಸಿ.ಎಸ್. ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಮತ್ತಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ದಾವಣಗೆರೆ–ತಾ: ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.713

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕುಕ್ಕವಾಡ, ದಾವಣಗೆರೆ–ತಾ: ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪ್ರಸ್ತಾವನೆ ಸಂಖ್ಯೆ: ಸನಿ31 / ಸ್ಥಗಿತ/08–09, ಸಿಆರ್–39, ದಿನಾಂಕ:06.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ನಂ.ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-22/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ ಕೆ.ಸಿ.ಎಸ್. ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕುಕ್ಕವಾಡ, ದಾವಣಗೆರೆ-ತಾ: ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.714

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಶ್ರೀ ರೇಣುಕಾ ಮಹಿಳಾ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ-ತಾ: ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪ್ರಸ್ತಾವನೆ ಸಂಖ್ಯೆ: ಸನಿ31 / ಸ್ಥಗಿತ/08-09, ಸಿಆರ್-32, ದಿನಾಂಕ:06.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ನಂ.ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್-21/2008-09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ ಕೆ.ಸಿ.ಎಸ್. ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ರೇಣುಕಾ ಮಹಿಳಾ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ-ತಾ: ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಶ್ರೀ ಎನ್.ಜಿ. ರುದ್ರಪ್ಪ, ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ದಾವಣಗೆರೆ, ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ

ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.715

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ಆಂಜನೇಯ ದೇವಸ್ಥಾನ ಎದುರು, ವಿದ್ಯಾನಗರ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸ್ಥಗಿತಗೊಂಡಿರುವ ಮತ್ತಿ ಕ್ಯಾಂಪ್ ಹಾಲು ಉತ್ಪಾದಕರ ಸಹಕಾರ ಸಂಘ ನಿ., ದಾವಣಗೆರೆ–ತಾ: ಇದನ್ನು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72 ಮತ್ತು 73ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರ ಪ್ರಸ್ತಾವನೆ ಸಂಖ್ಯೆ: ಸನಿ31 / ಸ್ಥಗಿತ/08–09, ಸಿಆರ್–37, ದಿನಾಂಕ:06.11.2008.

ಪ್ರಸ್ತಾವನೆ:

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಉಲ್ಲೇಖ (1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯ ಚಟುವಟಿಕೆಗಳು ಹಲವು ವರ್ಷಗಳಿಂದ ಸ್ಥಗಿತಗೊಂಡಿರುತ್ತದೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಸಕ್ತಿ ಇರುವುದಿಲ್ಲ. ಸಂಘದ ಆಡಳಿತ ಮಂಡಳಿ ನಿರ್ದೇಶಕರ/ ಕಾರ್ಯದರ್ಶಿಯವರ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ಲೆಕ್ಕಪುಸ್ತಕಗಳು, ಲೆಕ್ಕಪರಿಶೋಧನಾ ವರದಿಗಳು ಲಭ್ಯವಿರುವುದಿಲ್ಲ. ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ. ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ನಂ.ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–20/2008–09, ದಿನಾಂಕ:20ನೇ ಜುಲೈ, 2009

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮತ್ತು 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(2)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ:2001, ದಿನಾಂಕ:21.11.2001 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ ಕೆ.ಸಿ.ಎಸ್. ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಮತ್ತಿ ಕ್ಯಾಂಪ್ ಹಾಲು ಉತ್ಪಾದಕರ ಸಹಕಾರ ಸಂಘ ನಿ., ದಾವಣಗೆರೆ–ತಾ: ಇದನ್ನು ಸಮಾಪನೆಗೊಳಿಸಿ, 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1)ರನ್ವಯ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಂಘದ ಸಮಾಪನಾಧಿಕಾರಿಯನ್ನಾಗಿ ಅಧಿಕ ಪ್ರಭಾರದಲ್ಲಿ ನೇಮಿಸಿರುತ್ತೇನೆ. ಸಮಾಪನಾಧಿಕಾರಿಯು ಸಂಘದ ವಿಶಿಷ್ಟ ಪ್ರಭಾರವನ್ನು ಮತ್ತು ಸಂಘದ ಆಸ್ತಿಗಳನ್ನು ಸಂಘದ ಕಾರ್ಯದರ್ಶಿ ಅಥವಾ ಸಂಘದ ಪ್ರಭಾರ ಹೊಂದಿದ ಯಾವುದೇ ವ್ಯಕ್ತಿಯಿಂದ 1959ನೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73(1) ಮತ್ತು 74ರ ನಿಯಮ ಪ್ರಕಾರ ಪಡೆದುಕೊಳ್ಳತಕ್ಕದ್ದು.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:20.07.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಬಿ. ಕುಬೇರಪ್ಪ
ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.716

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–II ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ/ಎಸ್‌ಆರ್–96/09, ದಿನಾಂಕ:1ನೇ ಜುಲೈ, 2009

ಅರ್ಜಿದಾರರು:		ಪ್ರತಿವಾದಿಗಳು:
1) ಸುಮನಬಾಯಿ ಬನ್ಸಿಲಾಲ ಪೋಳ.		1) ವಸಂತ ಪಿ. ಕಾರವಾ,
2) ಬನ್ಸಿಲಾಲ ರಾಮಚಂದ್ರ ಪೋಳ	**ವಿರುದ್ಧ**	ಲಾರಿ ಮಾಲೀಕರು, ಲಾರಿ ನಂ.ಎಂಹೆಚ್–24/ಎ–2080
3) ಕಾಶಿಬಾಯಿ ಸೌದಾಗರ ಪೋಳ		R/o 41, ಜೋಡಭಾವಿಪೇಟ, ಸೊಲ್ಲಾಪುರ.
ಸೌ: ಎಲ್ಲರು ಇರುವುದು ಜಲನಗರ, ವಿಜಾಪುರ.		2) ಬಜಾಜ್ ಅಲಿಯಾಂಜ ಜನರಲ್ ಇನ್ಸೂರೆನ್ಸ್ ಕಂಪನಿ, ಮಡಿವಾಳ ಆರ್ಕೆಡ್, ಕ್ಲಬ್ ರೋಡ್, ಬೆಳಗಾವ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಸೌದಾಗರ ಬನ್ಸಿಲಾಲ ಪೋಳ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:17.02.2009ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲಿ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ವ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಉಪವಿಭಾಗ– II, ವಿಜಾಪುರ.

ಪಿ.ಆರ್.717

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಶಿವಮೊಗ್ಗ, ಅಂಚೆ ಪೆಟ್ಟಿಗೆ ಸಂಖ್ಯೆ: 127, ಕುವೆಂಪು ರಸ್ತೆ, ಶಿವಮೊಗ್ಗ–577201

ಕ್ರ.ಸಂ.ಜಿಪಂಶಿ/ಅಭಿ/ಇತರೆ1171/05–06, ದಿನಾಂಕ:22ನೇ ಜುಲೈ, 2009

ವಿಷಯ: ಸೊರಬ ತಾಲ್ಲೂಕು ಆನವಟ್ಟಿ ಗ್ರಾಮ ಪಂಚಾಯತಿಯನ್ನು ವಿಸರ್ಜಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಆದೇಶ ಸಂಖ್ಯೆ: ಜಿಪಂಶಿ/ಅಭಿ/ಇತರೆ1171/2005–2006 ದಿನಾಂಕ:30.05.2006.

2) ಈ ಕಛೇರಿಯ ಆದೇಶ ಸಂಖ್ಯೆ: ಜಿಪಂಶಿ/ಅಭಿ/ಇತರೆ1171/2005–2006 ದಿನಾಂಕ:02.06.2006.

3) ನೀಲಮ್ಮ ಗೌಳಿ/ ಚೆನ್ನಬಸಪ್ಪ ಗೌಳಿ, ಆನವಟ್ಟಿ ಇವರು ಘನ ಉಚ್ಚನ್ಯಾಯಾಲಯ ಕರ್ನಾಟಕ, ಬೆಂಗಳೂರು ಇಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ:11128/2006 (LB-ELE)

4) ಈ ಕಛೇರಿ ಆದೇಶ ಸಂಖ್ಯೆ: ಜಿಪಂಶಿ/ಅಭಿ/ಇತರೆ 1171/ 2005–2006 ದಿನಾಂಕ:18.11.2006.

5) ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ:11128/2006(LB-ELE) 06.02.2009ರ ಆದೇಶ.

ಆದೇಶ

ಶ್ರೀಮತಿ ಸರಸ್ವತಿ ಕೋಂ ಲಕ್ಕಪ್ಪ ನೆಹರು ನಗರ ಆನವಟ್ಟಿ ಸೊರಬ ತಾಲ್ಲೂಕು ಇವರು ಆನವಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಆನವಟ್ಟಿ ಗ್ರಾಮದ ಸರ್ವೆ ನಂ.51/6'ಪಿ' ಯಲ್ಲಿಯ ಖಾತೆ ಸಂಖ್ಯೆ: 828 ನಲ್ಲಿ ಹಿಂದೂಸ್ಥಾನ್ ಕಾರ್ಪರೇಷನ್ ರೀಟೈಲ್ ಪೆಟ್ರೋಲ್ ಬಂಕ್ ಒಂದನ್ನು ಸ್ಥಾಪಿಸಲು ನಿರಪೇಕ್ಷಣಾ ಪತ್ರ ನೀಡಲು ಆನವಟ್ಟಿ ಗ್ರಾಮ ಪಂಚಾಯತಿಯು ನಿರಾಕರಿಸಿರುವ ಪ್ರಯುಕ್ತ ಉಲ್ಲೇಖ (1)ರ ಈ ಕಛೇರಿ ಆದೇಶದಲ್ಲಿ ಸದರಿ ಗ್ರಾಮ ಪಂಚಾಯತಿಯನ್ನು ವಿಸರ್ಜಿಸಲಾಗಿತ್ತು. ಉಲ್ಲೇಖ (2)ರಲ್ಲಿ ಸದರಿ ಗ್ರಾಮ ಪಂಚಾಯತಿಗೆ ಒಬ್ಬ ಆಡಳಿತ ಅಧಿಕಾರಿಯನ್ನು ನೇಮಿಸಲಾಗಿತ್ತು.

ಈ ಆದೇಶದ ವಿರುದ್ಧವಾಗಿ ಉಲ್ಲೇಖ (3)ರಲ್ಲಿ ಶ್ರೀಮತಿ ನೀಲಮ್ಮ ಗೌಳಿ/ ಚೆನ್ನಬಸಪ್ಪ ಗೌಳಿ ಮತ್ತು ಇತರರು ಆನವಟ್ಟಿ ಇವರು ಕರ್ನಾಟಕದ ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಈ ಮೇಲ್ಮನವಿಯನ್ನು ಘನ ಉಚ್ಚ ನ್ಯಾಯಾಲಯವು WP ಸಂಖ್ಯೆ:11128/2006(LB-ELE) ದಿನಾಂಕ:17.06.2006ರಂದು ಮಧ್ಯಂತರ ತಡೆಯಾಜ್ಞೆ ನೀಡಿದ್ದರಿಂದ ಉಲ್ಲೇಖ (4)ರ ಈ ಕಛೇರಿ ಆದೇಶದಲ್ಲಿ ಗ್ರಾಮ ಪಂಚಾಯತಿ ವಿಸರ್ಜನೆ ಆದೇಶವನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಕವನ್ನು ಹಿಂಪಡೆದು ಗ್ರಾಮ ಪಂಚಾಯತಿಯನ್ನು ಯಥಾ ಸ್ಥಿತಿಯನ್ನು ಮುಂದುವರೆಸಲಾಗಿತ್ತು.

ಉಲ್ಲೇಖ (5)ರಲ್ಲಿ ಕರ್ನಾಟಕದ ಘನ ಉಚ್ಛ ನ್ಯಾಯಾಲಯವು ಸದರಿ ನೀಲಮ್ಮ ಗೌಲಿ/ ಚೆನ್ನಬಸಪ್ಪ ಗೌಲಿ ಮತ್ತು ಇತರರು ಆನವಟ್ಟಿ ಇವರ ಮೇಲ್ಮನವಿಯನ್ನು ದಿನಾಂಕ:06.02.2009ರಂದು ವಜಾಗೊಳಿಸಿ ಆದೇಶಿಸಿದೆ ಹಾಗೂ ದಿನಾಂಕ:15.07.2009ರಂದು ನಡೆದ ಜಿಲ್ಲಾ ಪಂಚಾಯತ್ ಮುಂದುವರೆದ ಸಾಮಾನ್ಯ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿದ್ದು ಘನ ನ್ಯಾಯಾಲಯವು ಮೇಲ್ಮನವಿದಾರರ ಅರ್ಜಿ ವಜಾಗೊಳಿಸಿರುವುದರಿಂದ ಗ್ರಾಮ ಪಂಚಾಯತಿ ಆನವಟ್ಟಿಯನ್ನು ನಿಯಮಾನುಸಾರ ವಿಸರ್ಜಿಸಲು ನಿರ್ಣಯಿಸಿದೆ ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಶ್ರೀಮತಿ ನೀಲಮ್ಮ ಗೌಲಿ/ ಚೆನ್ನಬಸಪ್ಪ ಗೌಲಿ, ಆನವಟ್ಟಿ ಗ್ರಾಮ ಪಂಚಾಯತಿ, ಸೊರಬ ತಾಲ್ಲೂಕು ಇವರು ಆನವಟ್ಟಿ ಗ್ರಾಮ ಪಂಚಾಯತಿಯನ್ನು ವಜಾ ಮಾಡಿರುವ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ರಿಟ್ ಅರ್ಜಿಸಂಖ್ಯೆ:11128/2006 (LB-ELE) ದಿನಾಂಕ:06.02.2009ರಲ್ಲಿ ಘನ ನ್ಯಾಯಾಲಯ ವಜಾ ಮಾಡಿರುವ ಪ್ರಯುಕ್ತ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 268(1) ಮತ್ತು (4)ರಂತೆ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಆನವಟ್ಟಿ ಗ್ರಾಮ ಪಂಚಾಯತಿಯನ್ನು 23.07.2009 ರಿಂದ ಅನ್ವಯಿಸುವಂತೆ ವಿಸರ್ಜನೆ ಮಾಡಲಾಗಿದೆ. ಮತ್ತು ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ 1993 ಕಲಂ 268 (7)(ಎ) ರನ್ವಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್‌ರಾಜ್ ಇಂಜಿನಿಯರ್ ಉಪವಿಭಾಗ, ಸೊರಬ ಇವರನ್ನು ಆನವಟ್ಟಿ ಗ್ರಾಮ ಪಂಚಾಯತಿಗೆ ದಿನಾಂಕ:23.07.2009 ರಿಂದ ಜಾರಿಗೆ ಬರುವಂತೆ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಶಿವಮೊಗ್ಗ.

ಪಿ.ಆರ್.719

ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡವಳಿಗಳು
ಸಂಖ್ಯೆ:ಸಿಬ್ಬಂದಿ/ಶಿಸ್ತು/ಅಗೈಹಾ/13/04–05, ದಿನಾಂಕ:27ನೇ ಜುಲೈ, 2009

ವಿಷಯ: ಶ್ರೀ ಸುರೇಶ್, ದ್ವಿ.ದ.ಭೂ, ತಹಶೀಲ್ದಾರ್ ಕಛೇರಿ, ಗುಂಡ್ಲುಪೇಟೆ ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ಶಿಸ್ತುಕ್ರಮ–ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:1) ಭೂ.ಜಂ.ನಿ. ಮೈಸೂರು ಕಛೇರಿಯ ಸಮಸಂಖ್ಯೆಯ ಕಾರಣ ಕೇಳಿ ನೋಟೀಸು ದಿನಾಂಕ:25.02.2004.
2) ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದ ಈ ಕಛೇರಿ ಸಮಸಂಖ್ಯೆ ನಡವಳಿ ದಿನಾಂಕ:12/15.04.2006.
3) ವಿಚಾರಣಾಧಿಕಾರಿಗಳ ವರದಿ 12.01.2007.
4) ಈ ಕಛೇರಿಯ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸು ದಿನಾಂಕ:09/13.03.2007.
5) ದಿನಾಂಕ:06.01.2009ರ ಪತ್ರಿಕಾ ಪ್ರಕಟಣೆ.

ಪ್ರಸ್ತಾವನೆ:

ಶ್ರೀ ಸುರೇಶ್, ದ್ವಿತೀಯ ದರ್ಜೆ ಭೂಮಾಪಕರು, ಇವರು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಾಮರಾಜನಗರ ಕಛೇರಿಯಿಂದ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮಂಡ್ಯ ಇವರ ಅಧೀನಕ್ಕೊಳಪಡುವ, ಮದ್ದೂರು ತಾಲ್ಲೂಕು ಭೂಮಾಪನ ಕಛೇರಿಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ದಿನಾಂಕ:10.03.2003 ರಿಂದ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ, ಸಕ್ಷಮ ಪ್ರಾಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯದೇ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ ಹಾಗೂ 36 ಸರ್ಕಾರಿ ಕಡತಗಳನ್ನು ಮತ್ತು ಸರ್ವೆ ಉಪಕರಣಗಳನ್ನು ತಮ್ಮ ಬಳಿಯೇ ಉಳಿಸಿಕೊಂಡಿರುತ್ತಾರೆ. ಈ ಬಗ್ಗೆ ಭೂದಾಖಲೆಗಳ ಜಂಟಿ ನಿರ್ದೇಶಕರು, ಮೈಸೂರು ಕಛೇರಿಯಿಂದ ಕಾರಣ ಕೇಳಿ ನೋಟೀಸನ್ನು ಆರೋಪಪಟ್ಟಿಯೊಂದಿಗೆ ದಿನಾಂಕ:25.02.2004ರಂದು ಹೊರಡಿಸಲಾಗಿರುತ್ತದೆ. ನೌಕರರ ವಿರುದ್ಧ ಮಾಡಲಾದ ಆರೋಪಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ (ಸದರಿ ನೌಕರರನ್ನು ಇನ್ನು ಮುಂದೆ ಆಪಾದಿತ ನೌಕರರೆಂದು ಕರೆಯಲಾಗಿದೆ)

ದೋಷಾರೋಪಣೆ–1: ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಾಮರಾಜನಗರ ಕಛೇರಿಯಿಂದ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮಂಡ್ಯ ಇವರ ಅಧೀನಕ್ಕೊಳಪಡುವ ಮದ್ದೂರು ತಾಲ್ಲೂಕು ಭೂಮಾಪನ ಕಛೇರಿಯಲ್ಲಿ ನಿಯೋಜನೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಪಿ.ಸುರೇಶ್, ದ್ವಿತೀಯ ದರ್ಜೆ ಭೂಮಾಪಕರಾದ ನೀವು ದಿನಾಂಕ:10.03.2003 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತೀರಿ. ಈ ನಿಮ್ಮ ಗೈರು ಹಾಜರಿಗೆ, ಸಕ್ಷಮ ಪ್ರಾಧಿಕಾರಿಯವರಿಂದ ರಜೆ ಮಂಜೂರಾತಿಯನ್ನಾಗಲೀ, ಪೂರ್ವಾನುಮತಿಯನ್ನಾಗಲೀ ಪಡೆದಿರುವುದಿಲ್ಲ. ಸರ್ಕಾರಿ ನೌಕರರಾದ ನೀವು ಈ ರೀತಿಯಾಗಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗುವುದು ನಿಯಮ ಬಾಹಿರವಾಗಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 106–ಎ ಅನ್ನು ಉಲ್ಲಂಘಿಸಿದಂತಾಗಿರುತ್ತದೆ. ಅಲ್ಲದೆ, ಈ ನಿಮ್ಮ ಅನಧಿಕೃತ ಗೈರುಹಾಜರಿಯು 4 ತಿಂಗಳು ಮೀರಿರುವುದರಿಂದ ಇದೇ ನಿಯಮಾವಳಿಯ ನಿಯಮ 108 ಅನ್ನು ಆಕರ್ಷಿಸಿ ಶಿಸ್ತುಕ್ರಮಕ್ಕೊಳಗಾಗಿರುತ್ತೀರಿ. ಕಾರಣ, ಈ ಆರೋಪ.

ದೋಷಾರೋಪಣಾ-2: ಶ್ರೀ ಪಿ. ಸುರೇಶ್, ದ್ವಿತೀಯ ದರ್ಜೆ ಭೂಮಾಪಕರಾದ ನೀವು ಗುಂಡ್ಲುಪೇಟೆ ತಾಲ್ಲೂಕು ಭೂಮಾಪನ ಕಛೇರಿಯಿಂದ ಪಡೆದ 8 ಕಡತಗಳನ್ನು ಮತ್ತು ಮದ್ದೂರು ತಾಲ್ಲೂಕು ಭೂಮಾಪನ ಕಛೇರಿಯಿಂದ ಪಡೆದ 28 ಕಡತಗಳನ್ನು ನಿಮ್ಮ ಬಳಿಯೇ ಬಾಕಿ ಉಳಿಸಿಕೊಂಡಿರುತ್ತೀರಿ. ಅಲ್ಲದೇ ಸರ್ವೆ ಉಪಕರಣಗಳಾದ ಒಂದು ಶಂಕು ಮತ್ತು 100 ಲಿಂಕ್ಸ್ ಇರುವ ಸರಪಳಿಯನ್ನು ನಿಮ್ಮ ಬಳಿ ಇಟ್ಟುಕೊಂಡು ಹೋಗಿರುತ್ತೀರಿ. ಇದರಿಂದ ಸರ್ಕಾರಿ ಕೆಲಸಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯುಂಟಾಗಿರುತ್ತದೆ. ನೀವು ಒಬ್ಬ ಜವಾಬ್ದಾರಿಯುತ ಸರ್ಕಾರಿ ನೌಕರರಾಗಿದ್ದು, ಈ ರೀತಿಯಾಗಿ ಬೇಜವಾಬ್ದಾರಿ ಮತ್ತು ಕರ್ತವ್ಯದಲ್ಲಿ ನಿರ್ಲಕ್ಷತೆಯನ್ನು ತೋರುತ್ತಿರುವುದು ನಿಮ್ಮ ಅನುಚಿತ ವರ್ತನೆಯಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) (i) ಮತ್ತು (ii) ನ್ನು ಉಲ್ಲಂಘಿಸಿದಂತಾಗಿ, ಶಿಸ್ತುಕ್ರಮಕ್ಕೊಳಗಾಗಿರುತ್ತೀರಿ ಕಾರಣ, ಈ ಆರೋಪ.

ಸದರಿ ನೋಟೀಸನ್ನು ನೌಕರರಿಗೆ ಖುದ್ದಾಗಿ ಜಾರಿ ಮಾಡಲು ಸಾಧ್ಯವಾಗದೇ ನೌಕರರು ವಾಸವಿದ್ದ ಮನೆಯ ಗೋಡೆಗೆ ಅಂಟಿಸುವ ಮೂಲಕ ಜಾರಿ ಮಾಡಲಾಗಿರುತ್ತದೆ ಹಾಗೂ ನೌಕರರಿಂದ ಈ ನೋಟೀಸಿನ ಬಗ್ಗೆ ಯಾವುದೇ ಹೇಳಿಕೆಯು ಬಾರದ ಕಾರಣ, ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು, ದಿನಾಂಕ:12/15.04.2006ರ ಈ ಕಛೇರಿ ನಡವಳಿಯಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದಂತೆ, ವಿಚಾರಣಾಧಿಕಾರಿಗಳು ದಿನಾಂಕ:18.05.2006, 17.06.2006, 17.07.2006, 21.08.2006, 17.09.2006 ಮತ್ತು 30.10.2006 ರಂದು ವಿಚಾರಣೆ ಜರುಗಿಸಿರುತ್ತಾರೆ. ಸದರಿ ದಿನಾಂಕಗಳಂದು ಹಾಜರಾಗುವಂತೆ ಸತತವಾಗಿ ನೋಂದಣಿ ಅಂಚೆ ಮೂಲಕ, ತಹಶೀಲ್ದಾರ್, ಗುಂಡ್ಲುಪೇಟೆ ರವರ ಮುಖಾಂತರ ತಿಳಿಸಲಾಗಿದ್ದರೂ ಆಪಾದಿತರು ಯಾವುದೇ ನೋಟೀಸುಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ವಿಚಾರಣೆಗೆ ಹಾಜರಾಗಿರುವುದಿಲ್ಲ. ಈ ಬಗ್ಗೆ ಅವರ ತಾಯಿ ಮತ್ತು ತಂಗಿಯವರು, ತಮ್ಮ ಮಗನು 3 ವರ್ಷಗಳಿಂದ ಮನೆಗೆ ಬಂದಿಲ್ಲವೆಂದೂ, ಅವರ ಬಗ್ಗೆ ಯಾವ ವಿಚಾರವೂ ತಿಳಿಯದೆಂದು ತಿಳಿಸಿ ನೋಟೀಸುಗಳನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ. ನೌಕರರು ವಿಚಾರಣೆಗೆ ಹಾಜರಾಗದ ಕಾರಣ ವಿಚಾರಣೆಯನ್ನು ಏಕಪಕ್ಷೀಯವಾಗಿ ಜರುಗಿಸಿ, ಅನುಬಂಧ-4 ರಲ್ಲಿ ನಮೂದಿಸಿರುವ ಸಾಕ್ಷಿದಾರರನ್ನು ವಿಚಾರಿಸಲಾಗಿ, ಆರೋಪಿತ ನೌಕರರು ಕಡತಗಳನ್ನು ಕಛೇರಿಗೆ ಹಿಂದಿರುಗಿಸದೇ ಇರುವ ಬಗ್ಗೆ ಮತ್ತು ಅನಧಿಕೃತ ಗೈರು ಹಾಜರಾದ ಬಗ್ಗೆ ಸಾಕ್ಷ್ಯ ನುಡಿದು ಆರೋಪವನ್ನು ಸ್ಥಿರೀಕರಿಸಿರುವ ಮೇರೆಗೆ, ಸಾಕ್ಷ್ಯ ಮಂಡನಾಧಿಕಾರಿಗಳ ವಾದ ಮತ್ತು ದಾಖಲೆಗಳ ಆಧಾರದ ಮೇಲೆ ಆಪಾದಿತರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುತ್ತದೆಯೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ. ವಿಚಾರಣಾಧಿಕಾರಿಗಳ ಅಭಿಪ್ರಾಯವನ್ನು ಒಪ್ಪಿ ಈ ಕಛೇರಿಯಿಂದ ದಿನಾಂಕ:09/13.03.2007ರಂದು 2ನೇ ಕಾರಣ ಕೇಳಿ ನೋಟೀಸು ಜಾರಿ ಮಾಡಲಾಗಿರುತ್ತದೆ. ಆದರೆ ಸದರಿ ನೋಟೀಸು ನೌಕರರಿಗೆ ಜಾರಿಯಾಗದ ಕಾರಣ, ನಿಯಮಾನುಸಾರ ಸದರಿ ನೋಟೀಸಿನ ಬಗ್ಗೆ ರಾಜ್ಯದ ಪ್ರಮುಖ ದಿನಪತ್ರಿಕೆಯಾದ ಕನ್ನಡಪ್ರಭ ಪತ್ರಿಕೆಯಲ್ಲಿ ದಿನಾಂಕ:06.01.2009ರಂದು ಪ್ರಕಟಿಸಿದ್ದು ಸದರಿ ಪ್ರಕಟಣೆಗೂ ನೌಕರರು ಪ್ರತಿಕ್ರಿಯಿಸಿರುವುದಿಲ್ಲ ಹಾಗೂ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಆಪಾದಿತರು ದಿನಾಂಕ:10.03.2003 ರಿಂದ ಅನಧಿಕೃತ ಗೈರು ಹಾಜರಾಗಿದ್ದು ಈವರೆವಿಗೂ ಅನಧಿಕೃತ ಗೈರು ಹಾಜರಿಯಲ್ಲಿಯೇ ಮುಂದುವರೆಯುತ್ತಿದ್ದು, ಯಾವುದೇ ನೋಟೀಸುಗಳನ್ನು ಸ್ವೀಕರಿಸದೇ, ವಿಚಾರಣೆಗೂ ಗೈರು ಹಾಜರಾಗಿ, 6 ವರ್ಷಗಳಿಗೂ ಮೇಲ್ಪಟ್ಟ ದೀರ್ಘಾವಧಿಗೆ ಅನಧಿಕೃತ ಗೈರು ಹಾಜರಾಗಿರುವುದನ್ನು ಗಮನಿಸಿದಾಗ, ಸದರಿಯವರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಯಾವುದೇ ಶ್ರದ್ಧೆ ಆಸಕ್ತಿ ಇಲ್ಲದಿರುವುದು ಕಂಡುಬರುತ್ತಿದ್ದು, ಸರ್ಕಾರಿ ಕೆಲಸಕ್ಕೆ ದೀರ್ಘಕಾಲದವರೆಗೆ ಅನಧಿಕೃತ ಗೈರುಹಾಜರಿಯಲ್ಲಿ ಮುಂದುವರೆದು ಸರ್ಕಾರಿ ಸೇವಾ ನಿಯಮಾವಳಿ ನಿಯಮ 108 ಅನ್ನು ಆಕರ್ಷಿಸಿರುವ ಹಿನ್ನೆಲೆಯಲ್ಲಿ ಆಪಾದಿತ ನೌಕರರು ಗಂಭೀರವಾದ ಕರ್ತವ್ಯಲೋಪ ಮತ್ತು ದುರ್ವರ್ತನೆ ಎಸಗಿರುತ್ತಾರೆ.

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ನಿಯಮ 108ರ ಪ್ರಕಾರ ಸರ್ಕಾರವು ಪ್ರಕರಣದ ವಿಶೇಷ ಸಂದರ್ಭಗಳಿಂದಾಗಿ ಅನ್ಯಥಾ ನಿರ್ಣಯಿಸಿದ ಹೊರತು, 4 ತಿಂಗಳು ಹಾಗೂ ಹೆಚ್ಚಿನ ಅವಧಿಗೆ ರಜೆ ಪಡೆದುಕೊಳ್ಳದೇ ಕರ್ತವ್ಯಕ್ಕೆ ವಿಮುಖರಾಗಿ ಗೈರು ಹಾಜರಾಗುವ ಸರ್ಕಾರಿ ನೌಕರರನ್ನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಯಲ್ಲಿ ನಮೂದಿಸಲಾದ ಕಾರ್ಯ ವಿಧಾನವನ್ನನುಸರಿಸಿ, ಸೇವೆಯಿಂದ ವಜಾ ಮಾಡಬಹುದಾಗಿರುತ್ತದೆ ಅಥವಾ ಸೇವೆಯಿಂದ ತೆಗೆದು ಹಾಕಬಹುದಾಗಿರುತ್ತದೆ. ಆದಕಾರಣ, ಆಪಾದಿತರು ದಿನಾಂಕ:10.03.2003 ರಿಂದ ಇಲ್ಲಿಯವರೆಗೆ ಅನಧಿಕೃತ ಗೈರು ಹಾಜರಾಗಿರುವುದು ತೀವ್ರತರವಾದ ದುರ್ವರ್ತನೆ ಆಗಿರುವುದರಿಂದ ಹಾಗೂ ಅವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಆಪಾದಿತರಿಗೆ ಕಠಿಣ ದಂಡನೆ ವಿಧಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ

ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8 (viii) ರೊಂದಿಗೆ ಓದಿಕೊಂಡ ನಿಯಮ 9(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸುರೇಶ್, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್, ಗುಂಡ್ಲುಪೇಟೆ (ಈ ಹಿಂದೆ ನೌಕರರು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಾಮರಾಜನಗರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇಲಾಖೆಯು ಕಂದಾಯ ಇಲಾಖೆಯೊಡನೆ ಕಾರ್ಯವಿಲೀನಗೊಂಡ ನಂತರ ತಹಶೀಲ್ದಾರ್, ಗುಂಡ್ಲುಪೇಟೆ ಕಛೇರಿಗೆ ವರ್ಗಾವಣೆ ಮಾಡಿದ್ದು, ನೌಕರರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ) ರವರನ್ನು ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ, ಬೆಂಗಳೂರು.

ಪಿ.ಆರ್.720

ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಬೀದರ್ ಜಿಲ್ಲೆ, ಬೀದರ್

ವಿಷಯ: ಸಮಾಪನೆಗೊಂಡ ಬಸವಕಲ್ಯಾಣ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬಸವಕಲ್ಯಾಣ ಇದರ ನೊಂದಣಿ ಸಂಖ್ಯೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 75ರನ್ವಯ ರದ್ದುಪಡಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಆದೇಶ ಸಂಖ್ಯೆ:ಉನಿಬಿ/ವಿ2/ಸಮಾಪನೆ/2008–09, ದಿನಾಂಕ:16.10.2008.

2) ಸಮಾಪನೆ ಅಧಿಕಾರಿಗಳ ಪ್ರಸ್ತಾವನೆ ದಿನಾಂಕ:11.11.2008.

3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ್ ಉಪವಿಭಾಗ, ಬೀದರ್ ಇವರ ಪತ್ರಸಂಖ್ಯೆ: ಸನಿಬಿ1/ವಿ7/ಸಮಾಪನೆ/2008–2009, ದಿನಾಂಕ:20.11.2008.

ಪ್ರಸ್ತಾವನೆ:

ಬಸವಕಲ್ಯಾಣ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬಸವಕಲ್ಯಾಣ ಇದರ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ಉಲ್ಲೇಖ (1)ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹುಮನಾಬಾದ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅದರಂತೆ ಸಮಾಪನಾಧಿಕಾರಿಗಳು ಪುನಃಶ್ಚೇತನಗೊಳಿಸಲು ಯಾವ ಸದಸ್ಯರಲ್ಲಿ ಆಸಕ್ತಿಯಿರುವುದಿಲ್ಲವೆಂದು ತೀರ್ಮಾನಿಸಿರುತ್ತಾರೆ. ದಾಖಲಾತಿಗಳು ಲಭ್ಯವಿಲ್ಲದ ಪ್ರಯುಕ್ತ ಹೊಂದಾಣಿಕೆ ಮೂಲಕ ಆಸ್ತಿ ಜವಾಬ್ದಾರಿ ವಿಲೇಗೊಳಿಸಿ ನೊಂದಣಿ ಸಂಖ್ಯೆ: ಸನಿಬಿ1/ವಿ4/ಯುಬಿಸಿ/ಯುಜಿಒ//29670/2000–2001 ದಿನಾಂಕ:18.08.2001 ಇದನ್ನು ರದ್ದುಪಡಿಸಲು ಉಲ್ಲೇಖ (2)ರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ್ ರವರು ಸಹ ಸದರಿ ಸಂಘದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಏನು ಇರುವುದಿಲ್ಲವೆಂದು ತಿಳಿಸುತ್ತ ಸಂಘದ ನೊಂದಣಿ ಸಂಖ್ಯೆ ರದ್ದುಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಆದುದರಿಂದ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಉನಿಬಿ/ವಿ1/ಸಮಾಪನೆ/ಸಿಆರ್–/2008–2009, ದಿನಾಂಕ:31ನೇ ಡಿಸೆಂಬರ್, 2008

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರಿ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/200/ದಿನಾಂಕ:21.11.2001 ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತ ಚವ್ಹಾಣ ಗೋಪಾಲ ಸಹಕಾರ ಸಂಘಗಳ ಉಪನಿಬಂಧಕರು, ಬೀದರ್ ಜಿಲ್ಲೆ ಬೀದರ್ ಆದ ನಾನು ಸಮಾಪನೆಗೊಂಡ ಬಸವಕಲ್ಯಾಣ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬಸವಕಲ್ಯಾಣ ಇದರ ನೊಂದಣಿ ಸಂಖ್ಯೆ:ಸನಿಬಿ1/ವಿ4/ಯುಬಿಸಿ/ಯುಜಿಒ/29670/2000–2001 ದಿನಾಂಕ:18.08.2001 ನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು. ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 1960ರ ನಿಯಮ 33 (ಎನ್) ರನ್ವಯ ಈ ಸಂಘದ ಎಲ್ಲಾ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೀದರ್ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಈ ಕಛೇರಿ ಮುದ್ರೆಯೊಂದಿಗೆ ದಿನಾಂಕ:31.12.2008ರಂದು ಈ ಆದೇಶವನ್ನು ಹೊರಡಿಸಲಾಗಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,
ಬೀದರ್ ಜಿಲ್ಲೆ, ಬೀದರ್.

ಪಿ.ಆರ್.115

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು

ಅಮಲ್ಜಾರಿ ಸಂಖ್ಯೆ:74/2007–2008

ಬಿಡ್‌ದಾರರು: ಶ್ರೀ ಪಚ್ಚಣ್ಣ ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು.

ಡಿಕ್ರಿ ಹೋಲ್ಡರ್		ತೀರ್ಪುಋಣಿ
ವ್ಯವಸ್ಥಾಪಕರು, ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು.	**ವಿರುದ್ಧ**	1) ಧರ್ಮೇಂದ್ರ ಸಿಂಗ್ ಬಿನ್ ಪ್ರಭುನಾಥ್ ಸಿಂಗ್ ವಾಟರ್ ಟ್ಯಾಂಕ್ ಹತ್ತಿರ, ದೇವರಾಯಪಟ್ಟಣ, ತುಮಕೂರು. 2) ರೂಭೀದೇವಿ ಸಿಂಗ್ ಕೋಂ ಧರ್ಮೇಂದ್ರ ಸಿಂಗ್ ವಾಟರ್ ಟ್ಯಾಂಕ್ ಹತ್ತಿರ, ದೇವರಾಯಪಟ್ಟಣ, ತುಮಕೂರು.

ಪ್ರಸ್ತಾವನೆ:

ವ್ಯವಸ್ಥಾಪಕರು ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು ಇವರು ತೀರ್ಪುಋಣಿಯಿಂದ ವಸೂಲಾಗಬೇಕಾದ ಆಧಾರದ ಸಾಲ ರೂ.69,966–00 ಗಳಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿಯಮ 441) ದಾವಾ ಪಂಚಾಯ್ತಿ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾವೆ ಹೂಡಿ, ಡಿಕ್ರಿ ಪಡೆದಿದ್ದು, ಡಿಕ್ರಿ ಪಡೆಯುವ ಮುನ್ನ ಎದುರುದಾರರಿಗೆ ಅಂದರೆ ಶ್ರೀ ಧರ್ಮೇಂದ್ರ ಸಿಂಗ್ ರವರಿಗೆ ನೋಟಿಸು ಜಾರಿಯಾಗದ ಕಾರಣ, ಸಮನ್ಸ್‌ನ್ನು ದಿನಾಂಕ:03.11.2007 ರಂದು ತುಮಕೂರು ನಗರದ ದಿನಪತ್ರಿಕೆಯಾದ ಪ್ರಜಾಪ್ರಗತಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿರುವುದನ್ನು ಗಮನಿಸಲಾಗಿದೆ. ನಂತರ ಅಮಲ್ಜಾರಿ ಅರ್ಜಿ ಹಾಕಿದ್ದು, ಸದರಿ ಅಮಲ್ಜಾರಿ ಅರ್ಜಿ ಸಂಖ್ಯೆ:74/2007–2008, ಮೊಬಲಗು ರೂ.76,946–00 ಸದರಿ ಅಮಲ್ಜಾರಿಯನ್ನು ಬ್ಯಾಂಕಿನ ಮಾರಾಟಾಧಿಕಾರಿಗಳಿಗೆ ವಹಿಸಿದ್ದು, ದಿನಾಂಕ:27.11.2008ಕ್ಕೆ ರೂ.99,099–00 ಗಳು ಡಿಕ್ರಿ ಹೋಲ್ಡರ್ ಸಹಕಾರ ಬ್ಯಾಂಕಿಗೆ ತೀರ್ಪುಋಣಿದಾರರಿಂದ ಬರಬೇಕಾಗಿರುತ್ತದೆ. ಈ ಸಂಬಂಧ ತೀರ್ಪುಋಣಿಯಾದ ಶ್ರೀ ಧರ್ಮೇಂದ್ರ ಸಿಂಗ್ ರವರಿಗೆ ಫಾರಂ, ನಂ.8 ಮತ್ತು 9 ಜಾರಿಯಾಗದ ಕಾರಣ ದಿನಾಂಕ:20.11.2008ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿರುವುದನ್ನು ದಾಖಲಾತಿಗಳಿಂದ ಗಮನಿಸಲಾಗಿದೆ. ಮತ್ತು ಸ್ಥಿರಾಸ್ತಿ ಹರಾಜು ಪ್ರಕ್ರಿಯೆ ನಡೆಸುವ ಸಂಬಂಧ ಕೂಡ ಪ್ರಜಾವಾಣಿ ದಿನಪತ್ರಿಕೆಯಲ್ಲಿ ದಿನಾಂಕ:27.11.2008 ರಂದು ಪ್ರಕಟಣೆ ಹೊರಡಿಸಿರುವುದನ್ನು ಸಹ ಗಮನಿಸಲಾಗಿದೆ. ಆದರೂ ಸಹ ಶ್ರೀ ಧರ್ಮೇಂದ್ರ ಸಿಂಗ್ ತೀರ್ಪುಋಣಿ ರವರು ತಮ್ಮ ಸುಸ್ತಿ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲವೆಂಬ ಅಂಶವನ್ನು ಈ ನ್ಯಾಯಾಲಯವು ಪರಿಶೀಲಿಸಿದೆ.

ಆದ ಕಾರಣ ಮಾರಾಟಾಧಿಕಾರಿಗಳು ತೀರ್ಪುಋಣಿಯ ಸ್ಥಿರ ಸ್ವತ್ತುಗಳನ್ನು ದಿನಾಂಕ:02.12.2008 ರಂದು ನಡೆದ ಬಹಿರಂಗ ಹರಾಜಿನಲ್ಲಿ, ಅತ್ಯಧಿಕ ಬಿಡ್‌ದಾರರಾದ ಶ್ರೀ ಪಚ್ಚಣ್ಣ ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು ಇವರಿಗೆ ನಿವೇಶನವನ್ನು (ಸೈಟ್) ರೂ.6,30,000–00 ಗಳಿಗೆ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿ, ಹರಾಜು ಸ್ಥಿರೀಕರಣಕ್ಕಾಗಿ ಪ್ರಸ್ತಾವೆಯನ್ನು ದಿನಾಂಕ:01.01.2009 ಬ್ಯಾಂಕಿನ ಮಾರಾಟಾಧಿಕಾರಿಗಳು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸ್ವತ್ತು ಹರಾಜಾದ 30 ದಿವಸಗಳೊಳಗೆ, ಆಸ್ತಿಯ ಒಡೆತನವನ್ನು ಹೊಂದಿರುವ ಅಥವಾ ಆಸ್ತಿಯ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಂದ ಸಹಕಾರಿ ನಿಯಮ 1960ರ ನಿಯಮ 38(4)(ಎ) ರೀತಿ ನಿಯಮಾನುಸಾರ ಠೇವಣಿ ಮಾಡಿ, ಮಾರಾಟವನ್ನು ರದ್ದುಗೊಳಿಸುವಂತೆ ಕೋರಿ ಯಾವ ವಿಧವಾದ ಅರ್ಜಿಯು ಬಂದಿಲ್ಲದ ಪ್ರಯುಕ್ತ, ಸದರಿ ಸ್ಥಿರಾಸ್ತಿಯನ್ನು ಅತ್ಯಧಿಕ ಹಾಗೂ ಅಂತಿಮ ಬಿಡ್‌ದಾರರ ಹೆಸರಿಗೆ ಸ್ಥಿರೀಕರಣಗೊಳಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ನಂ.ಸನಿ–32/ಎ.ಬಿ.ಎನ್/ಸ್ಥಿರಾಸ್ತಿವರ್ಗಾವಣೆ/47/2008–2009, ದಿನಾಂಕ:27ನೇ ಫೆಬ್ರವರಿ, 2009

ಶ್ರೀ ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ ತುಮಕೂರು, ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಬಂಧನೆ 1960ರ ನಿಯಮ 38(6) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿ.ಎಂ.ಡಬ್ಲ್ಯೂ/69/ಸಿ.ಎಲ್.ಎಂ./2001 ದಿನಾಂಕ:21.11.2001ರ ಪ್ರಕಾರ ನನಗೆ ದತ್ತವಾಗಿರುವ ಅಧಿಕಾರದ ಮೇರೆಗೆ, ಶ್ರೀ ಪಾರ್ಶ್ವನಾಥ, ಸಹಕಾರ ಬ್ಯಾಂಕ್ ನಿ., ತುಮಕೂರು ಇದಕ್ಕೆ ತೀರ್ಪುಋಣಿಗಳಾದ ಶ್ರೀ ಧರ್ಮೇಂದ್ರ ಸಿಂಗ್ ಬಿನ್ ಪ್ರಭುನಾಥ್ ಸಿಂಗ್ ತುಮಕೂರು ಇವರ ಷೆಡ್ಯೂಲ್‌ನಲ್ಲಿ ವಿವರಿಸಲಾದ ಸ್ಥಿರಾಸ್ತಿಯನ್ನು ದಿನಾಂಕ:02.12.2008ರಂದು ನಡೆದ ಬಹಿರಂಗ ಹರಾಜಿನಲ್ಲಿ ಅತ್ಯಧಿಕ ಬಿಡ್‌ದಾರರಾದ ಶ್ರೀ ಪಚ್ಚಣ್ಣ ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು ರವರ ಹೆಸರಿಗೆ ಸ್ಥಿರೀಕರಿಸಿ ಆದೇಶಿಸಿರುತ್ತೇನೆ.

ಬಹಿರಂಗ ಹರಾಜಿನಲ್ಲಿ ಶ್ರೀ ಪಚ್ಚಣ್ಣ ಬಿನ್ ಅನಂತರಾಜಯ್ಯ, ಡಿಕ್ರಿಹೋಲ್ಡರ್ ಬ್ಯಾಂಕಿಗೆ ಪಾವತಿಸಿದ ರೂ.6,30,000–00 ಗಳಲ್ಲಿ ಡಿಕ್ರಿ ಹೋಲ್ಡರ್ ಬ್ಯಾಂಕಿಗೆ ಮಾರಾಟದ ಘೋಷಣೆಯಲ್ಲಿ ಯಾವ ಮೊಬಲಗಿನ ವಸೂಲಿಯ ಸಲುವಾಗಿ ಮಾರಾಟದ ಆದೇಶ ಮಾಡಲ್ಪಟ್ಟಿತೋ, ಆ ಮೊಬಲಗನ್ನು ಮತ್ತು ಅವರ ಮೇಲಿನ ಬಡ್ಡಿ ಮತ್ತು ಜಪ್ತಿ ವೆಚ್ಚಗಳನ್ನು ತೀರ್ಪು ಋಣಿ, ಶ್ರೀ ಧರ್ಮೇಂದ್ರ ಸಿಂಗ್ ಬಿನ್ ಪ್ರಭುನಾಥ್ ಸಿಂಗ್, ಇವರ ಸಾಲದ ಖಾತೆಗೆ ಜಮಾ ತೆಗೆದುಕೊಂಡು ಲೆಕ್ಕಮಾಡಿಕೊಳ್ಳಲು ಬ್ಯಾಂಕಿನ ವ್ಯವಸ್ಥಾಪಕರಿಗೆ ಆದೇಶಿಸಿದೆ. ಮತ್ತು ಬಾಕಿ ಋಣಿಯಿಂದ ಬಾಕಿ ಇರುವ ಸಾಲದ ಮೊತ್ತವನ್ನು ಜಮಾ ಮಾಡಿಕೊಂಡು, ಉಳಿದ ಮೊಬಲಗನ್ನು ತೀರ್ಪುಋಣಿಯ ಹೆಸರಿನಲ್ಲಿ ಅಮಾನತ್ ಖಾತೆಯಲ್ಲಿಟ್ಟುಕೊಳ್ಳಲು ಹಾಗೂ ಇವರಿಗೆ ಸಂದಾಯ ಮಾಡಲು ಏರ್ಪಾಡು ಮಾಡತಕ್ಕದ್ದು.

ಸ್ಥಿರ ಸ್ವತ್ತುಗಳ ವಿವರ

ತುಮಕೂರು ನಗರ, 35ನೇ ವಾರ್ಡ್‌ಗೆ ಸೇರಿದ, ದೇವರಾಯಪಟ್ಟಣ ಬಡಾವಣೆ, ಮು.ಖಾ.ನಂ. 634/628, ಸೈಟ್ ನಂ.43 ಆಗಿದ್ದು, ಇದರ ಅಳತೆ: ಪೂರ್ವ–ಪಶ್ಚಿಮ 30 ಅಡಿ, ಉತ್ತರ–ದಕ್ಷಿಣ 40 ಅಡಿ ಆಗಿದ್ದು.

ಇದರ ಚೆಕ್ಕುಬಂದಿ:

ಪೂರ್ವಕ್ಕೆ–ಸೈಟ್ ನಂ.44

ಪಶ್ಚಿಮಕ್ಕೆ– ಸೈಟ್ ನಂ.42

ಉತ್ತರಕ್ಕೆ– ಸೈಟ್ ನಂ.32

ದಕ್ಷಿಣಕ್ಕೆ– ರಸ್ತೆ. ಈ ಮಧ್ಯೆ ಇರುವ ಸ್ವತ್ತು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:27.02.2009 ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು ಕರ್ನಾಟಕ ಸಹಕಾರ ಸಂಘಗಳ ನಿಯಮ, 1960ರ ನಿಯಮ, 38(7) ರನ್ವಯ ನೀಡಿದ ಮಾರಾಟ ದೃಢೀಕರಣ ಪತ್ರ ಅಮಲ್ಜಾರಿ ಸಂಖ್ಯೆ:74/2007–2008

ಉಪಸ್ಥಿತರು: ಶ್ರೀ ಗೋಪಾಲರೆಡ್ಡಿ, ಕೆ.ಸಿ.ಎಸ್.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು.

ಬಿಡ್‌ದಾರರು: ಶ್ರೀ ಪಚ್ಚಣ್ಣ ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು.

ಡಿಕ್ರಿ ಹೋಲ್ಡರ್		**ತೀರ್ಪುಋಣಿ**
ವ್ಯವಸ್ಥಾಪಕರು, ಶ್ರೀ ಪಾಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು.	**ವಿರುದ್ಧ**	1) ಧರ್ಮೇಂದ್ರ ಸಿಂಗ್ ಬಿನ್ ಪ್ರಭುನಾಥ್ ಸಿಂಗ್ ವಾಟರ್ ಟ್ಯಾಂಕ್ ಹತ್ತಿರ, ದೇವರಾಯಪಟ್ಟಣ, ತುಮಕೂರು. 2) ರೂಭೀದೇವಿ ಸಿಂಗ್ ಕೋಂ ಧರ್ಮೇಂದ್ರ ಸಿಂಗ್ ವಾಟರ್ ಟ್ಯಾಂಕ್ ಹತ್ತಿರ, ದೇವರಾಯಪಟ್ಟಣ, ತುಮಕೂರು.

ಶ್ರೀ ಪಾಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು ಇವರು ದಿನಾಂಕ:19.11.2007 ರಂದು ಪಡೆದ ಡಿಕ್ರಿ ದಾವೆ ನಂ.ಜೆ.ಆರ್.ಬಿ./ಯು.ಬಿ.ಎಫ್/2526/2007–2008ರ ಪ್ರಕಾರ ದಿನಾಂಕ:18.01.2008ರಂದು, ಸಿ.ಇ.ಪಿ. ನಂ.74/2007–2008ರ ಪ್ರಕಾರ ಅಮಲ್ಜಾರಿ ಪಡೆದು ಡಿಕ್ರಿಹೋಲ್ಡರ್ ಬ್ಯಾಂಕಿನ ಮಾರಾಟಾಧಿಕಾರಿಯು ಮೇಲ್ಕಂಡ ತೀರ್ಪುಋಣಿದಾರರಾದ ಶ್ರೀ ಧರ್ಮೇಂದ್ರ ಸಿಂಗ್ ಇವರು ಡಿಕ್ರಿ ಹೋಲ್ಡರ್ ಬ್ಯಾಂಕಿಗೆ ಆಧಾರ ಮಾಡಿದ್ದ, ಈ ಕೆಳಕಂಡ ಸ್ಥಿರಾಸ್ತಿಯನ್ನು ದಿನಾಂಕ:28.11.2008 ರಂದು ಮಾರಾಟ ಮಾಡಲು ದಿನಾಂಕ ನಿಗದಿಪಡಿಸಿದ್ದು, ಸದರಿ ದಿನದಂದು ಸರ್ಕಾರವು ನೆಗೋಷಿಯಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ರಜಾ ಘೋಷಿಸಿದ್ದ ಕಾರಣ ಹರಾಜನ್ನು ದಿನಾಂಕ:02.12.2008ಕ್ಕೆ ಮುಂದೂಡಿದ್ದು, ದಿನಾಂಕ:02.12.2008 ರಂದು ಬ್ಯಾಂಕಿಗೆ ಬರಬೇಕಾದ ಸುಸ್ತಿ ಸಾಲದ ವಸೂಲಿ ಬಗೆಗೆ ಬಹಿರಂಗ ಹರಾಜು ನಡೆಸಿರುತ್ತಾರೆ.

ಈ ಬಹಿರಂಗ ಹರಾಜಿನಲ್ಲಿ ತೀರ್ಪುಋಣಿಯ ಸ್ಥಿರಸ್ವತ್ತನ್ನು ಶ್ರೀ ಬಿ.ಎ. ಪಚ್ಚಣ್ಣ, ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು ಇವರು ರೂ.6,30,000–00 (ಆರು ಲಕ್ಷದ ಮೂವತ್ತು ಸಾವಿರ) ಗಳಿಗೆ ಅತೀ ಹೆಚ್ಚಿನ ಬಿಡ್ ಮೊತ್ತಕ್ಕೆ ಕೊಂಡಿರುತ್ತಾರೆ ಎಂದು ಈ ಮೂಲಕ ದೃಢೀಕರಿಸಿದೆ.

ಆದ್ದರಿಂದ ಈ ಸ್ಥಿರಾಸ್ತಿಯ ಹರಾಜನ್ನು ಬಿಡ್‌ದಾರರಾದ ಶ್ರೀ ಬಿ.ಎ. ಪಚ್ಚಣ್ಣ ಬಿನ್ ಬಿ.ಪಿ. ಅನಂತರಾಜಯ್ಯ, ತುಮಕೂರು ಇವರು ಹೆಸರಿಗೆ ಸ್ಥಿರೀಕರಣಗೊಳಿಸಿದೆ.

ಸ್ಥಿರಾಸ್ತಿಯ ವಿವರ

ಕ್ರ. ಸಂ.	ತಾಲ್ಲೂಕು	ಸ್ಥಿರ ಸ್ವತ್ತಿನ ವಿವರ/ ತರಹೆ	ಖಾತೆ ನಂಬರ್	ಸೈಟ್ ನಂಬರ್	ವಿಸ್ತೀರ್ಣ	ಚಕ್ಕುಬಂದಿ
1.	ತುಮಕೂರು ಟೌನ್ ವಾರ್ಡ್ ನಂ.35 ದೇವರಾಯ ಪಟ್ಟಣ ಬಡಾವಣೆ.	ಖಾಲಿ ನಿವೇಶನ	ಮು.ಖಾ. ನಂ.634/628	43	43x30	ಪೂರ್ವಕ್ಕೆ–ಸೈಟ್ ನಂ.44 ಪಶ್ಚಿಮಕ್ಕೆ– ಸೈಟ್ ನಂ.42 ಉತ್ತರಕ್ಕೆ– ಸೈಟ್ ನಂ.32 ದಕ್ಷಿಣಕ್ಕೆ– ರಸ್ತೆ.

ಮಾರಾಟದ ಮೊತ್ತ ರೂ.6,30,000–00

ಮಾರಾಟದ ದಿನಾಂಕ:02.12.2008.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:27.02.2009 ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಪಿ.ಆರ್.221

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸಮಾಪನೆಗೊಂಡಿರುವ ಸನ್‌ಕರ್ ವಿವಿಧೋದ್ದೇಶ ಸಹಕಾರ ಸಂಘ ನಿ., ಕೆ.ಬಿ. ಬಡಾವಣೆ, ದಾವಣಗೆರೆ–2 ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(3) ರನ್ವಯ ಪುನಃಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಪತ್ರ ಸಮ ಸಂಖ್ಯೆ: ಡಿಆರ್/ ಡಿವಿಜಿ/ ಸಮಾಪನೆ/ ಸಿಆರ್–27 /2008–09, ದಿನಾಂಕ:16.12.2008.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪತ್ರ ದಿನಾಂಕ:27.02.2009.

ಪ್ರಸ್ತಾವನೆ:

ಪ್ರಸ್ತುತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಷಯ ಸೂಚಿತ ಸಂಘವು ಕಳೆದ ಹಲವಾರು ವರ್ಷಗಳಿಂದ ಸ್ಥಗಿತಗೊಂಡಿದ್ದ ಕಾರಣ ಉಲ್ಲೇಖ (1)ರ ಆದೇಶದ ರೀತ್ಯಾ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸುವ ಪೂರ್ವದಲ್ಲಿ, ಸಂಘದ 25 ಜನ ಸದಸ್ಯರು ದಿನಾಂಕ:01.01.2009ರಂದು ಶ್ರೀ ಜಿ.ಪಿ. ಶಿವಕುಮಾರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಂಘವನ್ನು ಪುನಃಶ್ಚೇತನಗೊಳಿಸಿಕೊಂಡು ಕಾರ್ಯನಿರ್ವಹಿಸಲು ತೀರ್ಮಾನಿಸಿ ಅದರಂತೆ ಐದುವರ್ಷಗಳ ಕ್ರಿಯಾಯೋಜನೆಯನ್ನು ರೂಪಿಸಿಕೊಂಡಿರುತ್ತಾರೆ. ಇದೇ ಅಂಶವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು, ಉಲ್ಲೇಖ 2ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ದಿನಾಂಕ:01.01.2009ರ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದಂತೆ ಸಂಘವು ಕಾರ್ಯನಿರ್ವಹಿಸುತ್ತಿರುವ ಸ್ಥಳದ ವಿವರ ಸಂಘದ ನಾಮಫಲಕ ಇಲಾಖೆಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ ಇವರ ಮೂಲಕ ಸಲ್ಲಿಸುವಂತೆ ಸೂಚಿಸುತ್ತಾ ಮತ್ತು ಸಂಘದ ಸದಸ್ಯರು ಹಾಕಿಕೊಂಡಿರುವ ಕ್ರಿಯಾ ಯೋಜನೆ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಗುರಿ ಸಾಧನೆಯ ಪ್ರಗತಿ ತಃಖ್ತೆಯನ್ನು ಈ ಕಛೇರಿಗೂ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಛೇರಿಗೂ ಸಲ್ಲಿಸುವಂತೆ ಸೂಚಿಸುತ್ತಾ, ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಂಘವನ್ನು ಪುನಃಶ್ಚೇತನಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ನಂ.ಡಿಆರ್/ಡಿವಿಜಿ/ಪುನಃಶ್ಚೇತನ/ಸಿಆರ್–27/2008–09, ದಿನಾಂಕ:18ನೇ ಮಾರ್ಚ್, 2009

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(3) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್‌ಎಂ.2001 ದಿನಾಂಕ:21.11.2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಬಿ. ಕುಬೇರಪ್ಪ, ಕೆ.ಸಿ.ಎಸ್. ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಆದ ನಾನು ಸಮಾಪನೆಗೊಂಡಿರುವ ಸನ್ ಕರ್ ವಿವಿಧೋದ್ದೇಶ ಸಹಕಾರ ಸಂಘ ನಿ., ಕೆ.ಬಿ. ಬಡಾವಣೆ, ದಾವಣಗೆರೆ–2 ಇದರ ಉಲ್ಲೇಖ (1)ರ ಸಮಾಪನಾ ಆದೇಶವನ್ನು ರದ್ದುಗೊಳಿಸಿ ಈ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಅವಕಾಶ ನೀಡುತ್ತಾ ಈ ಮೂಲಕ ಸಂಘವನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಪುನಃಶ್ಚೇತನಕ್ಕಾಗಿ ಆದೇಶಿಸಿರುತ್ತೇನೆ.

ಷರತ್ತುಗಳು:

1) ಪುನಃಶ್ಚೇತನಗೊಂಡ 6 ತಿಂಗಳ ಒಳಗಾಗಿ ಲೆಕ್ಕಪರಿಶೋಧನೆ ಮಾಡಿಸಿ ಸದರಿ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.

2) ಕ್ರಿಯಾಯೋಜನಾ ರೀತ್ಯಾ ಕಾರ್ಯಕ್ರಮ ಹಮ್ಮಿಕೊಂಡು ಪ್ರಗತಿ ಸಾಧಿಸುವುದು.

3) ಡಿ.ಡಿ.ಸಿ.ಸಿ. ಬ್ಯಾಂಕ್ ನೊಂದಿಗೆ ವ್ಯವಹಾರ ಮಾಡತಕ್ಕದ್ದು.

ಒಂದು ವೇಳೆ ಷರತ್ತಿಗನುಗುಣವಾಗಿ 6 ತಿಂಗಳ ನಂತರ ಯಾವುದೇ ಪ್ರಗತಿ ಸಾಧಿಸದಿದ್ದಲ್ಲಿ ಸಂಘವನ್ನು ನೇರವಾಗಿ ಸಮಾಪನೆಗೊಳಿಸಲಾಗುವುದು.

ಸಂಘದ ಪ್ರಥಮ ಮಹಾಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಜರುಗಿಸಲು ಸಂಘದ ಸಮಾಪನಾಧಿಕಾರಿಗೆ ಸೂಚಿಸಿದೆ. ಹಾಗೂ ನೂತನ ಆಡಳಿತ ಮಂಡಳಿಯನ್ನು ರಚಿಸಲು ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ ಇವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ. ಚುನಾವಣಾಧಿಕಾರಿಗಳು, ಚುನಾವಣಾ ಕಾರ್ಯವನ್ನು ಜರುಗಿಸಿ ಹಾಗೂ ಮಹಾಸಭೆಯಲ್ಲಿ ಹಾಜರಾಗಿ ಈ ಕಛೇರಿಗೆ ವರದಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿನಾಂಕ:18.03.2009 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,

ಪಿ.ಆರ್.316 ದಾವಣಗೆರೆ ಜಿಲ್ಲೆ, ದಾವಣಗೆರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ನಡವಳಿಗಳು

ವಿಷಯ: ಶ್ರೀ ಪಜಾನಿ ಆರ್. ಕಿರಿಯ ಪುರುಷ ಆರೋಗ್ಯ ಸಹಾಯಕ, ಇವರು ನಕಲಿ ಅಂಕಪಟ್ಟಿ ಸಲ್ಲಿಸಿ, ಸರ್ಕಾರಿ ಕೆಲಸ ಪಡೆದಿದ್ದು ವಜಾಗೊಳಿಸುವ ಕುರಿತು.

ಓದಲಾಗಿದೆ: 1) ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಡಿಆರ್‌ಸಿ(2):ಬಿಎಲ್:07:2003–04, ದಿನಾಂಕ:08.06.2006.

2) ಬಂಗಾರಪೇಟೆ ತಾಲ್ಲೂಕು ಕ್ಯಾಸಂಬಳ್ಳಿ ಹೋಬಳಿ, ಚಿಕ್ಕಕಲ್ಲಹಳ್ಳಿ ಗ್ರಾಮಸ್ಥರ ಮನವಿ ದಿನಾಂಕ:15.09.2006.

3) ಸಹ ನಿರ್ದೇಶಕರು (ಪರೀಕ್ಷೆ) ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಡಿವಿಇ:ಗವಿ: ಅಂ.ಪಟ್ಟಿ. ಪರೀ:92:07–08, ದಿನಾಂಕ:23.12.2008.

4) ಮುಖ್ಯ ಜಾಗೃತಾಧಿಕಾರಿಗಳು, ಜಾಗೃತಕೋಶ, ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಸಲ್ಲಿಸಿರುವ ತನಿಖಾ ವರದಿ ಸಂಖ್ಯೆ: ಆಕುಕನಿ:ಜಾರಿ: ತನಿಖೆ:ಬೆಂವಿ–68:2006–07, ದಿನಾಂಕ:20.01.2009.

ಪ್ರಸ್ತಾವನೆ:

ಶ್ರೀ ಪಜಾನಿ ಆರ್. ಇವರು ಮೇಲೆ ಓದಲಾದ (1)ರಲ್ಲಿ ಕಿರಿಯ ಪುರುಷ ಆರೋಗ್ಯ ಸಹಾಯಕರಾಗಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಬ್ಯಾಕ್‌ಲಾಗ್ ಹುದ್ದೆಗೆ ಇಲಾಖಾ ನೇಮಕಾತಿ ಸಮಿತಿಯಿಂದ ಆಯ್ಕೆಗೊಂಡಿದ್ದು, ಪ್ರಸ್ತುತ ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಡರ್‌ಸನ್‌ಪೇಟೆ, ಕೆ.ಜಿ.ಎಫ್. ಕೋಲಾರ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರು ನಕಲಿ ಅಂಕಪಟ್ಟಿ ಸಲ್ಲಿಸಿ, ಸರ್ಕಾರಿ ಕೆಲಸ ಪಡೆದುಕೊಂಡಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಕ್ರಮಕೈಗೊಳ್ಳಬೇಕೆಂದು ಚಿಕ್ಕಕಲ್ಲಹಳ್ಳಿ ಗ್ರಾಮಸ್ಥರು ಮೇಲೆ ಓದಲಾದ (2)ರಲ್ಲಿ ದೂರು ಸಲ್ಲಿಸಿರುತ್ತಾರೆ. ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಲು ಮುಖ್ಯ ಜಾಗೃತಾಧಿಕಾರಿ, ಜಾಗೃತಕೋಶ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸೂಚಿಸಲಾಗಿತ್ತು. ಮುಖ್ಯ ಜಾಗೃತಾಧಿಕಾರಿಗಳು ತನಿಖೆ ನಡೆಸಿದ್ದು, ಶ್ರೀ ಪಜಾನಿ, ಇವರು ಸಲ್ಲಿಸಿದ್ದ ಮಲ್ಟಿಪರ್ಪಸ್ ಬೇಸಿಕ್ ಹೆಲ್ತ್ ವರ್ಕರ್ (ಮೇಲ್) ಕೋರ್ಸಿನ ನೋಂದಣಿ ಸಂಖ್ಯೆ: ವೈ.5ಎ–201 ಹೆಚ್ 0406 ವುಳ್ಳ 2ನೇ ಸೆಮಿಸ್ಟರ್ ಹಾಗೂ 4ನೇ ಸೆಮಿಸ್ಟರ್‌ನ ಅಂಕಪಟ್ಟಿಗಳನ್ನು ಪರಿಶೀಲನೆಗೆ ಜಂಟಿ ನಿರ್ದೇಶಕರು (ಪರೀಕ್ಷೆ), ವೃತ್ತಿ ಶಿಕ್ಷಣ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು, ಇವರಿಗೆ ಕಳುಹಿಸಿದ್ದು, ಮೇಲೆ ಓದಲಾದ (3)ರಲ್ಲಿ ಸದರಿ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳನ್ನು ಇಲಾಖೆಯಿಂದ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಶ್ರೀ ಪಜಾನಿ, ಕಿರಿಯ ಪುರುಷ ಆರೋಗ್ಯ ಸಹಾಯಕ, ಇವರನ್ನು ತಕ್ಷಣದಿಂದಲೇ ಸರ್ಕಾರದ ಕೆಲಸದಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕೆಂದು ಮೇಲೆ ಓದಲಾದ (4)ರಲ್ಲಿ ಮುಖ್ಯ ಜಾಗೃತಾಧಿಕಾರಿಗಳು, ಜಾಗೃತ ಕೋಶ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುತ್ತಾರೆ.

ಮುಖ್ಯ ಜಾಗೃತಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಪಜಾನಿ, ಆರ್. ಇವರು ನಕಲಿ ಅಂಕ ಪಟ್ಟಿಗಳನ್ನು ಸಲ್ಲಿಸಿ ಸರ್ಕಾರಕ್ಕೆ ವಂಚನೆ ಮಾಡಿ, ಸರ್ಕಾರಿ ಕೆಲಸ ಪಡೆದುಕೊಂಡಿರುವುದು ಸಾಬೀತಾಗಿರುತ್ತದೆ. ಆದುದರಿಂದ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಕೆಲಸದಿಂದ ವಜಾಗೊಳಿಸಲು ತೀರ್ಮಾನಿಸಿದ್ದು, ಈ ಆದೇಶ.

ಆದೇಶ ಸಂಖ್ಯೆ: ಡಿಪಿಎನ್ (2) ಸಿಆರ್:37:2008–09, ಬೆಂಗಳೂರು, ದಿನಾಂಕ:30ನೇ ಮಾರ್ಚ್, 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಪಜಾನಿ ಆರ್. ಕಿರಿಯ ಪುರುಷ ಆರೋಗ್ಯ ಸಹಾಯಕ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಡರ್‌ಸನ್‌ಪೇಟೆ, ಕೆ.ಜಿ.ಎಫ್. ಕೋಲಾರ ಜಿಲ್ಲೆ, ಇವರನ್ನು ಡಾ: ಉಷಾ ವಾಸುನ್‌ಕರ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಆದ ನಾನು 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಆದೇಶಿಸಿರುತ್ತೇನೆ.

ಡಾ: ಉಷಾ ವಾಸುನ್‌ಕರ್

ಪಿ.ಆರ್.332

ನಿರ್ದೇಶಕರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು–09.

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ನ್ಯಾಯಾಲಯದ ನಡವಳಿಕೆಗಳು

ವಿಷಯ: ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಸಿ.ಎಸ್.ಪುರ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಇದರಲ್ಲಿ ನಡೆದಿರುವ ಹಣದುರುಪಯೋಗದ ಬಗ್ಗೆ ಮಾಜಿ ವ್ಯವಸ್ಥಾಪಕರಾದ ಶ್ರೀ ಸಿ.ವಿ. ರಂಗರಾಜು (ಪವತಿ) ಇವರ ಹೆಸರಿನಲ್ಲಿ ಮತ್ತು ಅವರ ಕಾನೂನು ವಾರಸುದಾರರಾದ ಪತ್ನಿ ಹಾಗೂ ಸಹೋದರರ ಹೆಸರಿನಲ್ಲಿ ಜಂಟಿಯಲ್ಲಿರುವ ಸ್ಥಿರಾಸ್ತಿಯನ್ನು ಸಹಕಾರಿ ಕಾಯಿದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಆದೇಶ ಮಾಡುವ ಬಗ್ಗೆ.

ಉಲ್ಲೇಖ: 1) ಬ್ಯಾಂಕಿನ ವ್ಯವಸ್ಥಾಪಕರ ಪತ್ರದ ದಿನಾಂಕ:23.03.2009.
2) ದಿನಾಂಕ:16.03.2009ರಂದು ಈ ನ್ಯಾಯಾಲಯದಲ್ಲಿ ದಾಖಲಾಗಿರುವ ಅಧಿಭಾರ ಅರ್ಜಿ ಸಂಖ್ಯೆ: 03/2008–2009.

ಪ್ರಸ್ತಾವನೆ:

ಶ್ರೀ ಸಿ.ವಿ. ರಂಗರಾಜು (ಪವತಿ) ರವರು ವ್ಯವಸ್ಥಾಪಕರಾಗಿ ದಿನಾಂಕ:08.05.2007 ರವರೆವಿಗೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿ., ಸಿ.ಎಸ್.ಪುರ ಗುಬ್ಬಿ ತಾಲ್ಲೂಕು, ಇದರಲ್ಲಿ ಕೆಲಸ ನಿರ್ವಹಿಸಿರುತ್ತಾರೆ. ಇವರು ಸದರಿ ಬ್ಯಾಂಕಿನಲ್ಲಿ ರೂ.4.44.079=16 ಗಳ ಬ್ಯಾಂಕಿನ ಹಣವನ್ನು ದುರುಪಯೋಗ ಮಾಡಿರುವುದು ಬ್ಯಾಂಕಿನ 2006–2007ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಿಂದ ಕಂಡುಬಂದಿದೆ.

ಈ ರೀತಿಯ ದುರುಪಯೋಗದ ಹಣದ ವಸೂಲಾತಿಗಾಗಿ ಬ್ಯಾಂಕಿನ ವ್ಯವಸ್ಥಾಪಕರು ಉಲ್ಲೇಖ (2)ರ ರೀತ್ಯಾ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 69ರಡಿ ಅಧಿಬಾರ ಅರ್ಜಿಯನ್ನು ದಿನಾಂಕ:19.02.2009ರಂದು ದಾಖಲು ಮಾಡಿರುತ್ತಾರೆ. ಈ ದಾವೆಯನ್ನು ಕಡತದ ಮೇಲೆ ತೆಗೆದುಕೊಂಡು ದಿನಾಂಕ:16.03.2009 ರಿಂದ ವಿಚಾರಣೆ ಪ್ರಾರಂಭಿಸಲು ಆರೋಪ ಸಹಿತದ ನೋಟೀಸನ್ನು ದಿನಾಂಕ:06.03.2009ರಂದು ವಾದಿ ಮತ್ತು ಪ್ರತಿವಾದಿಯವರಿಗೆ ನೀಡಲಾಗಿದ್ದು, ದಿನಾಂಕ:16.03.2009 ಮತ್ತು ದಿನಾಂಕ:23.03.2009ರಂದು ಪ್ರಕರಣದ ವಿಚಾರಣೆಯನ್ನು ನಡೆಸಲಾಗಿರುತ್ತದೆ.

ಉಲ್ಲೇಖ (1)ರ ಪತ್ರದಲ್ಲಿ ಸದರಿ ಬ್ಯಾಂಕಿನ ವ್ಯವಸ್ಥಾಪಕರು ದಾವೆಯಲ್ಲಿ ಮನವಿ ಮಾಡಿ, ಪ್ರತಿವಾದಿಗಳು ದುರುಪಯೋಗ ಪಡಿಸಿದ ಹಣ ರೂ.4.44.079=16, ಮತ್ತು ಬಡ್ಡಿ ಸಮೇತ ವಸೂಲಿ ಕುರಿತು ಹಾಗೂ 2007–2008ನೇ ಸಾಲಿನ ಲೆಕ್ಕ ಪರಿಶೋಧನೆಯು ಪ್ರಗತಿಯಲ್ಲಿದ್ದು, ಈ ಸಾಲಿನಲ್ಲಿಯೂ ಸಹ ಸದರಿಯವರಿಂದ ಎದುರುದಾರರಿಂದ (ಪ್ರತಿವಾದಿಗಳಿಂದ) ರೂ.7,81,402=70 ಗಳ ಹಣ ದುರುಪಯೋಗವಾಗಿರುವುದು ಕಂಡುಬಂದಿದ್ದು, ಈ ದುರುಪಯೋಗದ ಹಣದ ವಸೂಲಿ ಕುರಿತು, ಹಣದ ಭದ್ರತೆಗಾಗಿ ದಾವೆಯ ಅಂತಿಮ ಫಲಿತಾಂಶವನ್ನು ಕಾಯ್ದಿರಿಸಿ, ಸದರಿ ಪ್ರತಿವಾದಿಗಳ ಹೆಸರಿನಲ್ಲಿ ಮತ್ತು ಅವರ ಹಕ್ಕುಬದ್ಧ ಕಾನೂನು ವಾರಸುದಾರರಾದ ಪತ್ನಿ ಮತ್ತು ಸಹೋದರರ ಹೆಸರಿನಲ್ಲಿ ಜಂಟಿ ಇರುವ ಸ್ಥಿರಾಸ್ತಿಗಳನ್ನು ಸಹಕಾರಿ ಕಾಯಿದೆ 1959ರ ಕಲಂ 103 ರಡಿಯಲ್ಲಿ ತೀರ್ಪುಪೂರ್ವ ಜಪ್ತಿ ಆದೇಶ ನೀಡಬೇಕಾಗಿ ಕೋರಿರುತ್ತಾರೆ. ಆದುದರಿಂದ ಈ ನ್ಯಾಯಾಲಯವು, ವಿಚಾರಣೆಗಾಗಿರುವ ಅಧಿಬಾರ ಅರ್ಜಿ ಸಂಖ್ಯೆ: 03/2008–2009 ನ್ನು ಅಂತಿಮ ತೀರ್ಪು ಕಾಯ್ದಿರಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 103 ರನ್ವಯ ಈ

ನ್ಯಾಯಾಲಯದಲ್ಲಿರುವ ದಾವೆಯ ತೀರ್ಪುಪೂರ್ವ. ಈ ಕೆಳಕಂಡ ಷೆಡ್ಯೂಲ್‌ನಲ್ಲಿನ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನಂ.ಸನಿ–32/ಎ.ಬಿ.ಎನ್./ಡಿ.ಡಿ.ಎಸ್/ಕಲಂ103/113/2008–2009, ದಿನಾಂಕ:23ನೇ ಮಾರ್ಚ್, 2009

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿ.ಎಂ.ಡಬ್ಲ್ಯೂ/69/ಸಿ.ಎಲ್.ಎಸ್/2001, ದಿನಾಂಕ:21.11.2001 ರಲ್ಲಿ ಪ್ರತ್ಯಾಯೋಜಿಸಿರುವ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 103ರ ಪ್ರಕಾರ, ಶ್ರೀ ಕೆ. ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ ತುಮಕೂರು, ಆದ ನಾನು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಸಿ.ವಿ. ರಂಗರಾಜು ಬಿನ್ ಲೇಟ್ ಕೆ. ವೆಂಕಟವರದಾಚಾರ್, ಮಾಜಿ ವ್ಯವಸ್ಥಾಪಕರು (ಪವತಿ) ಇವರ ಹೆಸರಿನಲ್ಲಿ, ಇವರ ಸಹೋದರರಾದ ಶ್ರೀ ಸಿ.ವಿ. ಕೃಷ್ಣ ಸ್ವಾಮಿ ಬಿನ್ ಲೇಟ್ ಕೆ.ವೆಂಕಟವರದಾಚಾರ್, ಶ್ರೀ ಸಿ.ವಿ. ಮುರುಳಿಧರ್ ಬಿನ್ ಲೇಟ್ ಕೆ.ವೆಂಕಟವರದಾಚಾರ್ ಮತ್ತು ಪತ್ನಿ ಶ್ರೀಮತಿ ಕೆ.ಎನ್. ಪದ್ಮ ಕೋಂ ಲೇಟ್ ಸಿ.ವಿ. ರಂಗರಾಜು, ರವರುಗಳ ಹೆಸರಿನಲ್ಲಿರುವ ಈ ಕೆಳಕಂಡ ಷೆಡ್ಯೂಲ್‌ನಲ್ಲಿನ ಸ್ಥಿರಾಸ್ತಿಗಳನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಇರುವ ದಾವೆಯ ಅಂತಿಮ ತೀರ್ಪಿಗೆ ಒಳಪಟ್ಟು ಈ ಆದೇಶ ಪೂರ್ವಜಪ್ತಿ ಆದೇಶ ಹೊರಡಿಸಿರುತ್ತೇನೆ.

ಇವರುಗಳು, ಈ ನ್ಯಾಯಾಲಯದಿಂದ ಮುಂದಿನ ಆದೇಶ ನೀಡುವವರೆವಿಗೆ ಅಥವಾ ಸ್ವತ್ತುಗಳಿಗೆ ತತ್ಸಮಾನವಾದ ನಗದು ಭದ್ರತೆ ನೀಡುವವರೆವಿಗೆ ವಿಲೇವಾರಿ ಮಾಡುವುದಾಗಲೀ, ಪರಭಾರೆ ಮಾಡುವುದಾಗಲೀ, ಅಥವಾ ವರ್ಗಾಯಿಸುವುದಾಗಲೀ ಮಾಡುವಂತಿಲ್ಲ. ಒಂದುವೇಳೆ ಈ ಆದೇಶವನ್ನು ನಿರ್ಲಕ್ಷಿಸಿ ಮಾಡಿದರೂ, ಈ ಸ್ವತ್ತು ಕೊಂಡಲ್ಲಿ ಅಥವಾ ಇನ್ಯಾವುದೇ ವಿಧದಲ್ಲಿ ವರ್ಗಾಯಿಸಿಕೊಂಡಲ್ಲಿ ಅದು ಸಿಂಧುವಾಗುವುದಿಲ್ಲ (ಸಕ್ರಮವಾಗುವುದಿಲ್ಲ) ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ದುರುಪಯೋಗದಾರರ ಕಾನೂನು ವಾರಸುದಾರರು, ಈ ಜಪ್ತಿ ಆದೇಶದ ವ್ಯಾಪ್ತಿಯಿಂದ ಹೊರಬರಲು ಇಚ್ಛಿಸಿದಲ್ಲಿ, ಜಪ್ತಿಗೊಳಿಸಲ್ಪಟ್ಟ ಆಸ್ತಿಗಳ ಮೌಲ್ಯಕ್ಕೆ ತಕ್ಕಷ್ಟು ಮತ್ತು ಈ ನ್ಯಾಯಾಲಯವು ಸರಿ ಎಂದು ಭಾವಿಸುವ ತಕ್ಕಷ್ಟು ನಗದು ಭದ್ರತೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ ತುಮಕೂರು ಇವರ ಹೆಸರಿನಲ್ಲಿ ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ತುಮಕೂರು ಕೇಂದ್ರ ಕಛೇರಿ ತುಮಕೂರು, ಈ ಬ್ಯಾಂಕಿನಲ್ಲಿ ಅಮಾನತ್ ಖಾತೆಯಲ್ಲಿ ತೊಡಗಿಸಿ, ಈ ಬಗ್ಗೆ ಮೂಲ ಚಲನ್ ಪ್ರತಿಯನ್ನು ದಿನಾಂಕ:30.04.2009ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ಈ ನ್ಯಾಯಾಲಯಕ್ಕೆ ಹಾಜರುಪಡಿಸುವುದರ ಮೂಲಕ ಈ ಜಪ್ತಿ ಆದೇಶದಿಂದ ಹೊರಗುಳಿಯಬಹುದೆಂದು ಸಹ ತಿಳಿಸಲಾಗಿದೆ. ಸದರಿ ನಿಗದಿತ ಅವಧಿಯೊಳಗೆ ನಗದು ಭದ್ರತೆ ನೀಡಲು ವ್ಯಾಜ್ಯದ ಪ್ರತಿವಾದಿಗಳು (ಎದುರುದಾರರು) ವಿಫಲರಾದಲ್ಲಿ ಈ ಷರತ್ತು ಪೂರ್ವಕ ಜಪ್ತಿ ಆದೇಶ ಸ್ಥಿರಗೊಳ್ಳುವುದಲ್ಲದೇ ಖಾಯಂಗೊಳ್ಳುವುದು ಎಂದು ತಿಳಿಯತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:23.03.2009ರಂದು ನೀಡಿದ್ದೇನೆ.

ಕೆ. ಗೋಪಾಲರೆಡ್ಡಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ./ ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ತರಹೆ	ಚೆಕ್ಕುಬಂದಿ
1.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	326	161–2 ಸಿ.ಎಸ್.ಪುರ ಕಸಬಾ	0–24	ಖುಷ್ಕಿ	ಪೂರ್ವ: ಸಿ.ವಿ.ರಂಗರಾಜು ರವರ ಸ್ವಂತ ಜಮೀನು. ಪಶ್ಚಿಮ: ದೊರೆಸ್ವಾಮಿ ಅಯ್ಯಂಗಾರ್ ರವರ ಜಮೀನು. ಉತ್ತರ: ವೆಂಕಟವರದಾಚಾರ್ ರವರ ಜಮೀನು. ದಕ್ಷಿಣ: ನೀಲಕಂಠಯ್ಯ ನವರ ಜಮೀನು.

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ./ ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ತರಹೆ	ಚೆಕ್ಕುಬಂದಿ
2.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	326	161–4 ಸಿ.ಎಸ್.ಪುರ ಕಸಬಾ	0–35	ಖುಷ್ಕಿ	ಪೂರ್ವ: ಸಿ.ವಿ.ರಂಗರಾಜು ರವರ ಸ್ವಂತ ಜಮೀನು. ಪಶ್ಚಿಮ: ದೊರೆಸ್ವಾಮಿ ಅಯ್ಯಂಗಾರ್ ರವರ ಜಮೀನು. ಉತ್ತರ: ವೆಂಕಟವರದಾಚಾರ್ ರವರ ಜಮೀನು. ದಕ್ಷಿಣ: ನೀಲಕಂಠಯ್ಯ ನವರ ಜಮೀನು.
3.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	326	159–1 ಸಿ.ಎಸ್.ಪುರ ಕಸಬಾ	0–31	ಖುಷ್ಕಿ	ಪೂರ್ವ: ಕುಪ್ಪಯ್ಯಂಗಾರ್ ರವರ ಜಮೀನು. ಪಶ್ಚಿಮ:ಸಿ.ವಿ.ರಂಗರಾಜು ರವರ ಸ್ವಂತ ಜಮೀನು. ಉತ್ತರ: ಶಿವಣ್ಣ ರವರ ಜಮೀನು. ದಕ್ಷಿಣ: ರಸ್ತೆ.
4.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	326	173–2 ಸಿ.ಎಸ್.ಪುರ ಕಸಬಾ	1–35	ಖುಷ್ಕಿ	ಪೂರ್ವ: ಗಂಗಾಧರರಾವ್ ರವರ ತೋಟ. ಪಶ್ಚಿಮ:ಪುಟ್ಟಯ್ಯ ನವರ ತೋಟ. ಉತ್ತರ: ಸಿ.ಟಿ.ಗೋವಿಂದಯ್ಯ ನವರ ಜಮೀನು. ದಕ್ಷಿಣ: ಕಾಲುವೆ.
5.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	210–1ಎ ಸಿ.ಎಸ್.ಪುರ ಭಾಗಾಯ್ತು	0–12	ತರಿ	ಪೂರ್ವ: ಸಿ.ವಿ.ರಂಗರಾಜು ರವರ ಸ್ವಂತ ಜಮೀನು. ಪಶ್ಚಿಮ: ತೊರೆ ಉತ್ತರ: ಕಡಗು ದಕ್ಷಿಣ: ಹುಚ್ಚಣ್ಣ ನವರ ಗದ್ದೆ.
6.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	210–2ಎ ಸಿ.ಎಸ್.ಪುರ ಭಾಗಾಯ್ತು	0–14	ತರಿ	ಪೂರ್ವ: ಬಾಷಾಸಾಬ್‌ರವರ ಗದ್ದೆ ಪಶ್ಚಿಮ: ತೊರೆ ಉತ್ತರ: ಕಡಗು ದಕ್ಷಿಣ: ಗುಬ್ಬಯ್ಯನವರ ಗದ್ದೆ
7.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	210–1ಬಿ ಸಿ.ಎಸ್.ಪುರ ಭಾಗಾಯ್ತು	0–15	ತರಿ	ಪೂರ್ವ: ಸಿ.ವಿ.ರಂಗರಾಜು ರವರ ಸ್ವಂತ ಜಮೀನು. ಪಶ್ಚಿಮ: ತೊರೆ ಉತ್ತರ: ಕಡಗು ದಕ್ಷಿಣ: ಹುಚ್ಚಣ್ಣ ನವರ ಗದ್ದೆ.
8.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	210–2ಬಿ ಸಿ.ಎಸ್.ಪುರ ಭಾಗಾಯ್ತು	0–12	ತರಿ	ಪೂರ್ವ: ಬಾಷಾಸಾಬ್‌ರವರ ಗದ್ದೆ ಪಶ್ಚಿಮ: ತೊರೆ ಉತ್ತರ: ಕಡಗು ದಕ್ಷಿಣ: ಗುಬ್ಬಯ್ಯನವರ ಗದ್ದೆ

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ./ ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ತರಹೆ	ಚೆಕ್ಕುಬಂದಿ
9.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	207 ಸಿ.ಎಸ್.ಪುರ ಭಾಗಾಯ್ತು	0–35	ತರಿ	ಪೂರ್ವ: ಸಿ.ವಿ.ರಂಗರಾಜು ರವರ ಸ್ವಂತ ಗದ್ದೆ. ಪಶ್ಚಿಮ: ಬಾಷಾಸಾಬ್‌ರವರ ಗದ್ದೆ ಉತ್ತರ: ಕಡಗು ದಕ್ಷಿಣ: ಹುಚ್ಚಣ್ಣ ನವರ ಗದ್ದೆ.
10.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	206 ಸಿ.ಎಸ್.ಪುರ ಭಾಗಾಯ್ತು	0–34	ತರಿ	ಪೂರ್ವ: ಕಳಸಮ್ಮ ನವರ ಗದ್ದೆ ಪಶ್ಚಿಮ: ಸಿ.ವಿ.ರಂಗರಾಜು ರವರ ಸ್ವಂತ ಗದ್ದೆ. ಉತ್ತರ: ಕಡಗು ದಕ್ಷಿಣ: ರಾಯಗಾಲುವೆ
11.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	106–1 ಸಿ.ಎಸ್.ಪುರ ಭಾಗಾಯ್ತು	0–08	ತರಿ	ಪೂರ್ವ: ರಸ್ತೆ ಪಶ್ಚಿಮ: ವೆಂಕಟವರದಾಚಾರ್ ರವರ ಗದ್ದೆ ಉತ್ತರ: ಮುದ್ದಯ್ಯನವರ ಗದ್ದೆ. ದಕ್ಷಿಣ: ರಸ್ತೆ.
12.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	106–2 ಸಿ.ಎಸ್.ಪುರ ಭಾಗಾಯ್ತು	0–07	ತರಿ	ಪೂರ್ವ: ರಸ್ತೆ ಪಶ್ಚಿಮ: ವೆಂಕಟವರದಾಚಾರ್ ರವರ ಗದ್ದೆ ಉತ್ತರ: ಮುದ್ದಯ್ಯನವರ ಗದ್ದೆ. ದಕ್ಷಿಣ: ರಸ್ತೆ.
13.	ಸಿ.ವಿ. ರಂಗರಾಜು ಬಿನ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾಲ್ಲೂಕು.	305	45–1 ಸಿ.ಎಸ್.ಪುರ ಭಾಗಾಯ್ತು	0–11	ತರಿ	ಪೂರ್ವ: ವೆಂಕಟವರದಾಚಾರ್ ರವರ ಗದ್ದೆ ಪಶ್ಚಿಮ: ಸಿ.ಜಿ. ಕೃಷ್ಣಮೂರ್ತಿ ರವರ ತೋಟ ಉತ್ತರ: ಕಾಲುವೆ. ದಕ್ಷಿಣ: ಕುಪ್ಪಯ್ಯಂಗಾರ್ ರವರ ಗದ್ದೆ.
14.	1.ಸಿ.ವಿ. ಕೃಷ್ಣಸ್ವಾಮಿ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾ: 2. ಕೆ.ಎನ್. ಪದ್ಮ ಕೋಂ ಲೇಟ್ ಸಿ.ವಿ. ರಂಗರಾಜು ಸಿಎಸ್. ಪುರ, ಗುಬ್ಬಿ ತಾ: 3. ಸಿ.ವಿ. ಮುರುಳಿಧರ್ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ ಗುಬ್ಬಿ ತಾ:	354	33 ಕೆಂಚನಹಳ್ಳಿ ಸಿ.ಎಸ್.ಪುರ ಹೋಬಳಿ	2–04	ಖುಷ್ಕಿ	ಪೂರ್ವ: ಹುಚ್ಚಣ್ಣನವರ ಹೊಲದ ಜಮೀನು ಪಶ್ಚಿಮ: ವೆಂಕಟೇಶ ರವರ ಹೊಲದ ಜಮೀನು ಉತ್ತರ: ಶಿವಣ್ಣ ನವರ ಹೊಲದ ಜಮೀನು ದಕ್ಷಿಣ: ಮುದ್ದಯ್ಯನವರ ಹೊಲದ ಜಮೀನು.

ಕ್ರ. ಸಂ.	ಖಾತೆದಾರರ/ ಹಕ್ಕುದಾರರ ಹೆಸರು ಮತ್ತು ವಿಳಾಸ	ಖಾತೆ ನಂ./ ಅಸೆಸ್‌ಮೆಂಟ್ ನಂ.	ಸರ್ವೆ ನಂ.	ವಿಸ್ತೀರ್ಣ ಎ.ಗುಂ.	ತರಹೆ	ಚೆಕ್ಕುಬಂದಿ
15.	1.ಸಿ.ವಿ. ಕೃಷ್ಣಸ್ವಾಮಿ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾ: 2. ಕೆ.ಎನ್. ಪದ್ಮ ಕೋಂ ಲೇಟ್ ಸಿ.ವಿ. ರಂಗರಾಜು ಸಿಎಸ್. ಪುರ, ಗುಬ್ಬಿ ತಾ: 3. ಸಿ.ವಿ. ಮುರುಳಿಧರ್ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ ಗುಬ್ಬಿ ತಾ:	354	44-1 ಕೆಂಚನಹಳ್ಳಿ ಸಿ.ಎಸ್.ಪುರ ಹೋಬಳಿ	4-00	ಖುಷ್ಕಿ	ಪೂರ್ವ: ರಸ್ತೆ ಪಶ್ಚಿಮ: ಸಿ.ವಿ. ರಂಗರಾಜು ರವರ ಸ್ವಂತ ಜಮೀನು. ಉತ್ತರ: ಬೀರಪ್ಪನವರ ಹೊಲ ದಕ್ಷಿಣ: ಗೋಪಮ್ಮ ನವರ ಹೊಲ.
16.	1.ಸಿ.ವಿ. ಕೃಷ್ಣಸ್ವಾಮಿ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ, ಗುಬ್ಬಿ ತಾ: 2. ಕೆ.ಎನ್. ಪದ್ಮ ಕೋಂ ಲೇಟ್ ಸಿ.ವಿ. ರಂಗರಾಜು ಸಿಎಸ್. ಪುರ, ಗುಬ್ಬಿ ತಾ: 3. ಸಿ.ವಿ. ಮುರುಳಿಧರ್ ಬಿನ್ ಲೇಟ್ ವೆಂಕಟವರದಾಚಾರ್ ಸಿ.ಎಸ್.ಪುರ ಗುಬ್ಬಿ ತಾ:	354	44-2 ಕೆಂಚನಹಳ್ಳಿ ಸಿ.ಎಸ್.ಪುರ ಹೋಬಳಿ	4-00	ಖುಷ್ಕಿ	ಪೂರ್ವ: ಸಿ.ವಿ. ರಂಗರಾಜು ರವರ ಸ್ವಂತ ಜಮೀನು. ಪಶ್ಚಿಮ: ಗೋಮಾಳ. ಉತ್ತರ: ನಾಗರಾಜು ರವರ ಹೊಲದ ಜಮೀನು. ದಕ್ಷಿಣ: ಗೋಮಾಳ.

ದಿನಾಂಕ:23.03.2009
ಸ್ಥಳ:ತುಮಕೂರು.

ಕೆ. ಗೋಪಾಲರೆಡ್ಡಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಪಿ.ಆರ್.350

ಸಹಕಾರ ಸಂಘಗಳ ಉಪನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಛೇರಿಯ ನಡವಳಿಗಳು

ವಿಷಯ: ಸಮಾಪನೆಗೊಂಡಿರುವ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೀಲಗುಂದ ತಾ: ಹರಪನಹಳ್ಳಿ ಇದರ ನೋಂದಣಿಯನ್ನು ರದ್ದುಪಡಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಆದೇಶ ಸಂಖ್ಯೆ:ಡಿಆರ್/ಡಿವಿಜಿ/ಸಮಾಪನೆ/ಸಿಆರ್-09/2005-06, ದಿನಾಂಕ:09.11.2005.
2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ, ಇವರ ಪತ್ರ ದಿನಾಂಕ:31.03.2009.

ಪ್ರಸ್ತಾವನೆ:

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ ಸಹಕಾರ ಸಂಘವು ನೋಂದಣಿ ಸಂಖ್ಯೆ: ಸನಿ-23/ವಿ-1/20443/95-96 ದಿನಾಂಕ:07.10.1995 ರಲ್ಲಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಚಟುವಟಿಕೆಗಳು ಪೂರ್ಣವಾಗಿ ಸ್ಥಗಿತಗೊಂಡಿದ್ದರಿಂದ, ಈ ಸಂಘವನ್ನು ಮುಂದುವರಿಸಿಕೊಂಡು ಹೋಗುವುದು ಸೂಕ್ತವಲ್ಲವೆಂದು ಭಾವಿಸಿ, ಉಲ್ಲೇಖ (1)ರ ದಿನಾಂಕ:09.11.2005ರ ಆದೇಶದಲ್ಲಿ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಪನಹಳ್ಳಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ವಿಲೇಮಾಡಿ ಶೂನ್ಯಗೊಳಿಸಿ ಸಂಘದ ನೋಂದಣಿಯನ್ನು ರದ್ದುಗೊಳಿಸಲು ಉಲ್ಲೇಖ (2)ರ

ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ/ನೋಸಂರ/ಸಿಆರ್–09/2005–06, ದಿನಾಂಕ:31ನೇ ಮಾರ್ಚ್, 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75ರನ್ವಯ ಹಾಗೂ ಸರ್ಕಾರಿ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್‌ಎಂ/2001/ದಿನಾಂಕ:21.11.2001 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಬಿ.ಕುಬೇರಪ್ಪ, ಕೆ.ಸಿ.ಎಸ್. ಆದ ನಾನು ಸಮಾಪನೆಗೊಂಡ ಹಾಲು ಉತ್ಪಾದಕರ ಸಹಕಾರ ಸಂಘ ನಿ., ನೀಲಗುಂದ ತಾ: ಹರಪನಹಳ್ಳಿ ಇದರ ನೋಂದಣಿಯನ್ನು ರದ್ದುಗೊಳಿಸಿ ಆದೇಶ ಹೊರಡಿಸಿರುತ್ತೇನೆ.

ಈ ರದ್ಧತಿಯ ಆದೇಶದ ದಿನಾಂಕದಿಂದ ಸದರಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ನಿಂತುಹೋಗಿರುತ್ತವೆಂದು ಭಾವಿಸಲ್ಪಡತಕ್ಕದ್ದು. ಈ ಸಂಘವು ಅಸ್ತಿತ್ವದಲ್ಲಿರುವುದಿಲ್ಲವೆಂದು ಪರಿಗಣಿಸತಕ್ಕದ್ದು ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33 (ಎನ್) ರನ್ವಯ ಈ ಸಂಘದ ಎಲ್ಲಾ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಇವರ ಕಛೇರಿಯಲ್ಲಿಡಲು ಆದೇಶಿಸಿದೆ.

ನನ್ನ ಸ್ವಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:31.03.2009ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಸಹಕಾರ ಸಂಘಗಳ ಉಪ ನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.351

OFFICE OF THE 6TH A.C.M.M. COURT BANGALORE CITY

Draft Notification Dated:4th August, 2009

It is hereby to the general public that the following unclaimed vehicles are in the custody of Mico layout police station, Bangalore. Which are seized under various C.miss Cases.

Sl. No.	C.Miss No.	P.F. No.	Type of Vehicles And Registration No.	Engine No.	Chasis No.
1.	369/08	186/08	Yamaha RX100 KA-02-K-4408	ILI391381	ILI 391381
2.	375/08	190/08	Yamaha RX100 KA-05-EK-6883	ILI 016728	ILI016728
3.	376/08	191/08	Yamaha RX100 CKE-8139	ILI089728	ILI089728
4.	377/08	192/08	Bajaj Pulser AP-20-M-7438	DJG1BBN11839	MD2DHDJZZNIM83585
5.	382/08	194/08	1) Bajaj Pulser No. TN-24-Y-8995	DHGBMF38566	DHUBMF39674
6.	383/08	195/08	1) Yamaha RX-Z KA-03-EM-8011	IL3008279	97MIL3008279
			2) Yamaha RX-100 KA-03-E-5602	ILI196702	ILI196702
7.	385/08	197/08	Kinetic Honda KA-04-R-1376	NIEMKNO669855	
8.	384/08	196/08	Kinetic Honda MP-09-F-8949	NTED265513	
9.	394/08	207/08	1) Suzuki Shogon KA-03-S-3683	7609M734006	7609F689200
			2) Suzuki Shogon GCS-9388	6812M202924	

Sl. No.	C.Miss No.	P.F. No.	Type of Vehicles And Registration No.	Engine No.	Chasis No.
10.	395/08	208/08	1) Suzuki Samurai CAR-9559	3607M079363	
11.	397/08	210/08	Kinetic Honda KA-05-E-4862	ETF5582	
12.	398/08	211/08	Bajaj CT-100 No. KA-05-E-5554		DUFBLO46499
13.	399/08	212/08	Kinetic Honda KA-01-K-9191	NIENK4666624	
14.	400/08	213/08	TVS-Scooty No. KA-05-EJ-182	KO2CM686243	
15.	401/08	214/08	Kinetic Honda KA-05-H-6119	JA488215	
16.	402/08	215/08	Kinetic Honda No. CKB-893	NIEE183870	
17.	403/08	216/08	Bajaj Sunny TN-07-K-2997	93887	
18.	404/08	217/08	Kinetic Honda No. KA-05-J-1382	HH300761	
19.	409/08	218/08	1) Bajaj Chetak KA-04-H-4715	EO6PH210106	060H266678
20.	410/08	219/08	1) Bajaj KB100 KA-03-H-1275	E30BL016036	C30BL016341
			2) Kinetic Honda KA-02-R-3122	INIJ633683	
21.	411/08	220/08	1) T.V.S. Scooty KA-05-V-6453	96LM080937	
			2) Suzuki Samurai KA-04-V-3911	7801M004905	7801F958290
22.	412/08	221/08	1) Bajaj Chetak KA-05-X-6773	C9ZZPE435570	35M13EA10116
23.	413/08	222/08	1) Bajaj Super KA-01-E-1815	05E769814	050739031
			2) T.V.S. Scooty KA-05-EB-3652		H690671
24.	414/08	223/08	1) T.V.S. Feiro KA-01-V-1768	M1209M154074	M1209E152417
			2) Bajaj Super KA-03-J-7771	DM169588	CO5TN169607
25.	425/08	228/08	1) Suzuki Samurai MEC-609	3510M030859	15101023312
			2) T.V.S. Champ CKK-6979		D89F092383

Sl. No.	C.Miss No.	P.F. No.	Type of Vehicles And Registration No.	Engine No.	Chasis No.
26.	426/08	229/08	Yamaha RX-100	ILI00216	ILI00216
27.	427/08	230/08	1) Kinetic Honda KA-05-A-8013	PIDJ66074	
			2) T.V.S. XL Super KA-05-1978	PI208M633462	P32097643030
28.	428/08	233/08	1) T.V.S.50 KA-05-EC-6178	PI00KF33F246502	
			2) Bajaj Chetak CKL-6421	315589	060276060
29.	429/08	234/08	1) T.V.S.XL Super TN-29-Q-6862	P1106M432928	P1106F438412
			2) Kinetic Honda	-	-
30.	430/08	235/08	1) T.V.S. XL Super CKI-1558	-	-
			2) Bajaj Chetak AP-7A-1600	106DL27218	F06DM277759
31.	431/08	236/08	1) Bajaj Chetak CAV-9675	W06P020116	06L019928
32.	434/08	241/08	1) Yamaha CKM-5227	IDI049512	IDI049512
			2) T.V.S.Champ CKK-4889	-	-
33.	432/08	239/08	1) T.V.S. Champ KA-05-V-5582		
			2) T.V.S.50 KA-04-V-3516		
34.	433/08	240/08	1) Bajaj Chetak CAO-696		05C052599
			2) Kinetic Honda KA-03-S-5005	NIAMEEMJ602696	
35.	440/08	245/08	1) Bajaj Boxer KA-02-EF-2526	C5102900	DFFPJC02973
			2) Yamaha RX-100 AP-10-A-3378	ILI94818	ILI94818
36.	444/08	248/08	1) T.V.S. Suzuki Max KA-05-EA-3912	D002M301780	3F253589
			2) Bajaj KB-100 KA-03-S-1254	OPM96F00218	29M00190
37.	442/08	246/08	Suzuki Fiero KA-03-EG-1765	M1208M15144	NI208F1486
38.	443/08	247/08	1) Suzuki Samurai AP-09-AL9030	L112M156179	CPLH26193
			2) Suzuki Samurai CKE-1554	2101F144431	1801M151472

Any person's having right to claim the above vehicle shall approach the Mico layout Police Station with necessary document with in one month from the date of this publication any failing which the above vehicle will be confiscated to Government.

Any claims recieved after the due date will no be entertained.

Inspector of Police,
PR-748 Micolayout Police Station, Bangalore-560076.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರವರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಕಾರ್ಯಾಲಯ

ವಿಷಯ: ಸಮಾಪನೆಗೊಂಡಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿವಿಧೋದ್ದೇಶ ಕೈಗಾರಿಕೆ ಮತ್ತು ನೇಕಾರರ ಸೇವಾ ಸಹಕಾರ ಸಂಘ ನಿ., ಸಾರಥಿ ತಾ: ಚನ್ನಗಿರಿ ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(3) ರನ್ವಯ ಪುನಃಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ:1) ಈ ಕಛೇರಿ ಪತ್ರ ಸಮಸಂಖ್ಯೆ: ಡಿಆರ್/ಡಿವಿಜಿ/ ಸಮಾಪನೆ/ಸಿಆರ್-16/2005-06, ದಿನಾಂಕ:15.12.2005.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪತ್ರ ದಿನಾಂಕ:19.03.2009.

ಪ್ರಸ್ತಾವನೆ:

ಪ್ರಸ್ತುತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಷಯ ಸೂಚಿತ ಸಂಘವು ಕಳೆದ ಹಲವಾರು ವರ್ಷಗಳಿಂದ ಸ್ಥಗಿತಗೊಂಡಿದ್ದ ಕಾರಣ ಉಲ್ಲೇಖ (1)ರ ಆದೇಶದ ರೀತ್ಯಾ ಸಮಾಪನೆಗೊಳಿಸಿ ಸಹಕಾರ ಅಭಿವೃದ್ಧಿ ಅಧಿಕಾರಿ ಚನ್ನಗಿರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ಸಮಾಪನಾಧಿಕಾರಿಗಳು ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸುವ ಪೂರ್ವದಲ್ಲಿ, ಸಂಘದ ಸದಸ್ಯರು ದಿನಾಂಕ:28.09.2007 ರಂದು ಸಭೆ ಸೇರಿ ಸಂಘವನ್ನು ಪುನಃಶ್ಚೇತನಗೊಳಿಸಿಕೊಂಡು ಕಾರ್ಯನಿರ್ವಹಿಸಲು ತೀರ್ಮಾನಿಸಿ ಅದರಂತೆ ಐದು ವರ್ಷಗಳ ಕ್ರಿಯಾಯೋಜನೆಯನ್ನು ರೂಪಿಸಿಕೊಂಡಿರುತ್ತಾರೆ. ಇದೇ ಅಂಶವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾವಣಗೆರೆ ಇವರು, ಉಲ್ಲೇಖ 2ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ದಿನಾಂಕ:28.09.2007ರ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದಂತೆ ಸಂಘವು ಕಾರ್ಯನಿರ್ವಹಿಸುತ್ತಿರುವ ಸ್ಥಳದ ವಿವರ ಸಂಘದ ನಾಮಫಲಕ ಇಲಾಖೆಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಹಕಾರ ಅಭಿವೃದ್ಧಿ ಅಧಿಕಾರಿ ಚನ್ನಗಿರಿ ಇವರ ಮೂಲಕ ಸಲ್ಲಿಸುವಂತೆ ಸೂಚಿಸುತ್ತಾ ಮತ್ತು ಸಂಘದ ಸದಸ್ಯರು ಹಾಕಿಕೊಂಡಿರುವ ಕ್ರಿಯಾ ಯೋಜನೆ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಗುರಿ ಸಾಧನೆಯ ಪ್ರಗತಿ ತಃಖ್ತೆಯನ್ನು ಈ ಕಛೇರಿಗೂ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಛೇರಿಗೂ ಸಲ್ಲಿಸುವಂತೆ ಸೂಚಿಸುತ್ತಾ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಂಘವನ್ನು ಪುನಃಶ್ಚೇತನಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ: ಡಿಆರ್:ಡಿವಿಜಿ/ಪುನಃಶ್ಚೇತನ/ಸಿಆರ್-16/2005-06, ದಿನಾಂಕ:3ನೇ ಏಪ್ರಿಲ್, 2009

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(3) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ:69:ಸಿಎಲ್ಎಂ.2001 ದಿನಾಂಕ:21.11.2001 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಬಿ. ಕುಬೇರಪ್ಪ, ಕೆ.ಸಿ.ಎಸ್. ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಆದ ನಾನು ಸಮಾಪನೆಗೊಂಡಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿವಿಧೋದ್ದೇಶ ಕೈಗಾರಿಕೆ ಮತ್ತು ನೇಕಾರರ ಸೇವಾ ಸಹಕಾರ ಸಂಘ ನಿ., ಸಾರಥಿ ತಾ: ಚನ್ನಗಿರಿ ಇದರ ಉಲ್ಲೇಖ (1)ರ ಸಮಾಪನಾ ಆದೇಶವನ್ನು ರದ್ದುಗೊಳಿಸಿ ಈ ಸಂಘವನ್ನು ಮುಂದುವರಿಸಿಕೊಂಡು ಹೋಗಲು ಅವಕಾಶ ನೀಡುತ್ತಾ ಈ ಮೂಲಕ ಸಂಘವನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಪುನಃಶ್ಚೇತನಕ್ಕಾಗಿ ಆದೇಶಿಸಿರುತ್ತೇನೆ.

ಷರತ್ತುಗಳು:

1) ಪುನಃಶ್ಚೇತನಗೊಂಡ 6 ತಿಂಗಳ ಒಳಗಾಗಿ ಲೆಕ್ಕಪರಿಶೋಧನೆ ಮಾಡಿಸಿ ಸದರಿ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.

2) ಕ್ರಿಯಾಯೋಜನಾ ರೀತ್ಯಾ ಕಾರ್ಯಕ್ರಮ ಹಮ್ಮಿಕೊಂಡು ಪ್ರಗತಿ ಸಾಧಿಸುವುದು.

3) ಡಿ.ಡಿ.ಸಿ.ಸಿ. ಬ್ಯಾಂಕ್ ನೊಂದಿಗೆ ವ್ಯವಹಾರ ಮಾಡತಕ್ಕದ್ದು.

ಒಂದು ವೇಳೆ ಷರತ್ತಿಗನುಗುಣವಾಗಿ 6 ತಿಂಗಳ ನಂತರ ಯಾವುದೇ ಪ್ರಗತಿ ಸಾಧಿಸದಿದ್ದಲ್ಲಿ ಸಂಘವನ್ನು ನೇರವಾಗಿ ಸಮಾಪನೆಗೊಳಿಸಲಾಗುವುದು.

ಸಂಘದ ಪ್ರಥಮ ಮಹಾಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಜರುಗಿಸಲು ಸಂಘದ ಸಮಾಪನಾಧಿಕಾರಿಗೆ ಸೂಚಿಸಿದೆ. ಹಾಗೂ ನೂತನ ಆಡಳಿತ ಮಂಡಳಿಯನ್ನು ರಚಿಸಲು ಸಹಕಾರ

ಅಭಿವೃದ್ಧಿ ಅಧಿಕಾರಿ ಚನ್ನಗಿರಿ, ಇವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತೇನೆ. ಚುನಾವಣಾಧಿಕಾರಿಗಳು, ಚುನಾವಣಾ ಕಾರ್ಯವನ್ನು ಜರುಗಿಸಿ ಹಾಗೂ ಮಹಾಸಭೆಯಲ್ಲಿ ಹಾಜರಾಗಿ ಈ ಕಛೇರಿಗೆ ವರದಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿನಾಂಕ:03.04.2009 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪ ನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿ.ಆರ್.352

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರ ಕಾರ್ಯಾಲಯ, ಬೆಂಗಳೂರು ಪ್ರಾಂತ, ಚಾಮರಾಜಪೇಟೆ, ಬೆಂಗಳೂರು–18

ಸಂ.ಜೆಆರ್‌ಬಿ/ಎಲ್‌ಕ್ಯೂಡಿ/35/ಎಲ್‌ಎಂಸಿ/03–04, ದಿನಾಂಕ:31ನೇ ಮಾರ್ಚ್, 2009

ವಿಷಯ: ಸಮಾಪನೆಯಲ್ಲಿರುವ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನೌಕರರ ಪತ್ತಿನ ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು ಈ ಸಂಘದ ನೋಂದಣಿ ರದ್ಧತಿ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಸಮಾಪನಾ ಆದೇಶ ಸಂಖ್ಯೆ: ಜೆಆರ್‌ಬಿ/ ಎಲ್‌ಕ್ಯೂಡಿ/35/ಎಲ್‌ಎಂಸಿ/2003–04, ದಿನಾಂಕ:23.01.2004.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು ಒಂದನೇ ವಲಯ, ಬೆಂಗಳೂರು ಇವರ ಪತ್ರದ ಸಂಖ್ಯೆ:ಸನಿ–44/ಸಮಾಪನೆ–30/2008–09, ದಿನಾಂಕ:11.11.2008.

ಪ್ರಸ್ತಾವನೆ:

ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನೌಕರರ ಪತ್ತಿನ ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು ಈ ಸಂಘದ ನೊಂದಣಿ ಸಂಖ್ಯೆ: ಜೆಆರ್‌ಬಿ/ಆರ್‌ಎಸ್‌ಆರ್/35/ ಆರ್‌ಜಿಎನ್/2514–74, ದಿನಾಂಕ:28.01.1974 ರಂದು ನೋಂದಣಿಯಾಗಿದ್ದು, ನಂತರ ಈ ಕಛೇರಿಯ ಆದೇಶದ ಸಂಖ್ಯೆ: ಜೆಆರ್‌ಬಿ/ಎಲ್‌ಕ್ಯೂಡಿ/35/ಎಲ್‌ಎಂಸಿ/2003–04, ದಿನಾಂಕ:23.01.2004ರಂದು ಸಮಾಪನೆಗೊಂಡಿದ್ದು ಸಮಾಪನಾಧಿಕಾರಿಯಾಗಿ ಹಾಲಿ ಸಹಕಾರ ಸಂಘಗಳ ನಿರೀಕ್ಷಕರು, ದಕ್ಷಿಣ–1, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಬೆಂಗಳೂರು ಒಂದನೇ ವಲಯ, ಇವರು ಕಾರ್ಯನಿರ್ವಹಿಸುತ್ತಿರುತ್ತಾರೆ.

ಸಮಾಪನಾಧಿಕಾರಿಯವರ ವರದಿಯ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಇವರು ಸಂಘದ ನೋಂದಣಿಯನ್ನು ರದ್ದುಪಡಿಸುವಂತೆ ಕೋರಿರುತ್ತಾರೆ.

ಸಂಘದ ಆಸ್ತಿ–ಜವಾಬ್ದಾರಿಗಳ ಆಧ್ಯತಾ ಪಟ್ಟಿಯನ್ನು ಈ ಕಛೇರಿಯ ದಿನಾಂಕ:25.03.2004ರಂದು ಅನುಮೋದಿಸಿದ್ದು, ದಿನಾಂಕ:08.04.2008ರಂದು ಸಮಾಪನಾಧಿಕಾರಿಗಳ ಸಭೆಯಲ್ಲಿ, ಮಾನ್ಯ ಸಹಕಾರ ಸಂಘಗಳ ನಿಬಂಧಕರು ಸಮಾಪನೆಯಲ್ಲಿರುವ ಸಹಕಾರ ಸಂಘಗಳ ನೋಂದಣಿ ಸಂಖ್ಯೆ ರದ್ದುಪಡಿಸಲು ಕ್ರಮವಿಡುವಂತೆ ಆದೇಶಿಸಿರುವ ಹಿನ್ನೆಲೆಯಲ್ಲಿ ಸದರಿ ಸಂಘದ ನೋಂದಣಿಯನ್ನು ರದ್ದುಪಡಿಸುವುದು ಸೂಕ್ತವೆಂದು ಸಹಾಯಕ ನಿಬಂಧಕರು ತಿಳಿಸಿರುತ್ತಾರೆ.

ಸಂಘವು ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ ರೂ.1,11,313–40, ಬಿ.ಡಿ.ಸಿ.ಸಿ. ಬ್ಯಾಂಕ್ ಆಪದ್ಧನ ನಿಧಿ ಖಾತೆಯಿಂದ ರೂ.60,182–00 ಹಾಗೂ ರೂ.6,887–00 ಮತ್ತು ಬಿ.ಡಿ.ಸಿ.ಸಿ. ಬ್ಯಾಂಕ್ ಉಳಿತಾಯ ಖಾತೆ ರೂ.38,800–00, ಒಟ್ಟು ರೂ.2,17,182–40 ಹೊಂದಿದ್ದು ಸದರಿ ಮೊಬಲಗನ್ನು ಹೊಂದಿದ್ದ ಖಾತೆಗಳನ್ನು ಮುಕ್ತಾಯಗೊಳಿಸಿ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನಲ್ಲಿರುವ "ಸಹಕಾರ ಅಭಿವೃದ್ಧಿ ನಿಧಿ ಖಾತೆ ಸಂಖ್ಯೆ: 9368" ಗೆ ಹಣವನ್ನು ಜಮಾ ಮಾಡಿರುತ್ತಾರೆ.

ಸಂಘವು ಬಿ.ಡಿ.ಸಿ.ಸಿ. ಬ್ಯಾಂಕಿನಲ್ಲಿ ರೂ.56,000–00 ಮೊತ್ತ ಷೇರು ಹೊಂದಿದ್ದು ಪ್ರಸ್ತುತ ಬಿ.ಡಿ.ಸಿ.ಸಿ. ಬ್ಯಾಂಕ್ ರೆಗ್ಯೂಲೇಷನ್ ಕಾಯ್ದೆ ಕಲಂ 11(1)ರ ಮೇರೆಗೆ ಬ್ಯಾಂಕಿನ ಷೇರು ಮೌಲ್ಯ ಶೂನ್ಯವಾಗಿರುವುದರಿಂದ ಷೇರು ಮೊತ್ತ ಹಿಂದಿರುಗಿಸಲು ಸಾಧ್ಯವಿಲ್ಲವೆಂದು ದಿನಾಂಕ:31.10.2008ರಲ್ಲಿ ಬಿ.ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಲಿಖಿತ ಮಾಹಿತಿ ನೀಡಿರುವುದರಿಂದ ಈ ಮೊತ್ತವನ್ನು ಸಹಕಾರ ಅಭಿವೃದ್ಧಿ ನಿಧಿ ಖಾತೆಗೆ ವರ್ಗಾಯಿಸಲು ಅಸಾಧ್ಯವಾಗಿರುತ್ತದೆಂದು, ಇದರಿಂದ ಸಂಘದ ಆಸ್ತಿಯು ಶೂನ್ಯ (ಸೊನ್ನೆ) ಆಗಿರುತ್ತದೆಂದು ಸಹಾಯಕ ನಿಬಂಧಕರು ತಿಳಿಸಿರುತ್ತಾರೆ.

ಸಂಘವು ಸರ್ಕಾರದ ಸಾಲದ ಮೇಲಿನ ಬಡ್ಡಿ ರೂ.3,420–00 ನ್ನು ಚಲನ್ ಸಂಖ್ಯೆ:32 ಮತ್ತು ಬಾಕಿ ಇದ್ದ ಆಡಿಟ್ ಶುಲ್ಕ ರೂ.915–00 ಅನ್ನು ಚಲನ್ ಸಂಖ್ಯೆ:102ರಲ್ಲಿ ದಿನಾಂಕ:18.09.2008 ರಂದು ಸರ್ಕಾರಕ್ಕೆ ಪಾವತಿಸಿದ್ದು, ಇದರಿಂದ ಸಂಘದ ಜವಾಬ್ದಾರಿಯು ಶೂನ್ಯವಾಗಿರುತ್ತದೆ.

ಪ್ರಸ್ತುತ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಸಂಸ್ಥೆಯು ಮುಚ್ಚಲ್ಪಟ್ಟಿರುವುದರಿಂದ ಸಂಘದ ಸದಸ್ಯರ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಇದರಿಂದಾಗಿ ಸಂಘದ ಸುಸ್ತಿ ಸದಸ್ಯರಿಂದ ಬಾಕಿ ಮೊತ್ತ ವಸೂಲಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸಂಘದಲ್ಲಿ ಯಾವುದೇ ಆಸ್ತಿ ಇರುವುದಿಲ್ಲ.

ಸಂಘದ ಆಸ್ತಿ–ಜವಾಬ್ದಾರಿಗಳು ಖೈದೆಗೊಂಡಿರುವುದರಿಂದಲೂ ಸಂಘದ ಸದಸ್ಯರ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲದಿರುವುದರಿಂದಲೂ ಮತ್ತು ಸಂಘದ ಅಸ್ತಿತ್ವದಿಂದ ಯಾವುದೇ ಪ್ರಯೋಜನವಿಲ್ಲದಿರುವ ಕಾರಣ ಈ ಸಂಘದ ನೋಂದಣಿಯನ್ನು ರದ್ದುಪಡಿಸುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಕಾರಣಗಳಿಂದ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವರದಿಯ ಮೇರೆಗೆ ಈ ಸಂಘದಿಂದ ಯಾವುದೇ ಪ್ರಯೋಜನವಿಲ್ಲದಿರುವುದರಿಂದ ಸದರಿ ಸಂಘದ ನೋಂದಣಿಯನ್ನು ರದ್ದುಪಡಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/2001, ದಿನಾಂಕ:21.11.2001ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಆದ ನಾನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನೌಕರರ ಪತ್ತಿನ ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು ಈ ಸಂಘದ ನೋಂದಣಿ ಸಂಖ್ಯೆ: ಡಿಆರ್‌ಡಿ/ಎಸ್ಎಬಿ/ಆರ್‌ಸಿಎಸ್/7607/1981–82 ನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ಧುಪಡಿಸಿರುತ್ತೇನೆ. ಈ ದಿನದಿಂದ ಸದರಿ ಸಂಘವು ಕಾರ್ಪೋರೇಷನ್ ಬಾಡಿಯಾಗಿರುವ ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ.

ಈ ಆದೇಶವನ್ನು ನನ್ನ ಸ್ವಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:31.03.2009ರಂದು ನೀಡಿದೆ.

ಪಿ.ಆರ್.353 ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು.

ಶಿಕ್ಷಣ ಇಲಾಖೆ

ಅಧಿಸೂಚನೆ ಸಂಖ್ಯೆ: ಇಡಿ 104 ಡಿಪಿಐ 2008, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–ಬಿ ವೃಂದದ ಅಧಿಕಾರಿಗಳ ದಿ:27.09.2006ರ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 238 ಡಿಪಿಐ 99ಕ್ಕೆ ತಿದ್ದುಪಡಿ ಕುರಿತು.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 238 ಡಿಪಿಐ 99 ದಿನಾಂಕ: 27.09.06.

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಬಿ' ವೃಂದದ ಅಧಿಕಾರಿಗಳಾದ (ಬೋಧಕ) ಶ್ರೀ ರಾಮಣ್ಣನವರ್, ನಿವೃತ್ತ ಮುಖ್ಯ ಶಿಕ್ಷಕರು, ಕೋಳಿವಾಡ, ಹುಬ್ಬಳ್ಳಿ ತಾಲ್ಲೂಕು ಇವರು ಮಾನ್ಯ ಕೆ.ಎ.ಟಿ. ನ್ಯಾಯಾಲಯದಲ್ಲಿ ಅರ್ಜಿ ಸಂಖ್ಯೆ 413/03 ನ್ನು ಸಲ್ಲಿಸಿದ್ದು, ದಿನಾಂಕ:24.04.08ರಂದು ಅರ್ಜಿಯು ಇತ್ಯರ್ಥವಾಗಿರುತ್ತದೆ. ಶ್ರೀ ಪಿ.ಜಿ. ರಾಮಣ್ಣನವರ್ ಇವರ ಜೇಷ್ಠತಾ ಸಂಖ್ಯೆಯು 1748 ಆಗಿದ್ದು, ಇವರು ದಿನಾಂಕ: 30.11.92 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಇವರಿಗಿಂತ ಜೇಷ್ಟತೆಯಲ್ಲಿ ಕಿರಿಯರಾದ ಶ್ರೀಮತಿ ಕೆ. ವಿಜಯಲಕ್ಷ್ಮಿ, ಗ್ರೇಡ್–1 ಇವರ ಜೇಷ್ಠತಾ ಸಂಖ್ಯೆ–1758 ಆಗಿದ್ದು, ಇವರಿಗೆ ದಿನಾಂಕ: 29.10.96 ರಂದು ಸ್ಥಾನಪನ್ನ ಬಡ್ತಿಯನ್ನು ನೀಡಲಾಗಿದೆ. ದಿನಾಂಕ: 29.10.96 ರಂದು ಶ್ರೀ ಪಿ.ಜಿ. ರಾಮಣ್ಣನವರ್ ಇವರು ಸೇವೆಯಿಂದ ನಿವೃತ್ತಿ ಹೊಂದಿದ್ದರಿಂದ ಇವರಿಗೆ ಸ್ಥಾನಪನ್ನ ಬಡ್ತಿ ನೀಡಿರುವುದಿಲ್ಲ.

ದಿನಾಂಕ: 11.10.1984 ರಿಂದ 13.01.94ರವರೆಗಿನ ಅವಧಿಯಲ್ಲಿ ಬಡ್ತಿಗಾಗಿ ಉದ್ಭವವಾಗಿದ್ದ 662 ಹುದ್ದೆಗಳಲ್ಲಿ 542 ಹುದ್ದೆಗಳನ್ನು ಮಾತ್ರ ಬಡ್ತಿಗಾಗಿ ಉಪಯೋಗಿಸಿಕೊಂಡಿದ್ದರಿಂದ, ಉಳಿದ 120 ರಿಕ್ತಸ್ಥಾನಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 32 ರನ್ವಯ ಸ್ವತಂತ್ರ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬಡ್ತಿಯನ್ನು ಪಡೆದಿರುವ 120 ಮುಖ್ಯ ಶಿಕ್ಷಕರುಗಳಿಗೆ ದಿನಾಂಕ:27.09.2006 ರಲ್ಲಿ ಅರ್ಹತಾ ದಿನಾಂಕವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಈ ಅಧಿಸೂಚನೆಯಲ್ಲಿ ಶ್ರೀ ಪಿ.ಜಿ.ರಾಮಣ್ಣನವರ್ ರವರಿಗಿಂತ ಜೇಷ್ಟತೆಯಲ್ಲಿ ಕಿರಿಯರಾಗಿದ್ದು, ದಿನಾಂಕ: 29.10.96 ರಂದು ಸ್ಥಾನಪನ್ನ ಬಡ್ತಿಯನ್ನು ಪಡೆದಿರುವ ಶ್ರೀಮತಿ ಕೆ.ವಿಜಯಲಕ್ಷ್ಮಿ, ಗ್ರೇಡ್–1 ಜೇಷ್ಟತಾ ಸಂಖ್ಯೆ 1758, [ಎಸ್.ಸಿ.] ಇವರಿಗೆ ದಿನಾಂಕ: 31.03.88 ರಿಂದ ಅರ್ಹತಾ ದಿನಾಂಕ ನಿಗದಿಪಡಿಸಲಾಗಿದೆ. ಆದುದರಿಂದ ಶ್ರೀ ಪಿ.ಜಿ.ರಾಮಣ್ಣನವರ್ ಇವರು ದಿನಾಂಕ:31.03.88 ರಂದು ಸೇವೆಯಲ್ಲಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮ 32 ರಡಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಇವರಿಗೂ ಸಹ ದಿನಾಂಕ: 31.03.1988 ರಿಂದ ಅರ್ಹತಾ ದಿನಾಂಕವನ್ನು ನಿಗದಿಪಡಿಸಲು, ಸರ್ಕಾರದ ಅಧಿಸೂಚನೆ ಸಂಖ್ಯೆ. ಇಡಿ 238 ಡಿಪಿಐ 1999 ದಿನಾಂಕ: 27.09.06ರ ಅನುಬಂಧದಲ್ಲಿನ ಕ್ರಮ ಸಂಖ್ಯೆ. 583 ಮತ್ತು 584ರ ನಡುವೆ ಕೆಳಕಂಡಂತೆ ತಿದ್ದುಪಡಿ ಮಾಡಲು ಉದ್ದೇಶಿಸಿದೆ.

ಕ್ರ. ಸಂ.	ಘಟಕ	ಎಸ್.ಎಸ್.ಎ. ಗ್ರೆಡೇಶನ್ ಪಟ್ಟಿ ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು	ಹುಟ್ಟಿದ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಅರ್ಹತಾ ದಿನಾಂಕ
583ಎ	–	1748	ಪಿ.ಜಿ.ರಾಮಣ್ಣನವರ್	20.11.34	10.07.58	31.03.88

ಈ ತಿದ್ದುಪಡಿ ಜೇಷ್ಠತಾ ಪಟ್ಟಿಯಿಂದ ಭಾಧಿತರಾಗುವ ಅಧಿಕಾರಿಗಳ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 15 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001 ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಯಾವುದೇ ಆಕ್ಷೇಪಣೆ ನಿಗದಿತ ದಿನಾಂಕದೊಳಗೆ ತಲುಪದಿದ್ದಲ್ಲಿ, ಈ ಅಧಿಸೂಚನೆಯ ಜೇಷ್ಟತಾ ಪಟ್ಟಿಯನ್ನು ಅಂತಿಮ ಜೇಷ್ಟತಾ ಪಟ್ಟಿಯೆಂದು ಘೋಷಿಸಿ ಪ್ರಕಟಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 777 **ಹೆಚ್.ಟಿ. ಜಯರಾಂ**

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಅಧಿಸೂಚನೆ ಸಂಖ್ಯೆ: ಸಿಐ233 ಎಸ್‌ಪಿಕ್ಯೂ2008, ದಿನಾಂಕ:21ನೇ ಜುಲೈ, 2009

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮೆ: ಎಂ.ಆರ್.ಪಿ.ಎಲ್. ಸಂಸ್ಥೆ ಸ್ಥಾಪಿಸುವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬೇಕಾಗಿದೆ.

1968ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(1) (1968ರ 18ನೇ ನಂ. ಕಾಯ್ದೆಯ) ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ ಸದರಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ ಈ ನೋಟೀಸು ಪ್ರಕಟಿಸಲಾಗಿದೆ.

ಮೇಲ್ಕಂಡ ಕಾಯ್ದೆಯ ವಿಧಿ 35ರ ಮೇರೆಗೆ ಕೆಲಸ ನಿರ್ವಹಿಸಲು ಈ ಜಮೀನುಗಳಿಗೆ ಪ್ರವೇಶಿಸುವ ಯಾವುದೇ ವ್ಯಕ್ತಿಯನ್ನು ತಡೆಯುವುದಾಗಲೀ ಅಥವಾ ಅಡ್ಡಿಪಡಿಸುವುದಾಗಲೀ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೂ ಈ ಮೂಲಕ ಎಚ್ಚರಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯಾಗಿರುವ ತಾರೀಖಿನ ನಂತರ ಬೆಂಗಳೂರು ವಿಭಾಗದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿಯವರ ಅನುಮತಿಯಿಲ್ಲದೆ ಸದರಿ ಜಮೀನುಗಳನ್ನು ವಿಲೆ ಮಾಡುವ ಒಪ್ಪಂದ ಕ್ರಯ, ಭೋಗ್ಯ, ಲೀಸ್, ಅದಲು–ಬದಲು ವಗೈರೆ ಮಾಡುವಂತಿಲ್ಲ ಮತ್ತು ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ ಒಂದು ವೇಳೆ ಮಾಡಿದ್ದರೂ 1894ರ ಭೂಸ್ವಾಧೀನ ಕಾಯ್ದೆ ವಿಧಿ (ನಿಯಮ 7) ಕರ್ನಾಟಕ ತಿದ್ದುಪಡಿ ಮಾಡಿರುವ ಕಾಯ್ದೆ 17:1961 ಮತ್ತು 1968ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30ನ್ನು ಓದಿಕೊಳ್ಳುವ ಮೇರೆಗೆ ಪರಿಹಾರಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಮತ್ತು ಅಂತಿಮವಾಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು.

ಈ ಜಮೀನುಗಳ ಒಂದು ನಕ್ಷೆಯನ್ನು ಬೆಂಗಳೂರು ವಿಭಾಗದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

ಗ್ರಾಮ: ದೊಡ್ಡದಾಸರಹಳ್ಳಿ **ಹೋಬಳಿ: ಜಡಿಗೇನಹಳ್ಳಿ** **ತಾಲ್ಲೂಕು: ಹೊಸಕೋಟೆ** **ಜಿಲ್ಲೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ**

			ಸ್ವಾಧೀನಪಡಿಸಿಕೊಳ್ಳುವ ಜಮೀನುಗಳ ವಿವರ						ಚಕ್ಕುಬಂದಿ			
ಕ್ರ ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ವಿಸ್ತೀರ್ಣ ಐನ್ ಎ–ಗು	ಖರಾಬು ಎ–ಗು	ಬಾಕಿ ಎ–ಗು	ಆಕಾರ ರೂ.	ತರಹೆ	ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.
1.	ಸುಬ್ಬಣ್ಣ ಬಿನ್ ಚಿಕ್ಕರಾಮಯ್ಯ, ರಾಜಪ್ಪ ಬಿನ್ ವೆಂಕಟಪ್ಪ, ಅನಂತಾಚಾರಿ ಬಿನ್ ಶಂಕರಾಚಾರಿ, ಕೃಷ್ಣಪ್ಪ ಬಿನ್ ಮುನಿಯಪ್ಪ, ಜಯಮ್ಮ ಕೋಂ ಶ್ಯಾಮಣ್ಣ, ಶ್ರೀನಿವಾಸಪ್ಪ ಬಿನ್ ಚೆನ್ನಮುನಿಯಪ್ಪ ವೆಂಕಟಪ್ಪ ಬಿನ್ ಮರಿಯಪ್ಪ ಕೃಷ್ಣಪ್ಪ ಬಿನ್ ಹಾಲುಮುನಿಸ್ವಾಮಿ ಮುನಿರಾಜ ಬಿನ್ ಬಚ್ಚಪ್ಪ	ಸುಬ್ಬಣ್ಣ ರಾಜಪ್ಪ ಅನಂತಾಚಾರಿ, ಕೃಷ್ಣಪ್ಪ ಜಯಮ್ಮ, ಶ್ರೀನಿವಾಸಪ್ಪ ವೆಂಕಟಪ್ಪ ಕೃಷ್ಣಪ್ಪ, ಮುನಿರಾಜ	**85**	6–00	6–00	–	–	–	ತರಬಹಳ್ಳಿ ಗಡಿ	85ರ ಉಳಿಕೆ	135 136 137	85ರ ಉಳಿಕೆ
			ಒಟ್ಟು	**6–00**	**6–00**	**–**						

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.678

ಕೆ.ಎಂ. ವೀರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಕೈಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.